Financial Business

Voting of Demands for grants for the year 1983-84

MR. SPEAKER.—Now we will take up Financial Business i.e. Further disccssion and voting on Demands for Grants for the year 1983-84. ಈಗಾಗಲೇ ೯ ಜನ ಸದಸ್ಯರು ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷ ೭೯ ನಿಮಿಷ ಬಿಜೆಪಿ ೪೧ ನಿಮಿಷ, ಸಿಪಿಐ ೧೧ ನಿಮಿಷ, ಇಂಡಿಪೆಂಡೆಂಟ್ ೮ ನಿಮಿಷ, ಜನತಾ ೨೩ ನಿಮಿಷ ತೆಗೆದುಕೊಂಡಿದೆ. ಮಾನ್ಯ ಮಂತ್ರಿಗಳು ಮೂರೂವರೆ ಗಂಟೆಗೆ ಉತ್ತರ ಕೊಡುತ್ತಾರೆ. ಅಷ್ಟು ಸಮಯದಲ್ಲಿ ಎಷ್ಟು ಜನ ಸದಸ್ಯರು ಮಾತನಾಡಲಿಕ್ಕೆ ಸಾಧ್ಯವೋ ಅಷ್ಟು ಜನರು ತಾವೇ ಸಮಯವನ್ನು ಸೀಮಿತ ಮಾಡಿಕೊಂಡು ಮಾತನಾಡಬೇಕು. I request the hon. members to be precise in their speeches.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಿದ್ದರ ಬಗ್ಗೆ ನಾನು ನೋಟ್ ಮಾಡಿಕೊಳ್ಳುತ್ತಿರುತ್ತೇನೆ

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಮಂತ್ರಿಗಳಾಗಿ ಕೆಲಸ ಮಾಡಿದವರು ಎಲ್ಲಾ ಅನುಭವ ಇದೆ, ಒಂದೊಂದು ಸಾರಿ ಬಹಳ ಅವಸರವಾಗಿ ಎದ್ದು ಬಿಡುತ್ತಾರೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ(ಸಾಗರ),—ಮಾನ್ಯ ಸಭಾಪತಿಯವರೆ, ಈ ಬೇಡಿಕೆಗಳ ಮೇಲಿನ ಚರ್ಚೆಯನ್ನು ಆರಂಭಿಸುತ್ತಾ ಬಹಳ ದೊಡ್ಡ ಆಶೋತ್ತರಗಳನ್ನು ರಾಜ್ಯದ ಜನತೆಯಲ್ಲಿ ಪ್ರಚೋದಿಸಿ ಇವತ್ತು ಅಧಿಕಾರಕ್ಕೆ ಬಂದಿದ್ದರೂ ಜನತೆ ಅದನ್ನು ನಿರಾಸೆಗೊಳ್ಳುವಂತೆ ಮಾಡಿ ಈ ಸರ್ಕಾರ ಸಂಪೂರ್ಣ ವಿಫಲಗೊಂಡಿದೆ ಎಂದು ನಾನು ಹೇಳದೇ ವಿಧಿಯಿಲ್ಲ.

ಈ ಗ್ರಾಮೀಣ ಅಬಿವೃದ್ಧಿ ವಿಚಾರವನ್ನು ತೆಗೆದುಕೊಂಡರೆ, ಇದು ಜನತೆಗೆ ನೇರವಾಗಿ ಸಂಬಂಧಪಟ್ಟಿದ್ದು. ಗ್ರಾಮೀಣ ಪ್ರದೇಶದಲ್ಲಿರತಕ್ಕ ೭೫ ಪರ್ಸೆಂಟ್ ಜನರಿಗೆ ಸಂಬಂಧಪಟ್ಟ ವಿಚಾರ. ನಮ್ಮದು ಜನತೆಗೆ ಹತ್ತಿರವಾದ ಸರ್ಕಾರ, ರೈತರಿಗೆ ಹತ್ತಿರವಾದ ಸರ್ಕಾರ, ನಾವು ನಿಮಗೆ ಎಲ್ಲಾ ಅನುಕೂಲಗಳನ್ನು ತೆರೆದ ಮನಸ್ಸಿನಿಂದ ಮಾಡುತ್ತೇವೆಂದು ಹೇಳಿಕೊಂಡು ಈ ಸರ್ಕಾರ ಏನು ಮಾಡಿದ್ದಾರೆಂದು ನಾನು ಈ ಪುಸ್ತಕವನ್ನೆಲ್ಲ ಪೂರ್ತಿಯಾಗಿ ತಿರುವಿ ಹಾಕಿ ನೋಡಿದೆ. ಇದರಲ್ಲಿ ಕಾಣುತ್ತಿರುವುದು ಕೇವಲ ಹಿಂದಿನ ಸರ್ಕಾರದ ಸಾಧನೆಯೇ ಹೊರತು ಈ ಸರ್ಕಾರ ಏನು ಸಾದನೆ ಮಾಡಿದೆ ಎಂಬುದು ಎಲ್ಲೂ ಕಂಡುಬರುವುದಿಲ್ಲ. ಅಂತ್ಯೋದಯ ಯೋಜನೆಯೊಂದನ್ನು ಹೊಸದಾಗಿ ನಾವು ಪ್ರಾರಂಭ ಮಾಡುತ್ತೇವೆ. ಎಂಬುದನ್ನು ಒಂದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದೆಲ್ಲಾ ಹೊಸದೇನೂ ಇಲ್ಲ ಎನ್ನುವ ಬಗ್ಗೆ ಆ ಮೇಲೆ ಹೇಳುತ್ತೇನೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಗ್ರಾಮೀಣ ಪ್ರದೇಶದ ಜನರಿಗೆ ಹತ್ತಿರವಾಗಿದ್ದೇವೆಂದು ಹೇಳುವಂಥ ಸರ್ಕಾರದವರು ಅದನ್ನು ಸ್ಪಷ್ಟವಾಗಿ ಅವರ ಕಾರ್ಯನೀತಿಯಿಂದ ಜನಸಾಮಾನ್ಯರು ತೋರಿಸಕೊಡಬೇಕು. ಅವರ ಬಗ್ಗೆ ಅಭಿಮಾನ ಅನುಕಂಪ ಇದೆ ಎಂದು ಹೇಳಿಕೊಂಡು ಸರ್ಕಾರದ ಕಾರ್ಯನೀತಿಯನ್ನು ರೂಪಿಸುವ ಈ ಪುಸ್ತಕದಲ್ಲಿ ಆ ದಿಕ್ಕಿನ ಯೋಜನೆಗಳು ಏನೂ ಕಾಣುತ್ತಿಲ್ಲ ಅದರ ಬದಲು ನಮ್ಮ ಹಿಂದಿನ ಸರ್ಕಾರ ಈ ವಿಚಾರದಲ್ಲಿ ಬಹಳಷ್ಟು ಸಾದನೆಯನ್ನು ಮಾಡಿತ್ತು ಎಂಬುದನ್ನು ತಾವು ಇಲ್ಲಿ ಕಾಣಬಹುದು. ೧೯೭೮ರಲ್ಲಿ ಸಣ್ಣ ರೈತರ ಅಭಿವೃದ್ಧಿಗೆ ಪ್ರಪ್ರಥಮವಾಗಿ ಕಾರ್ಯಕ್ರಮ ರೂಪಿಸಿದ ಹಿಂದಿನ ನಮ್ಮ ಸರ್ಕಾರ. ೧೯೮೦ರ ಅಕ್ಟೋಬರ್‌ನಲ್ಲಿ ಇಡೀ ರಾಜ್ಯಕ್ಕೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ತಂದು ಬಡತನ ರೇಖೆಯಿಂದ ಕೆಳಗಿರತಕ್ಕ ದುರ್ಬಲವರ್ಗದರಿಗೆ ಉದ್ಯೋಗವಕಾಶವನ್ನು ನೀಡಿ ಸಾಮಾಜಿಕವಾಗಿ ಸಮಾನತೆಯನ್ನು ಕಲ್ಪಿಸಿಕೊಟ್ಟು ಅವರನ್ನು ಮೇಲಕ್ಕೆ ಎತ್ತಬೇಕೆಂದು ಮಾಡಿದ್ದು ಹಿಂದು ದೊಡ್ಡ ಸಾಧನೆ. ಕೂಲಿಗಾಗಿ ಕಾಳು ಯೋಜನೆ, ಗ್ರಾಮೀಣ ಉದ್ಯೋಗ ಯೋಜನೆ, ಬರಗಾಲ ಪೀಡಿತ ಕಾರ್ಯಕ್ರಮ ಮತ್ತು ಅದರಲ್ಲೇ ಕೂಡ ಮೂಲಭೂತವಾದ ಸೌಲಭ್ಯಗಳನ್ನು ಒದಗಿಸಿಕೊಡುವ ವಿಚಾರದಲ್ಲೂ ನಮ್ಮ ಹಿಂದಿನ ಸರ್ಕಾರ ಸಾದನೆಯಾಗಿದೆ, ಅದರಲ್ಲಿ ಸಾಮಾಜಿಕ ನ್ಯಾಯವನ್ನು ಬಡ ಜನತೆಗೆ ಕೊಡಬೇಕಾದರೆ ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ಸಮರ್ಥ ಕಾರ್ಯಗೊಳಿಸುವುದರಿಂದ ಇನ್ನು ಯಾವದೇ

ರೀತಿಯಲ್ಲೂ ಈ ಗ್ರಾಮಾಂತರ ಪ್ರದೇಶದ ಮೂಕ ಜನರಿಗೆ ಅನುಕೂಲಗಳನ್ನು ಮಾಡಿ ಕೊಡಲು ಸಾಧ್ಯವಿಲ್ಲ. ಈ ಯೋಜನೆ ರೈತರ ದುರ್ಬಲರ ಪಾಲಿಗೆ ಒಂದು ವರದಾನವಾಗಿತ್ತು, ೧೯೮೨–೮೩ ರಲ್ಲಿ ಗುರಿ ಸಾದನೆ ಇಟ್ಟುಕೊಂಡಿದ್ದು ೧.೫ ಲಕ್ಷ ಕುಟುಂಬಗಳಿಗೆ ಅನುಕೂಲಗಳನ್ನು ಒದಗಿಸಿಕೊಡಬೇಕೆಂಬುದು, ಆದರೆ ಗುರಿ ಸಾದನೆ ಮಾಡಿದ್ದು ೧.೭೮,೮೫೯ ಕುಟುಂಬಗಳಿಗೆ ಸೌಲಭ್ಯವನ್ನು ಒದಗಿಸಿ ಕೊಟ್ಟಿದ್ದು. ಸ್ವಾಮಿ, ನಾನು ಕೇಳುತ್ತೇನೆ, ಏಪ್ರಿಲ್ ತಿಂಗಳ ನಂತರ ಎಷ್ಟು ಜನರಿಗೆ ಈ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ ? ತಾವು ಆಗಾಗ ಹೇಳುತ್ತಿರುತ್ತೀರಿ, ಹಿಂದಿನ ಸರ್ಕಾರದ ಒಳ್ಳೆಯ ಯೋಜನೆಗಳನ್ನು ಯಾವುದನ್ನು ನಾವು ನಿಲ್ಲಿಸುವುದಿಲ್ಲ. ಅವುಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಹೊಸ ಯೋಜನೆಗಳನ್ನು ರೂಪಿಸುತ್ತೇವೆಂದು ಹೇಳಿದ್ದೀರಿ. ಇವತ್ತಿನವರೆಗೂ ಒಬ್ಬರಿಗೂ ಕೂಡ ಏಪ್ರಿಲ್ ನಂತರ ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಸಹಾಯಧನವನ್ನು ಕೊಟ್ಟಿಲ್ಲ. ನಮ್ಮ ಹಿಂದಿನ ಸರ್ಕಾರ ಆಗಸ್ಟ್ ತಿಂಗಳ ಹೊತ್ತಿಗೆ ಆಯಾವರ್ಷದ ಕಾರ್ಯಕ್ರಮಗಳನ್ನು ರೂಪಿಸಿತ್ತು, ಆ ಕೂಡಲೇ ಹೆಚ್ಚು ಭಾಗ ಹಣವನ್ನೂ ಕೊಟ್ಟಿತ್ತು. ಆದ್ದರಿಂದ ಗುರಿ ಸಾಧನೆ ನೂರಕ್ಕೆ ನೂರ ಇಪ್ಪತ್ತರಷ್ಟು ಆಗ ಆಗಿದೆ. ಈ ವರ್ಷ ನಾವು ನೂರಕ್ಕೆ ಇನ್ನೂರರಷ್ಟು ಮಾಡಿದ್ದೇವೆಂದು ಹೇಳಿದ್ದರೆ ನಿಜವಾಗಿ ಈ ಸರ್ಕಾರ ರೈತರ ಹತ್ತಿರದ ಸರ್ಕಾರ ಎಂದು ನಾನು ಒಪ್ಪಿಕೊಳ್ಳುತ್ತಿದ್ದೆ. ಇವತ್ತು ನಾನು ಬೇಕಾದರೆ ಇವರನ್ನು ಹೊಗಳಿ ಹೋಗಲು ಸಿದ್ಧನಿದ್ದೆ ಆದರೆ ಒಳ್ಳೆಯ ಕಾರ್ಯಕ್ರಮಗಳನ್ನು ನಿಧಾನ ಮಾಡಿ ನಾಳೆ ದಿವಸ ಇವರು ರೈತರ ಬೆಂಬಲವನ್ನು ಕಳೆದುಕೊಳ್ಳುತ್ತಾರೆ ನಾನು ರೈತರ ಪ್ರತಿನಿಧಿಯಾಗಿರುವುದರಿಂದ ಸರ್ಕಾರದವರು ರೈತರ ಕಳಕಳಿಯನ್ನು ಅರ್ಥಮಾಡಿಕೊಳ್ಳಬೇಕೆಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ,

ಇನ್ನು ಅಂತ್ಯೋದಯ ಯೋಜನೆಯನ್ನು ನಾವು ಹೊಸದಾಗಿ ಕೊಟ್ಟಿದ್ದೇವೆ. ಎಂದು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯಿಸುವುದಿಷ್ಟೆ, ಹಿಂದೆ ಏನು ಯೋಜನೆ ಇತ್ತು, ಅದನ್ನು ಸಮಗ್ರವಾಗಿ ಬೆಳಸಿಕೊಂಡು ಗುರಿ ತಲುಪಿಸಿ ಅನಂತರ ಹೊಸಯೋಜನೆಯನ್ನು ಕೊಡಬಹುದಿತ್ತು ಕ್ಲಸ್ಟರ್ ವಿಲೇಜ್‌ಗಳನ್ನು ಆರಿಸಿಕೊಂಡು ಸದ್ರಿಹಳ್ಳಿಗಳಲ್ಲಿ ಪ್ರಯೋಜನದಾರರನ್ನು ಆಯ್ಕೆಮಾಡಿ ಒಂದು ತಾಲ್ಲೂಕಿಗೆ ೬೦೦ ಜನರಿಗೆ ಕಡಿಮೆ ಇಲ್ಲದಂತೆ ಬಡತನದ ರೇಖೆಯಿಂದ ಕೆಳಗಿರುವವರನ್ನು ಗುರ್ತಿಸಿ ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಅವರನ್ನು ಮೇಲಕ್ಕೆ ಎತ್ತುವ ಕಾರ್ಯವನ್ನು ನಮ್ಮ ಹಿಂದಿನ ಸರ್ಕಾರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಜಾರಿಗೆ ತಂದು. ಇವರು ಇಂಥ ಕಾರ್ಯಕ್ರಮ ನಿಧಾನ ಮಾಡಿ ಹೊಸದಾಗಿ ಅಂತ್ಯೋದಯವನ್ನು ತಂದಿದ್ದಾರೆ ? ಅಂತ್ಯೋದಯ ಎಂದರೆ ಬಹುಶಃ ಇವರು ಅರ್ಥಪ್ರಗತಿಯಲ್ಲಿ ಅಂತ್ಯ ಅಭಿವೃದ್ಧಿ ಬಾಗ್ಯೋದಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಇವರು ಅಂತ್ಯೋದಯ ಕಾರ್ಯಕ್ರಮದಲ್ಲಿ ಹೊಸದಾಗಿ ಏನು ತರುತ್ತಾರೆಂದು ನೋಡಿದರೆ ೪ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಬೇಕೆಂದು ಹೇಳಿದ್ದಾರೆ. ಇದರಲ್ಲಿ ವೃದ್ಧಾಪ್ಯವೇತನ ಮತ್ತು ಅಂಗವಿಕಲರ ವೇತನ ಏನಿದೆ ಇದನ್ನು ನಾವು ಹಿಂದಿನಿಂದಲೂ ಕೊಟ್ಟುಕೊಂಡು ಬಂದಿದ್ದೇವೆ. ಇದಕ್ಕಾಗಿ ಹೊಸದಾದ ಅಂತ್ಯೋದಯ ಯೋಜನೆ ಬೇಕಾಗಿರಲಿಲ್ಲ.

ಇನ್ನು ಭೂಮಿ ಹಂಚಿಕೆಯಲ್ಲಿ ವಿಚಾರವನ್ನು ತೆಗೆದುಕೊಂಡರೆ, ತಮಗೆ ಗೊತ್ತಿರುವಂತೆ ಹೊಸದಾಗಿ ಒಂದು ಅಂಗುಲ ಭೂಮಿಯನ್ನೂ ಕೊಡುವ ಮನಸ್ಸನ್ನು ಈ ಸರ್ಕಾರ ತೋರಿಸಿಲ್ಲ. ಉದ್ಯೋಗ ಯೋಜನೆ ಮತ್ತು ಸಾಲ ಸೌಲಭ್ಯ ಯೋಜನೆಗಳನ್ನು ನಮ್ಮ ಸರ್ಕಾರದವರು ತಂದು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಅಗತ್ಯ ಕಾರ್ಯಕ್ರಮ ಆಗಿದ್ದವು. ಇದನ್ನೇ ಮುಂದುವರಿಸಿಕೊಂಡು ಹೋದರೆ ಸಾಕು ಇರುವ ಕಾರ್ಯಕ್ರಮ ಕೈ ಬಿಟ್ಟು ಪ್ರಚಾರಕ್ಕಾಗಿ ಇನ್ನು ಯಾವುದೇ ಹೊಸ ಕಾರ್ಯಕ್ರಮ ಬೇಕಾಗಿಲ್ಲ. ಕಳೆದ ಸಾರಿ ನಮ್ಮ ಗುರಿ ೧.೫ ಲಕ್ಷ ಜನರಿಗೆ ಇದರ ಸೌಲಭ್ಯವನ್ನು ತಲುಪಿಸಬೇಕೆಂದಿದ್ದರೆ ಸಾಧನೆ ಮಾಡಿರುವುದು ೧.೭೮ ಲಕ್ಷ ಜನರಿಗೆ ತಲುಪಿಸಿರುವುದು ಈಗ ನಾವು ಇದನ್ನು ೨ ಲಕ್ಷ ಜನರಿಗೆ ತಲುಪಿಸುತ್ತೇವೆಂದು ಇವರು ಹೇಳಿದರೆ ನಾವು ಸಂತೋಷಪಡುತ್ತೇವೆ. ಇವರ ಇವತ್ತಿನ ಅಂತ್ಯೋದಯ ಯೋಜನೆ ಏನಿದೆ ಸದ್ರಿಕಾರ್ಯಕ್ರಮಗಳು ನಮ್ಮ ಹಿಂದಿನ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಇದೆ. ಈಗ ನೇಗಿಲಭಾಗ್ಯ ಯೋಜನೆ, ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮ, ಉದ್ಯೋಗ ದೃಡೀಕರಣ ಯೋಜನೆ ಇವುಗಳನ್ನೆಲ್ಲಾ ಸಂಕುಚಿತಗೊಳಿಸಿ ನಾವು ಒಂದು ಹೊಸ ಯೋಜನೆಯನ್ನು ತರುತ್ತೇವೆಂದು ಪ್ರಚಾರ ಉದ್ದೇಶಕ್ಕಾಗಿ ಮಾತ್ರ ಠಿಣಾಕಿ ಠಿಣಿಕಿ ಅಂತ್ಯೋದಯ ಯೋಜನೆ ರೂಪಿಸಿದ್ದಾರೆ. ಅಷ್ಟೆ ಹೊರೆತು ಇವರು ಜನತೆಯ ಮೇಲೆ

ಕಳಕಳಿಯನಿಟ್ಟು ಯಾವ ಹೊಸ ಯೋಜನೆಯನ್ನು ತಂದಿಲ್ಲ. ನೇಗಿಲ ಭಾಗ್ಯ ಯೋಜನೆಯ ಬಗ್ಗೆ ಹೇಳುವುದಾದರೆ, ೮೨-೮೩ರಲ್ಲಿ ನಮ್ಮ ಹಿಂದಿನ ಸರ್ಕಾರ ಒಂದು ಕೋಟಿ ರೂಪಾಯಿ ಇಟ್ಟಿತ್ತು ಅದರಲ್ಲಿ ಇವರು ಖರ್ಚುಮಾಡಿರುವುದು ೨೨ಲಕ್ಷ ರೂಪಾಯಿಗಳು ಉಳಿದುದನ್ನು ಖರ್ಚುಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ನೇಗಿಲ ಭಾಗ್ಯ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳುವವರು ಇರಲಿಲ್ಲವೆ ಎಂದರೆ ಇದ್ದರು. ಆದರೆ ಇದನ್ನು ಅವರಿಗೆ ತಲುಪಿಸುವ ಕಾರ್ಯನೀತಿ ಕಳಕಳಿ ಮತ್ತು ಉದ್ದೇಶಶುದ್ಧಿ ಇವರಿಗೆ ಇರಲಿಲ್ಲವೆಂದು ಹೇಳ ಬೇಕಾಗಿದೆ. ಹಿಂದಿನ ಸರ್ಕಾರದವರು ಏನು ಕೆಲಸ ಮಾಡಿದ್ದಾರೆ ಅದರಲ್ಲಿ ೨೫ ಭಾಗ ಕೂಡ ಮಾಡಿಲ್ಲ. ಇನ್ನು ಮುಂದಾದರೂ ಇವರು ಮಾಡಲಿ. ಈ ವರ್ಷ ಇವರು ಎಷ್ಟು ಮನಸ್ಸು ಮಾಡಿದ್ದಾರೆಂದರೆ ಕಳೆದಸಾರಿ ಒಂದು ಕೋಟಿ ರೂಪಾಯಿ ಇಟ್ಟಿದ್ದ ನೇಗಿಲ ಭಾಗ್ಯ ಯೋಜನೆ ಕೇವಲ ೫೦ ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದಾರೆ ಅಂದರೆ ಗ್ರಾಮೀಣ ಪ್ರದೇಶದ ಜನರ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಕಳೆದ ಸಾರಿ ೨೬.೧೬ ಕೋಟಿ ರೂಪಾಯಿ ಖರ್ಚುಮಾಡಿದರೆ ಈ ಸರ್ಕಾರ ಈ ಕೆಲಸಕ್ಕೋಸ್ಕರ ಒದಗಿಸಿರತಕ್ಕ ಹಣ ಕೇವಲ ೨೦ ಕೋಟಿ ರೂಪಾಯಿ ಇದರಲ್ಲೂ ಕೂಡ ಗ್ರಾಮೀಣ ಪ್ರದೇಶದ ಜನರ ಬಗ್ಗೆ ಈ ಸರ್ಕಾರ ನಿರ್ಲಕ್ಷವನ್ನು ತೋರಿಸಿದೆ. ಇವರಿಗೆ ನಿಜವಾಗಿಯೂ ಅವರ ಬಗ್ಗೆ ಕಳಕಳಿ ಇಲ್ಲವೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಈಗ ಮತ್ತೊಂದು ಮುಖ್ಯವಾದ ವಿಷಯಕ್ಕೆ ಬರತಕ್ಕಂಥದ್ದು ಎಂದರೆ ಉರವಲ ಕಟ್ಟಿಗೆ. ಈ ಉರವಲ ಕಟ್ಟಿಗೆಗೆ ಎಷ್ಟೊಂದು ಅಭಾವವೆಂದರೆ ಮಲೆನಾಡು ಪ್ರದೇಶಗಳಲ್ಲಿರುವವಷ್ಟೇ ಅಲ್ಲ. ಎಲ್ಲ ಪ್ರದೇಶಗಳವರೂ ಕೂಡ ಯೋಚನೆ ಮಾಡಬೇಕಾದ ವಿಷಯವಾಗಿರುತ್ತದೆ. ಕೇಂದ್ರ ಸರ್ಕಾರವೂ ಕೂಡ ೫ ಸಾವಿರ ಅನಿಲ ಘಟಕಗಳಿಗೆ ಈ ಮೇಲೆ ರೂಪಿಸಲಾದ ಘಟಕಕ್ಕೆ ೨೦ ಸಾವಿರ ರೂಪಾಯಿಗಳ ಖರ್ಚು ಅಗತ್ಯ. ಸಹಾಯಧನ ನೀಡಿ ಘಟಕ ಸ್ಥಾಪನೆಗ ಉತ್ತೇಜನ ನೀಡಲು ಆಶಿಸಿತು. ಅಂದರೆ ಗುರಿ ಇಟ್ಟುಕೊಂಡಿತ್ತು. ಆದರೆ ಸಾಧನೆಯಾದುದು ಎಷ್ಟು ? ಇದರೊಳಗೆ ಸಾದನೆಯಾದುದು ಗುರಿಯ ಅರ್ಧ ಭಾಗದಷ್ಟು ಕೂಡ ಸಾಧನೆಯಾಗಲಿಲ್ಲ, ಈಗಾಗಲೇ ಒಂದೆರಡು ಸಲ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಒಂದು ಅನಿಲ ಘಟಕವನ್ನಾದರೂ ಕೂಡ ಇಲಾಖೆಯವರು ಕಟ್ಟಿಸಿ ಕಾರ್ಯಗತ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಸಾಮಾನ್ಯವಾಗಿ ಈಗಿರುವ ತಂತ್ರಜ್ಞಾನದಂತೆ ಅನಿಲ ಘಟಕವನ್ನು ಮಾಡಬೇಕಾದರೆ ಸುಮಾರು ೧೫ ರಿಂದ ೨೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈವತ್ತಿನ ದಿವಸ ಖಾದಿ ಬೋರ್ಡ ರೂಪಿಸಿದ ಯೋಜಯ ರೀರಿಯಲ್ಲಿ ಇದನ್ನು ಮಾಡಿದರೂ ಕೂಡ ೧೨ - ೧೫ ಸಾವಿರ ರೂಪಾಯಿಗಳು ಖರ್ಚು ಆಗುತ್ತದೆ. ಅದಕೋಸ್ಕರ ಕಾಮಧೇನು ಘಟಕವೆಂದು ಹೇಳಿ ಹಿಂದಿನ ಸರ್ಕಾರದವರು ಜೀವಿ ಪರಿಸರ ಇಲಾಖೆಯ ಮತಿಯಿಂದ ಸಹಾಯಧನ ಕೊಟ್ಟು ಕಾಮಧೇನು ಘಟಕವೆಂದು ಸಾಗರ ತಾಲ್ಲೂಕಿನಲ್ಲಿ ಅಡಿಕೆ ಬೆಳೆಗಾರರ ಸಂಘಸ್ಥಳೀಯ ಸಾಮಗ್ರಿ ಸರಳ ತಂತ್ರಜ್ಞಾನ ಮತ್ತು ಕಡಿಮೆ ವೆಚ್ಚದಲ್ಲಿ ಹೊಸತಾದ ಅನಿಲ ಘಟಕವನ್ನು ರೂಪಸಲು ಉತ್ತೇಜ ನೀಡಿತು. ಅದರ ಪ್ರಕಾರವಾಗಿ ೧೨-೧೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಬದಲು ಅದರ ಕಾಲು ಭಾಗ ಅಂದರೆ ೩-೪ ಸಾವಿರ ರೂಪಾಯಿಗಳಲ್ಲೆ ಇಷ್ಟೇ ಅನಿಲ ಸಾಮರ್ಥ್ಯದ ಯೋಜನೆಯನ್ನು ಪ್ರಾರಂಭಿಸಲಾಯಿತು. ಕಡಿಮೆ ವೆಚ್ಚದಲ್ಲಿ ಮಾಡುವಂಥ ಈ ಅನಿಲ ಘಟಕಕ್ಕೆ ಜನರ ಆಸಕ್ತಿಯೂ ಇದೆ. ಕಳೆದ ವರ್ಷ ೩೦ ಘಟಕಗಳಿಗೆ ಸಹಾಯಧನ ರೂಪದಲ್ಲಿ ನಮ್ಮ ಸರ್ಕಾರದವರು ೪೫ ಸಾವಿರ ರೂಪಾಯಿ ಗಳನ್ನು ಕೊಟ್ಟಿತ್ತು. ಕೇಂದ್ರ ಸರ್ಕಾರವು ಈ ಹೊಸ ಯೋಜನೆಯನ್ನು ಒಪ್ಪುವಂತೆ ಈ ಸರ್ಕಾರ ಶಿಪಾರಸ್ಸು ಮಾಡಬೇಕಾಗಿತ್ತು. ಕಡಿಮೆ ವೆಚ್ಚದಲ್ಲಿ ಸಿಗುವಂಥ ಸ್ಥಳೀಯ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಹೆಚ್ಚು ಸಿಮೆಂಟ್ ಖರ್ಚು ಇಲ್ಲದೆ ಬಹಳ ಕಡಿಮೆ ಸಮಯದಲ್ಲಿ ಮಾಡಬಹುದು. ಶ್ರೀಮಂತರು ೧೫ ಸಾವಿರ ರಪಾಯಿಗಳನ್ನು ಖರ್ಚು ಮಾಡಬಹುದು. ಆದರೆ ಬಡಕುಟುಂಬದವರು ೩-೪ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಕಟ್ಟಲಿಕ್ಕೆ ಸಾಧ್ಯವಿರುತ್ತದೆ. ಈ ವರ್ಷವೂ ಕೂಡ ಸರ್ಕಾರದವರು ಇಂಥ ಅನಿಲ ಘಟಕಗಳನ್ನು ಸ್ಥಾಪನೆ ಮಾಡಲಿಕ್ಕೆ ಉತ್ತೇಜನ ಮಾಡಿ ಕೊಡಬೇಕೆಂದು ಒತ್ತಾಯಪಡಿಸುತ್ತೇನೆ.

ಇನ್ನು ಕೊನೆಯದಾಗಿ ಮತ್ತೊಂದು ಪ್ರಸ್ತಾಪ ಮಾಡಬೇಕಿದೆ. ತೆರದ ಕೆಲಸವನ್ನು ಭೂಸೇನೆಗೆ ವಹಿಸಬೇಕು. ಈ ಕೆಲಸದ ಬಗ್ಗೆ ಸರ್ಕಾರದ ತೀರ್ಮಾನವನ್ನು ಕೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಭೂ ಸೇನೆ ಇರಲಿಲ್ಲ, ಪಕ್ಕದ ಜಿಲ್ಲೆಗಳಲ್ಲಿ ಇತ್ತು. ಈ ಕೆಲಸ ಭೂ ಸೇನೆಗೆ ವಹಿಸುತ್ತೇವೆಂದು

ಹೇಳುವಾಗ ಈ ವರೆಗೆ ಈ ಸೇನೆ ಮಾಡಿದ ಸಾಧನೆಯನ್ನು ಪರಿಶೀಲಿಸುವುದು ಒಳ್ಳೆಯದು. ಹಣವನ್ನು ಕೈಗೆ ಕೊಟ್ಟಿದ್ದು ಈ ವರದಿ ಪ್ರಕಾರ ಈ ಸೇನೆ ಯಾವ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ. ಅವರು ಮಾಡಿದ ಸಾಧನೆ ಎಷ್ಟು ಎಂದರೆ ಒದಗಿಸಲಾದ ೨,೨೨೪ ಲಕ್ಷ ರೂಪಾಯಿಗಳಿಗೆ ೩೨೪ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ೫೫೫ ಕೆಲಸ ತೆಗೆದುಕೊಂಡಿದ್ದಕ್ಕೆ ೧೩೫ ಕೆಲಸಗಳನ್ನು ಪೂರೈಸಿದ್ದಾರೆ. ಇವರಿಗೇ ಕೊರೆವ ಬಾವಿ ತೋಡುವ ಬಾವಿ ಕೆಲಸಗಳನ್ನು ಮತ್ತೆ ವಹಿಸಬೇಕೆಂದು ಹೇಳುವುದು ವಿಷಾದಕರ. ಕೇಂದ್ರ ಸರ್ಕಾರದ ನೆರವು ಅವಕಾಶ ಬೇಕಾದಷ್ಟು ಇದೆ. ಇಷ್ಟೆಲ್ಲಾ ನೆರವನ್ನು ಕೊಟ್ಟರೂ ಎಲ್ಲ ಗ್ರಾಮಗಳಲ್ಲಿಯೂ ಕೂಡ ನೀರಿನ ಕೊರತೆ ನಿವಾರಿಸಲು ಸರ್ಕಾರ ಅಶಕ್ತವಾಗಿದೆ. ಮಲೆನಾಡು ಅಭಿವೃದ್ಧಿ ಮಾಡಬೇಕಾದರೆ ಭೂಸೇನೆಯ ಮುಖಾಂತರ ಒಂದು ವಿಶಾಲ ಯೋಜನೆ ಹಾಕಿಕೊಳ್ಳಬೇಕು. ಮತ್ತೆ ನಮ್ಮಲ್ಲಿ ಗ್ರಾಮ ಲೆಕ್ಕಿಗರು ಬಹಳ ಕಡಿಮೆ ಇದ್ದಾರೆ ಬಹುತೇಕ ಪಂಚಾಯಿತ್ತುಗಳಿಗೆ ಗ್ರಾಮ ಲೆಕ್ಕಿಗರು ಇಲ್ಲದೆ ಬಹಳ ಅನಾಹುತವಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಎಲ್ಲ ವಿಷಯಗಳಲ್ಲಿಯೂ ಹೆಚ್ಚಿನ ಕಳಕಳಿ ಮತ್ತು ಅನುಕಂಪವನ್ನು ತೋರಿ ಕಾರ್ಯೋನ್ಮುಖರಾಗಲು ವಿಜ್ಞಾಪಿಸಿ ಸರ್ಕಾರ ಹೆಚ್ಚು ಹೆಸರನ್ನು ಗಳಿಸಲು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲಲ್).—ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ವಿಚಾರದ ಬೇಡಿಕೆಯನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ಹೇಳುತ್ತೇನೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ನಮ್ಮ ಪ್ರದೇಶದ ಜನತೆ ತುಂಬಾ ನಿರೀಕ್ಷಣೆ ಇಟ್ಟುಕೊಂಡಿದ್ದರು. ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳುವುದು ಸರಿಯಷ್ಟೆ. ಆದರೆ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಸಕಾಲದಲ್ಲಿ ಪ್ರಾಮಾಣಿಕವಾಗಿ ಜಾರಿಗೆ ತರತಕ್ಕಂಥದ್ದು ಈಗಿನ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿ ಆಗಬೇಕಾಗಿದೆ. ಗ್ರಾಮ ಅಭಿವೃದ್ಧಿಯಾಗಬೇಕಾದರೆ ಮೂಲಭೂತವಾಗಿ ೨-೩ ವಿಚಾರಗಳನ್ನು ತಾವು ಗಮನಿಸಬೇಕು. ಎಲ್ಲ ಜನತೆಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಸಂಪರ್ಕದ ಅನುಕೂಲತೆಗಳನ್ನು ಒದಗಿಸುವ ದೃಷ್ಟಿಯಿಂದ ಮಾರ್ಗ ರಚನೆಯಾಗಬೇಕು. ಗ್ರಾಮದ ಎಲ್ಲ ಮೂಲೆ ಮೂಲೆಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಬಹಳ ಆವಶ್ಯಕವಾಗಿ ಈವತ್ತಿನ ಪರಿಸ್ಥಿತಿಯಲ್ಲಿ ಆಗಬೇಕಾದ್ದು ಇರುತ್ತದೆ. ಕೊಳವೆ ಬಾವಿಗಳ ನಿರ್ಮಾಣದ ಬಗ್ಗೆ ಮಾತನಾಡುತ್ತಾ ಈ ಕೊಳವೆ ಬಾವಿಗಳ ನಿರ್ಮಾಣವಾಗುವಂಥ ಸಂದರ್ಭದಲ್ಲಿ ಹಣದ ದುರುಪಯೋಗ ಆಗುತ್ತಿರುವಂಥದ್ದು ನಮ್ಮ ಕಣ್ಣ ಮುಂದೆ ಬೇಕಾದಷ್ಟು ಇದೆ. ಕೊಳವೆ ಬಾವಿಗಳನ್ನು ರಾಜಕೀಯ ವ್ಯಕ್ತಿಗಳ ಮನೆಗಳ ಹತ್ತಿರ ಮತ್ತು ಅವರಿಗೆ ಅನುಕೂಲವಾಗುವಂಥ ಪ್ರದೇಶಗಳಲ್ಲಿ ಮಾತ್ರ ಹಾಕಿಸಿಕೊಳ್ಳುವಂಥದ್ದನ್ನು ನಾವು ಕಂಡಿದ್ದೇವೆ. ಇದು ಹೆಚ್ಚಿನ ಜನರಿಗೆ ಅನುಕೂಲವಾಗುವಂಥ, ಮತ್ತು ಹೆಚ್ಚು ಮನೆಗಳು ಇರುವಂಥ ಪ್ರದೇಶಗಳಲ್ಲಿ ಈ ಕೊಳವೆ ಬಾವಿಗಳನ್ನು ಮಾಡುವಂಥದ್ದು ತುಂಬಾ ಅವಶ್ಯಕವಾಗಿ ಆಗಬೇಕಾಗಿರುತ್ತದೆಂದು ಈ ಸಂದರ್ಭದಲ್ಲಿ ನಾನು ಒತ್ತಾಯಪಡಿಸುತ್ತೇನೆ.

ಗ್ರಾಮ ಅಭಿವೃದ್ಧಿಗಾಗಿ ಸರ್ಕಾರದವರು ಬೇರೆ ಬೇರೆ ಯೋಜನೆಗಳನ್ನು ಹಾಕಿಕೊಂಡಿದೆ. ಜಾಗ ಇಲ್ಲದವರಿಗೆ ಜಾಗವನ್ನು ಕೊಟ್ಟು ಮನೆಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮ ಇದೆ. ಈ ಉದ್ದೇಶಕ್ಕಾಗಿ ಐದು ಸೆಂಟ್ಸ್ ಜಾಗವನ್ನು ಈಗ ಏನು ಕೊಡುತ್ತಿದ್ದಾರೆ ಇದನ್ನು ೧೦ ಸೆಂಟ್ಸ್‌ಗೆ ಏರಿಸಬೇಕು. ಅಲ್ಲಿ ಮನೆಗಳನ್ನು ಕಟ್ಟಿಕೊಂಡು ತನ್ನ ಸ್ವಂತ ಉದ್ಯೋಗ, ಜೊತೆಗೆ ಉಪಕಸಬನ್ನೂ ಕೂಡ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಸ್ವಲ್ಪ ಜಾಗ ಜಾಸ್ತಿ ಇದ್ದರೆ ದನಕರು, ಕುರಿ, ಕೋಳಿ, ಎಮ್ಮೆ ಇವೇ ಮುಂತಾದ ಪ್ರಾಣಿಗಳನ್ನು ಸಾಕುವಂಥ ಉಪಕಸುಬಿನಿಂದ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ಈಗ ನಮ್ಮ ನೇಗಿಲ ಭಾಗ್ಯ ಯೋಜನೆ, ಕೂಲಿಗಾಗಿ ಕಾಳು ಯೋಜನೆ, ಐ.ಆರ್.ಡಿ.ಪಿ. ಸಾಲ, ಕೂಲಿಗಾರರಿಗೆ ಸಾಲ ಮುಂತಾದ ಗ್ರಾಮೀಣ ಯೋಜನೆಗಳನ್ನು ತಾಲ್ಲೂಕು ಮಟ್ಟದಲ್ಲಿ ಜಾರಿಗೆ ತರುವಂಥ ಸಂದರ್ಭದಲ್ಲಿ ರಾಜಕೀಯ ವ್ಯಕ್ತಿಗಳ ಜೊತೆಯಲ್ಲಿ ಅಧಿಕಾರಿಗಳು ಶಾಮೀಲಾಗಿ ಈ ಒಂದು ಯೋಜನೆಯು ದುರುಪಯೋಗವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಖಂಡಿತವಾಗಿಯೂ ನಿಂತಾಗ ಮಾತ್ರ ಗ್ರಾಮೀಣ ಅಭಿವೃದ್ಧಿಯಾಗುತ್ತದೆ, ಇಲ್ಲವಾದರೆ ಸಾಧ್ಯವೇ ಆಗುವುದಿಲ್ಲ.

ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ನಮ್ಮಲ್ಲಿ ಅರ್ಥಿಕವಾಗಿ ಸಮಾನತೆಯನ್ನು ತರುವುದು ಕಷ್ಟವಾದರೂ ಕೂಡ ಸಾಮಾಜಿಕ ಸಮಾನತೆಯನ್ನು ತರುವಂಥದ್ದು ಬಹಳ ಅವಶ್ಯಕವಾಗಿ ಆಗಬೇಕಾಗಿದೆ. ಈಗ ಹಣದ ಪ್ರಭಾವ ಇರತಕ್ಕಂಥವರು ಮತ್ತು ರಾಜಕೀಯ ಪ್ರಭಾವ ಇರುವಂಥ ವ್ಯಕ್ತಿಗಳು ಯಾವುದೇ ಕಚೇರಿಗೆ ಹೋದರೂ ಅವರನ್ನು ಅಧಿಕಾರಿಗಳು ಕರೆದು ಕುಳ್ಳಿರಿಸಿ ಗೌರವದಿಂದ ಕಂಡು ಸಮಾಧಾನ ಮಾಡಿ ಕಳುಹಿಸಿಕೊಡುತ್ತಾರೆ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಯಾವುದೇ ಪ್ರಭಾವ ಇಲ್ಲದಂಥ ಹಳ್ಳಿಯ ಬಡಜನತೆ ಸಮಸ್ಯೆಗಳನ್ನು ಇಟ್ಟುಕೊಂಡು ಸಂಬಂಧಪಟ್ಟ ಕಚೇರಿಗೆ ಹೋದರೆ ಅವರು ಅವನನ್ನು ತುಚ್ಛೀಕರಿಸಿ ಅವಮಾನ ಮಾಡತಕ್ಕಂಥ ಪರಿಸ್ಥಿತಿ ಇರುತ್ತದೆ. ಇಂಥ ಪರಿಸ್ಥಿತಿ ಹೋಗಬೇಕು. ಎಲ್ಲ ಜನತೆಯನ್ನು ಸರಿಸಮಾನರನ್ನಾಗಿ ಮಾಡಬೇಕು ಜನತೆ ಅಧಿಕಾರಿಗಳ ಒಡನೆ ಧೈರ್ಯದಿಂದ ಮಾತಾಡಿ ತಮಗೆ ದೊರೆಯಬೇಕಾದ ಲಾಭವನ್ನು ಪಡೆಯುವಂಥ ಅವಕಾಶಗಳು ದೊರೆತಾಗ ಮಾತ್ರ ಗ್ರಾಮಗಳು ಉತ್ತಮ ಸ್ಥಿತಿಗೆ ಬರಲು ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಹಿಂದಿನ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಗ್ರಾಮಾಭಿವೃದ್ಧಿಯ ಬಗ್ಗೆ ನಾವು ಮಾತನಾಡಲಿಕ್ಕೆ ಹೋದರೆ, ಗ್ರಾಮೀಣ, ಅಭಿವೃದ್ಧಿಗಾಗಿ ಹಾಕಿಕೊಂಡಂಥ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರತಕ್ಕಂಥದ್ದು ತುಂಬಾ ಅವಶ್ಯಕವಾಗಿದೆ. ನಮ್ಮ ಸರ್ಕಾರವು ಹಾಕಿಕೊಂಡಿರತಕ್ಕಂಥ ಯೋಜನೆಗಳನ್ನು ಪ್ರಾಮಾಣಿಕವಾಗಿ ಸರಿಯಾದ ಕಾಲದಲ್ಲಿ ಜಾರಿಗೆ ತರುತ್ತಾರೆಂಬ ವಿಶ್ವಾಸವನ್ನು ಇಟ್ಟುಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

೧-೩೦ ಪಿ, ಎಂ.

ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಗಳ ಬಗ್ಗೆ ನನ್ನ ಸಂಪೂರ್ಣ ಬೆಂಬಲ ಮತ್ತು ಸಮಿಶಿಯನ್ನು ಕೊಡುತ್ತಾ ಕೆಲವು ವಿಚಾರಗಳನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಘನ ಸರ್ಕಾರದವರು ಹಳ್ಳಿಗಳ ಹಾಗೂ ಗ್ರಾಮಾಭಿವೃದ್ಧಿಯ ಕಡೆಗೆ ಗಮನ ಕೊಡುತ್ತಿರುವ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡುವಂತಹ ಅವಕಾಶ ನಮಗೆ ಈಗ ಸಿಕ್ಕಿದೆ. ಅನ್ನವಿಲ್ಲದೆ ಬದುಕಬಹುದು, ಬಟ್ಟೆ ಇಲ್ಲದೆ ಇರಬಹುದು, ಆದರೆ ಸಾಯುವಾಗ ಕುಡಿಯಲು ಒಂದು ಲೋಟ ನೀರು ಇಲ್ಲದಿರುವಂತಹ ಗ್ರಾಮಗಳನ್ನು ನಾವು ನೋಡಿದ್ದೇವೆ. ಕೆಲವು ಹಳ್ಳಿಯ ಜನರು ನೀರನ್ನು ೧೦-೧೫ ಮೈಲಿಗಳ ದೂರ ದಿಂದ ತರಬೇಕಾಗುತ್ತದೆ. ಈ ಕಷ್ಟವನ್ನು ತಪ್ಪಿಸುವ ಸಲುವಾಗಿ ನಮ್ಮ ಸರ್ಕಾರ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಕುಡಿಯುವ ನೀರನ್ನು ಒದಗಿಸುವ ಕೆಲಸಕ್ಕೆ ಮೊದಲ ಆದ್ಯತೆಯನ್ನು ಕೊಟ್ಟಿದೆ. ಅದಕ್ಕಾಗಿ ನಾವು ಸರ್ಕಾರಕ್ಕೆ ಋಣಿಯಾಗಿರಬೇಕಾಗಿದೆ. ಇದಕ್ಕೂ ಮೊದಲು ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವವಿತ್ತು. ಹರಿಜನ ಮತ್ತು ಗಿರಿಜನರು ಬಾವಿಯ ನೀರನ್ನು ಬೇರೆಯವರಿಂದ ಸೇದಿಸಿಕೊಳ್ಳುವಂತಹ ಪರಿಸ್ಥಿತಿ ಇತ್ತು. ಈ ಕಷ್ಟವನ್ನು ತಪ್ಪಿಸಲು ಹೊಸದಾಗಿ ಬಾವಿ ತೆಗೆಯುವಾಗ ಮತ್ತು ಕೊಳವೆ ಬಾವಿಯನ್ನು ತೆಗಯುವಾಗ ಮೊದಲು ಹರಿಜನರ ಕಾಲೋನಿಗಳಲ್ಲಿ ತೆಗೆಯಿರಿ ಎಂದು ನಮ್ಮ ಮಾನ್ಯಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆ. ಹಿಂದೆ ಯಾರೂ ಮಾಡದಿರುವಂಥಹ ಕೆಲಸವನ್ನು ನಮ್ಮ ಸರ್ಕಾರದವರು ಕಾರ್ಯರೂಪದಲ್ಲಿ ತಂದಿದ್ದಾರೆ. ಗ್ರಾಮಾಭಿವೃದ್ಧಿ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದಾರೆ, ಅತಿವೃಷ್ಟಿ ಮತ್ತು ಅನಾವೃಷ್ಟಿ ಬಂದ ಕಡೆಗಳಲ್ಲಿ ಕೂಡಲೆ ಅಲ್ಲಿನ ಜನರಿಗೆ ನೆರವನ್ನು ಒದಗಿಸಿದ್ದಾರೆ. ಇದರ ಜೊತೆಗೆ ಐ.ಆರ್.ಡಿ.ಪಿ ಮತ್ತು ಎನ್.ಆರ್.ಇ.ಪಿ. ಕಡೆಗೆ ಹೆಚ್ಚು ನಿಗ ಕೊಟ್ಟಿದ್ದಾರೆ. ಈ ಮೊದಲು ವರ್ಷದಲ್ಲಿ ೧೯ ಲಕ್ಷ ರೂಪಾಯಿಗಳಷ್ಟು ಆಗುತ್ತಿದ್ದ ಕೆಲಸಗಳ ಕಡೆ ಈ ಸರ್ಕಾರ ಅಧಿಕಾರಕ್ಕೆ ಬಂದ ೫-೬ ತಿಂಗಳುಗಳಲ್ಲಿಯೇ ೩೮ ಕೋಟಿ ರೂಪಾಯಿಗಳಷ್ಟು ಕೆಲಸವಾಗಿದೆ. ಒಟ್ಟಿನಲ್ಲಿ ಅಭಿವೃದ್ಧಿ ಕೆಲಸಗಳ ಕಡೆಗೆ ಈಗಿನ ಸರ್ಕಾರ ಹೆಚ್ಚಿನ ನಿಗಾವಹಿಸಿವೆ. ಈ ಹಿಂದಿನ ಸರ್ಕಾರಗಳು ಕಳೆದ ೩೫ ವರ್ಷಗಳಲ್ಲಿ ಮಾಡಿದಿರುವಂತಹ ಕೆಲಸಗಳನ್ನು ನಮ್ಮ ಸರ್ಕಾರ ಇನ್ನು ೩೫ ತಿಂಗಳುಗಳಲ್ಲಿ ಮಡುತ್ತದೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಸರ್ಕಾರದವರು ಮುಖ್ಯವಾಗಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಇಲ್ಲಿಯವರಿಗೆ ಪಟ್ಟಣಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಡಲಾಗಿವೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ೨೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೆ

ರಾಜ್ಯದಲ್ಲಿರುವ ಹಳ್ಳಿಗಳಿಗೆಲ್ಲಾ ನೀರನ್ನು ಒದಗಿಸಲು ಕೇವಲ ೭-೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಕೆಲವರು ಟೀಕೆ ಮಾಡಿದ್ದಾರೆ. ಆದರೆ ಬೆಂಗಳೂರಿನಲ್ಲಿ ಲಕ್ಷಾಂತರ ಜನರು ವಾಸ ಮಾಡುತ್ತಿದ್ದಾರೆ, ಬೆಂಗಳೂರಿಗೆ ನ೧೦೦ ಮೈಲಿಗಳ ದೂರದಿಂದ ಕಾವೇರಿ ನೀರನ್ನು ತರಬೇಕಾದರೆ ಅನೇಕ ರಸ್ತೆಗಳ ಅಡ್ಡ ಬರುತ್ತವೆ ಮತ್ತು ಖಾಸಗಿಯವರ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ ಹಣದ ಖರ್ಚು ಬರುತ್ತದೆ. ಅದೇ ಹಳ್ಳಿಯವರಿಗೆ ನೂರು ಮೈಲಿಗಳ ದೂರದಿಂದ ನೀರನ್ನು ತಂದು ಒದಗಿಸುವುದಿಲ್ಲ. ಅಲ್ಲಿಯ ಬಾವಿ ತೆಗೆದು ನೀರನ್ನು ಒದಗಿಸಲಾಗುತ್ತದೆ, ಆದ್ದರಿಂದ ಬೆಂಗಳೂರಿನ ಜನರಿಗೆ ನೀರು ಒದಗಿಸಲು ಇಷ್ಟು ಹಣ ಖರ್ಚು ಮಾಡುವುದು ಅಂತಹ ದೊಡ್ಡ ಸಂಗತಿಯೇನೂ ಅಲ್ಲ. ಮುಖ್ಯವಾಗಿ ಸರ್ಕಾರದವರು ಯಾವುದೇ ಒಂದು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಆ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಬೇಕು. ಚರ್ಚೆಯ ನಂತರ ಒಂದು ತೀರ್ಮಾನ ತೆಗೆದುಕೊಂಡು ಜಾರಿಗೆ ತರಬೇಕು. ಈ ಹಿಂದಿನ ಸರ್ಕಾರ ಈ ರೀತಿ ಮಾಡುತ್ತಿರಲಿಲ್ಲ ನಮ್ಮ ಈಗಿನ ಸರ್ಕಾರ ಈ ರೀತಿ ಮಾಡುತ್ತಿರುವುದರಿಂದ ನಮ್ಮ ಸರ್ಕಾರಕ್ಕೆ ವಿರೋಧ ಪಕ್ಷದವರು ಪೂರ್ಣವಾದ ಬೆಂಬಲ ಕೊಡಬೇಕು. ಎಲ್ಲದಕ್ಕೂ ಬರೀ ಟೀಕೆ ಮಾಡುವುದು ಸರಿಯಲ್ಲ. ವಿರೋಧ ಪಕ್ಷದ ಶ್ರೀ ಸೋಮಪ್ಪನವರು ತಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ಹೇಳಿದರು. ಅವರ ಕ್ಷೇತ್ರದಲ್ಲ ವರ್ಷದಲ್ಲಿ ೧೨೪ ಇಂಚು ಮಳೆಯಾಗುತ್ತದೆ. ಇಂತಹ ಕಡೆಯೇ ನೀರಿನ ಕೊರತೆ ಇದ್ದರೆ ವರ್ಷದಲ್ಲಿ ಕೇವಲ ಹತ್ತು ಇಂಚು ಮಳೆಯಾಗವ ಕಡೆಗಳಲ್ಲಿ ನೀರಿನ ಕೊರತೆ ಎಷ್ಟಿರುತ್ತದೆಂಬುದನ್ನು ಅವರು ತಿಳಿದುಕೊಳ್ಳಬೇಕು. ಇದು ಕೇವಲ ಒಂದು ಭಾಗದ ಸಮಸ್ಯೆಯಲ್ಲ, ಇಡೀ ರಾಜ್ಯದ ಸಮಸ್ಯೆಯಾಗಿದೆ. ಕಳೆದ ೩೫ ವರ್ಷಗಳಲ್ಲಿ ಆಗದಿರುವಂತಹ ಕೆಲಸವನ್ನು ಕೇವಲ ೮ ತಿಂಗಳುಗಳಲ್ಲಿ ಮಾಡಿ ಮುಗಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಇದರ ಜೊತೆಗೆ ಹಣವೂ ಬೇಕಾಗುತ್ತದೆ. ನಮ್ಮ ಸರ್ಕಾರಕ್ಕೆ ಹಣದ ತೊಂದರೆಯು ಇದೆ. ನಮ್ಮ ರಾಜ್ಯದಿಂದ ಲೋಕಸಭೆಗೆ ಆರಿಸಿ ಹೋದಂಥ ಸದಸ್ಯರ ಪೈಕಿ ೨೭ ಜನ ಕಾಂಗ್ರೆಸ್ ಪಕ್ಷದವರೇ ಆಗಿದ್ದಾರೆ. ಆದ್ದರಿಂದ ಅವರಿಗೂ ಇದರ ಜವಾಬ್ದಾರಿಯೇ ಇಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ಇವರುಗಳು ಕೇಂದ್ರದ ಮೇಲೆ ಒತ್ತಡ ತಂದು ನಮ್ಮ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಹಣ ಕೊಡಿಸುವ ವ್ಯವಸ್ಥೆ ಮಾಡಬೇಕು. ಹಳ್ಳಿಗಾಡಿನ ಜನರಿಗೆ ಅನುಕೂಲ ಮಾಡಿಕೊಡುವುದರಲ್ಲಿ ಇವರ ಪಾತ್ರವೂ ಸಹ ಹೆಚ್ಚಾಗಿದೆ. ಈ ಒಂದು ಚಿಂತನೆಯನ್ನು ಅವರು ಇಟ್ಟುಕೊಂಡು ನಮ್ಮ ಸರ್ಕಾರಕ್ಕೆ ಬೆಂಬಲ ಕೊಟ್ಟರೆ ನಾವು ಸರ್ವತೋಮುಖವಾದಂಥ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

ಇನ್ನು ಮಲೆನಾಡು ಭಾಗಗಳಲ್ಲಿ ಹರಿಯುವಂತಹ ನೀರನ್ನು ಪೂರ್ಣವಾಗಿ ಬಳಸಲು ಮಿನಿ-ವಾಟ್ಟರ್ ಸ್ಕೀಮುಗಳನ್ನು ಜಾರಿಗೆ ತರುವುದಾಗಿ ಹೇಳಿಯಾರೆ ಈಗ ಮೂಡಿಗೆರೆಯಲ್ಲಿ ಇಂತಹ ಒಂದು ಸ್ಕೀಮನ್ನು ತೆಗೆದುಕೊಂಡಿದ್ದಾರೆ. ಹರಿದು ಬರುವ ನೀರನ್ನು ಟ್ಯಾಂಕ್‌ನಲ್ಲಿ ಭರ್ತಿ ಮಾಡಿದ ನಂತರ ಪೈಪ್‌ಗಳ ಮೂಲಕ ನಾಲ್ಕೈದು ಹಳ್ಳಿಗಳಿಗೆ ಒದಗಿಸಲು ಸಾಧ್ಯವಿದೆ, ಈ ರೀತಿ ಮಾಡುವುದರಿಂದ ಖರ್ಚೂ ಕೂಡ ಕಡಿಮೆಯಾಗುತ್ತದೆ.

ಇನ್ನು ಬಡವರು ಮತ್ತು ಹರಿಜನರು ವಾಸಕ್ಕೆ ಮನೆ ಕಟ್ಟಿಕೊಳ್ಳಲು ಈಗ ಮೂರುವರೆ ಸಾವಿರ ರೂಪಾಯಿಗಳನ್ನು ಏನು ಕೊಡ ಾಗುತ್ತಿದೆ, ಇದು ಸಾಕಾಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡುವುದರ ಕಡೆಗೆ ಸರ್ಕಾರ ಗಮನ ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಅಂತ್ಯೋದಯ ಕಾರ್ಯಕ್ರಮ ಪ್ರಕಾರ ಪ್ರತಿ ಗ್ರಾಮದಲ್ಲಿ ಐದು ಅತ್ಯಂತ ಬಡ ಕುಟುಂಬಗಳನ್ನು ದಾರಿದ್ರ್ಯ ರೇಖೆಯಿಂದ ಮೇಲಕ್ಕೆತ್ತುವ ಕಾರ್ಯಕ್ರಮವನ್ನು ಏನು ಇಟ್ಟುಕೊಂಡಿದ್ದೀರಿ, ಇದನ್ನು ಹತ್ತಕ್ಕೆ ಹೆಚ್ಚಿಸಬೇಕೆಂದು ಹೇಳುತ್ತೇನೆ. ಇನ್ನು ಮುಂದೆ ಹರಿಜನ ಮತ್ತು ಗಿರಿಜನರ ಹಾಗೂ ಹಿಂದುಳಿದವರ ಉದ್ಧಾರ ಕಾರ್ಯತಃ ಆಗುತ್ತದೆಂಬ ಆಶ್ವಾಸನೆ ನಮ್ಮ ಸರ್ಕಾರದಿಂದ ದೊರೆತಿದೆ. ಇದರ ಜೊತೆಗೆ ಗ್ರಾಮೀಣ ಅಭಿವೃದ್ಧಿಗಾಗಿ ಜಿಲ್ಲಾ ಪರಿಷತ್‌ಗಳನ್ನು ಕೂಡ ರಚಿಸಲಾಗುತ್ತಿದೆ ಈ ಮಸೂದೆ ಈ ಸಭೆಯ ಮುಂದೆ ಚರ್ಚೆಗೆ ಬಂದಾಗ ಅದರ ಮೇಲೆ ನಾವು ಮಾತನಾಡಲು ಅವಕಾಶವಿದೆ. ಈಗ ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವಂತಹ ಬೇಡಿಕೆಗಳಿಗೆ ನನ್ನ ಪೂರ್ಣ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹನುಮಂತರಾವ್ ದೇಸಾಯಿ (ಅಬ್ದುಲ್‌ಪುರ).—ಮಾನ್ಯ ಅಧ್ಯಕ್ಷರೇ, ಸಮಗ್ರ ಗ್ರಾಮೀಣ ಅಭಿವೃದ್ಧಿ ವಿಷಯವಾಗಿ ಅನೇಕ ಹಿರಿಯ ಸದಸ್ಯರು ಮತ್ತು ಅನುಭವವಿರುವಂತಹ ಹಿಂದಿನ ಮಾಜಿ ಮಂತ್ರಿಗಳು ಇಲ್ಲಿಯವರಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಈ ಒಂದು ಬೇಡಿಕೆಗೆ ನನ್ನ ಬೆಂಬಲವನ್ನು ಕೊಡುತ್ತಾ ನಾನು ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಬರೀಟೀಕೆಗಾಗಿ ಟೀಕೆ ಮಾಡುವುದು ಸರಿಯಲ್ಲ ಇಲ್ಲಿಯವರೆಗೆ ಮಾತನಾಡಿದ ವಿರೋಧಪಕ್ಷದ ನನ್ನ ಮಿತ್ರರು ಮತ್ತು ಅನುಭವಶಾಲಿಗಳಾದಂಥ ಹಿಂದಿನ ಮಾಜಿ ಮಂತ್ರಿಗಳು ಈ ಇಲಾಖೆಯ ಮೇಲೆ ಮಾಡಿದಂಥ ಟೀಕೆಗಳನ್ನು ನೋಡಿದಾಗ ನಿಜಕ್ಕೂ ಕೂಡ ಅದರಲ್ಲಿ ಯಾವ ಅರ್ಥವೂ ಇಲ್ಲವೆಂದು ಹೇಳಬಹುದು. ಈ ಸರ್ಕಾರ ಅಧಿಕಾರ ವಹಿಸಿಕೊಂಡು ಕೇವಲ ೬–೭ ತಿಂಗಳುಗಳಾಯಿತು. ಈ ೬–೭ ತಿಂಗಳುಗಳಲ್ಲಿ ಗ್ರಾಮಾಭಿವೃದ್ಧಿ ವಿಷಯದಲ್ಲಿ ಹಿಂದೆ ಯಾವ ಸರ್ಕಾರವೂ ಸಹ ಮಾಡದಂಥ ಕೆಲಸವನ್ನು ಈಗಿನ ಸರ್ಕಾರ ಮಾಡಿದೆ ಎಂಬ ಮಾತನ್ನು ಕರ್ನಾಟಕದ ಜನ ಒಪ್ಪುತ್ತಿದ್ದಾರೆ. ಆದರೂ ಕೂಡ ಈ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡಿಲ್ಲ, ಕುಡಿಯುವ ನೀರನ್ನು ಒದಗಿಸುವ ವಿಚಾರದಲ್ಲಿ ಸರ್ಕಾರ ವಿಫಲಗೊಂಡಿದೆ ಎನ್ನುವಂತಹ ಟೀಕೆಯನ್ನು ಮಾಡಿದರು. ಇದು ನಿಜಕ್ಕೂ ಕೂಡ ಅವರ ಮನಸ್ಸಿನಿಂದ ಮಾಡಿದ ಟೀಕೆಯಲ್ಲ. ಬರೀ ವಿರೋಧ ಮಾಡಬೇಕು, ಅದಕ್ಕಾಗಿ ಟೀಕೆ ಮಾಡಿದರು ಎಂದು ಹೇಳಬಹುದು. ಇವೊತ್ತಿನ ದಿವಸ ತಮಗೆಲ್ಲಾ ಗೊತ್ತಿರುವಂತೆ ನಿಸರ್ಗದ ಮೇಲೆ ಅವಲಂಬಿಸಿರತಕ್ಕಂಥ ಅನೇಕ ಭಾಗಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ.

ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು ಇಲ್ಲ. ಮಳೆ ಬಂದರೆ ಬೆಳೆಯಾಗುತ್ತದೆ ಇಲ್ಲದಿದ್ದರೆ ಇಲ್ಲ. ಕುಡಿಯಲಿಕ್ಕೆ ನೀರು ಸಿಗುವುದು ಕಷ್ಟವಾಗಿದೆ. ಇದು ಎಲ್ಲರಿಗೂ ಕೂಡ ಗೊತ್ತಿದೆ. ಈ ಸಲ ಸರ್ಕಾರ ಅಧಿಕಾರ ವಹಿಸಿಕೊಂಡಾಗ ನಮ್ಮ ಭಾಗದಲ್ಲಿ ಅಂದರೆ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಭಯಂಕರವಾದ ಕ್ಷಾಮ ಪರಿಸ್ಥಿತಿ ಉಂಟಾಗಿ ಬಹಳ ತೊಂದರೆ ಉಂಟಾಗಿದೆ. ೧೯೭೨ರಲ್ಲಿ ಇದ್ದ ಕ್ಷಾಮ ಪರಿಸ್ಥಿತಿಗಿಂತ ಈ ಸಾರಿ ಭಯಂಕರ ಕ್ಷಾಮ ಪರಿಸ್ಥಿತಿ ಬಂದು ಕುಡಿಯಲಿಕ್ಕೆ ನೀರಿಗೂ ಸಹ ಬಹಳಷ್ಟು ತೊಂದರೆಯಾಗಿದೆ. ಹಳ್ಳಿಗಳಲ್ಲಿ ಕುಡಿಯಲಿಕ್ಕೆ ಸಹ ನೀರು ಸಿಗದೆ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಜನಗಳಿಗೆ ಅಷ್ಟೇ ಅಲ್ಲ ದನಗಳಿಗೂ ಸಹ ಮೇವು ನೀರು ಎರಡೂ ಸಿಗದಿರತಕ್ಕ ಪರಿಸ್ಥಿತಿ ಇತ್ತು. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಯೋಜನೆ ಹಾಕಿಕೊಂಡು ಸಂಬಂಧಪಟ್ಟ ಮಂತ್ರಿಗಳಾದ ನಮ್ಮ ನಜೀರ್–ಸಾಬ್‌ರವರು ಒಳ್ಳೆಯ ಕೆಲಸ ಮಾಡಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರು ಹಗಲು ರಾತ್ರಿ ಎನ್ನದೆ ಕುಡಿಯುವ ನೀರು ಒದಗಿಸುವ ಸಲುವಾಗಿ ಕಾರ್ಯಾಚರಣೆ ಮಾಡಿ ಹಳ್ಳಿ ಹಳ್ಳಿಗೂ ರಿಗ್ ಮೆಷಿನ್‌ಗಳನ್ನು ಕಳುಹಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ. ಸರ್ಕಾರ ಒಳ್ಳೆಯ ಕೆಲಸ ಮಾಡಿಲ್ಲ ಎನ್ನುವವರಿಗೆ ಒಂದು ಉದಾಹರಣೆ ಕೊಡುತ್ತಿದ್ದೇನೆ, ಸರ್ಕಾರ ಯಾವ ರೀತಿಯಿಂದ ಕೆಲಸ ಮಾಡಿದೆ ಅಂದರೆ ಸರ್ಕಾರ ಜಾಗೃತವಾಗಿದೆ. ಪ್ರಾಮಾಣಿಕವಾದ ಪ್ರಯತ್ನದಲ್ಲಿ ನಮ್ಮ ನಜೀರ್‌ಸಾಬ್ ಅಷ್ಟೇ ಅಲ್ಲ ನಮ್ಮ ಮುಖ್ಯ ಮಂತ್ರಿಗಳು ಕೂಡ ಜಾಗೃತರಾಗಿ ಈ ಒಂದು ದುಷ್ಕಾಲ ಪರಿಸ್ಥಿತಿಯನ್ನು ಪ್ರಾಮಾಣಿಕತನದಿಂದ ಎದುರಿಸಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಭಾಗದಲ್ಲಿ ಭೀಮಾನದಿ ಹರಿಯುತ್ತಿದೆ. ಭೀಮಾನದಿ ಯಾವಾಗಲೂ ಕೂಡ ಕಟ್ ಆಗಿರಲಿಲ್ಲ. ಆದರೆ ಈ ವರ್ಷ ಭೀಮಾನದಿ ಪೂರ್ತಿ ಬತ್ತಿ ಹೋಗಿ ನೀರು ಹರಿಯುವುದು ಕಟ್ ಆಯಿತು. ಭೀಮಾನದಿ ಹರಿಯುತಕ್ಕ ಅಕ್ಕಪಕ್ಕದ ಹಳ್ಳಿಗಳ ಲಕ್ಷಾಂತರ ಜನಗಳಿಗೆ ನೀರು ಒದಗಿಸುವುದು ಬಹಳ ಕಷ್ಟವಾಯಿತು. ಬೋರ್‌ವೆಲ್ ಹಾಕಿದರೂ ಕೂಡ ಸರಿಯಾಗಿ ನೀರು ಒದಗಿಸಲಿಕ್ಕೆ ಆಗದ ಪರಿಸ್ಥಿತಿ ಇದ್ದಾಗ ಮಾನ್ಯ ಮುಖ್ಯ ಮಂತ್ರಿಗಳನ್ನು ಮತ್ತು ನಜೀರ್‌ಸಾಬ್‌ರವರನ್ನು ಭೇಟಿಯಾಗಿ ವಿಷಯ ತಿಳಿಸಿದಾಗ, ಮಾನ್ಯ ಮುಖ್ಯಮಂತ್ರಿಗಳು ಮುಂಬಯಿಗೆ ಹೋಗಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ವಸಂತದಾದಾ ಪಾಟೀಲ್ ಭೇಟಿ ಮಾಡಿ ಡ್ಯಾಮ್‌ನಿಂದ ನೀರು ಬಿಡಿಸತಕ್ಕ ಪ್ರಯತ್ನ ಮಾಡಿದರು. ಅದರಿಂದ ಸಾಕಷ್ಟು ನೀರು ಬಂತು, ಲಕ್ಷಾಂತರ ಜನರಿಗೆ ಒಳ್ಳೆಯದಾಯಿತು. ಇದು ಸರ್ಕಾರದ ಪ್ರಾಮಾಣಿಕತೆಯನ್ನು ತೋರಿಸಿಕೊಡುತ್ತದೆ. ಸರ್ಕಾರ ಎಷ್ಟು ಜಾಗೃತವಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ತೋರಿಸಿಕೊಡುತ್ತದೆ. ಇಷ್ಟೆಲ್ಲಾ ಕೀರ್ತಿ ಇದ್ದರೂ ಸರ್ಕಾರ ಪ್ರಾಮಾಣಿಕ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಲ್ಲ ಎಂದು ಸೂಚಿಸುತ್ತದೆ.

ಪ್ರಯತ್ನ ಮಾಡಿಲ್ಲವೆಂದು ಹೇಳತಕ್ಕ ಮನಸ್ಸಾದರೂ ವಿರೋಧ ಪಕ್ಷದ ಮಿತ್ರರಿಗೆ ಹೇಗೆ ಆಗುತ್ತದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ನಾನು ಒಂದು ಉದಾಹರಣೆ ಹೇಳುತ್ತೇನೆ ನಾನು ಮಾರ್ಚ್ ತಿಂಗಳಿನಲ್ಲಿ ಮಾನ್ಯ ನಜೀರ್‌ಸಾಬ್‌ರವರನ್ನು ನೀರಿನ ಬಗ್ಗೆ ಭೇಟಿ ಮಾಡಲಿಕ್ಕೆ ಅವರ ಕೊಠಡಿಗೆ ಹೋಗಿದ್ದೆ. ಕುಡಿಯುವ ನೀರಿನ ಬಗ್ಗೆ ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಅವರು ಮತ್ತು ಮಾನ್ಯ ಚಂದ್ರಶೇಖರ್‌ರವರು ಮಾತನಾಡುತ್ತಿದ್ದರು. ನಾನು ಕೂಡ ಅಲ್ಲಿಗೆ ಹೋದೆ, ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ರಾತ್ರಿ ಹಗಲು ಎನ್ನದೆ ಕೆಲಸ ಮಾಡುತ್ತಿದ್ದರು. ಅವರು ಮಂತ್ರಿಗಳು ಎನ್ನುವುದನ್ನು ಕೂಡ ಮರೆತಿದ್ದರು. ನಾಲ್ಕೈದು ದಿವಸಗಳಿಂದ ಶೇವ್ ಕೂಡ ಮಾಡಿಕೊಂಡಿರಲಿಲ್ಲ. ನಾನು ಅವರನ್ನು ಏತಕ್ಕೆ ಶೇವ್ ಮಾಡಿಕೊಂಡಿಲ್ಲ ಅಂದುದಕ್ಕೆ ಅವರು ನೀರು, ನೀರು, ಅಂದರು ನೀವು ಶೇವಿಂಗ್ ಮಾಡಿಕೊಳ್ಳುವುದಕ್ಕೆ ನೀರು ಇಲ್ಲವೇ ಶೇವಿಂಗ್ ಮಾಡಿಕೊಳ್ಳುವುದಕ್ಕೆ ಎಷ್ಟು ನೀರು ಬೇಕು ಎಂದು ಕೇಳಿದ್ದಕ್ಕೆ, ಮಂತ್ರಿಗಳು ಶೇವಿಂಗ್ ಇರಲಿ, ಜನರಿಗೆ ಕುಡಿಯಲಿಕ್ಕೆ ನೀರು ಇಲ್ಲ ಎನ್ನುವುದೇ ಹಗಲು ರಾತ್ರಿ ಚಿಂತೆಯಾಗಿದೆ ಎಂದು ಹೇಳಿದರು, ಇಂತಹ ಪ್ರಾಮಾಣಿಕ ಮಂತ್ರಿಗಳು ಕೆಲಸ ಮಾಡುವಾಗ ಯಾವ ರೀತಿ ವಿಫಲರಾಗಿದ್ದಾರೆ? ಕೇವಲ ಆರು ತಿಂಗಳ ಅಧಿಕಾರಾವಧಿಯಲ್ಲಿ ೧೩ ಸಾವಿರ ಕೊಳವೆ ಬಾವಿಗಳನ್ನು ಮಾಡಿಸಿರುವುದರಲ್ಲಿ ಕೇವಲ ಕರ್ನಾಟಕ ಒಂದೇ ಎಂದು ನನಗನ್ನಿಸುತ್ತದೆ. ಬೇರೆ ರಾಜ್ಯಗಳಲ್ಲಿ ಈ ರೀತಿಯಾದ ತೀವ್ರಗತಿಯಲ್ಲಿ ಕೆಲಸ ಆಗಿಲ್ಲ. ಇನ್ನೂ ಅನೇಕ ವಿಷಯಗಳನ್ನು ಮಾನ್ಯ ವಿರೋಧ ಪಕ್ಷದ ಮಿತ್ರರು ಪ್ರಸ್ತಾಪ ಮಾಡಿದ್ದಾರೆ.

ನಾನು ಈಗ ಬೇಡಿಕೆಗಳನ್ನು ಸಮರ್ಥಿಸುತ್ತಾ, ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ಈಗ ಕೊಳವೆ ಬಾವಿಗಳನ್ನು ತೋಡಿಸುತ್ತಿದ್ದೀರಿ, ಜೊತೆಗೆ ತೆರೆದ ಬಾವಿಗಳನ್ನು ಮಾಡಿಸಿದರೆ ಒಳ್ಳೆಯದಾಗುತ್ತದೆ. ಮಳೆ ಬಂದರೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುಂದಿಲ್ಲ. ಮಳೆ ಎಲ್ಲ ಕಡೆಗೂ ಸರಿಯಾದ ರೀತಿಯಲ್ಲಿ ಆಗುವುದಿಲ್ಲ, ಎಷ್ಟೋ ಬಾವಿಗಳಲ್ಲಿ ನೀರೇ ಇರುವುದಿಲ್ಲ, ಆ ದೃಷ್ಟಿಯಿಂದ ಕೊಳವೆ ಬಾವಿ ಮಾಡತಕ್ಕ ಕೆಲಸ ಯಾವಾಗಲೂ ಜಾರಿಯಲ್ಲಿರಬೇಕು ಎನ್ನುವ ಸೂಚನೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಕೊಳವೆ ಬಾವಿಗಳು ಕೆಟ್ಟು ಹೋದಾಗ ತಕ್ಷಣ ಹೋಗಿ ರೀಪೇರಿ ಮಾಡತಕ್ಕ ವ್ಯವಸ್ಥೆ ಪ್ರತಿಯೊಂದು ತಾಲ್ಲೂಕಿನಲ್ಲೂ ಇರಬೇಕು. ಮೆಕಾನಿಕ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿ, ಕೆಟ್ಟು ಹೋದ ಪಂಪ್‌ಗಳನ್ನು ಬೇಗ ಸರಿಪಡಿಸತಕ್ಕ ವ್ಯವಸ್ಥೆ ಮಾಡಬೇಕು. ಜೊತೆಗೆ ಪ್ರತಿ ತಾಲ್ಲೂಕಿಗೂ ಒಂದೊಂದು ರಿಗ್ ಒದಗಿಸಬೇಕು. ವಾಹನಗಳ ಸೌಕರ್ಯ ಮಾಡಬೇಕು, ಸಿಬ್ಬಂದಿ ವ್ಯವಸ್ಥೆ ಮಾಡಬೇಕು, ತಾಲ್ಲೂಕು ಮಂಡಳಿಗಳು ಮತ್ತು ಪಂಚಾಯಿತಿಗಳು ಸಂಪೂರ್ಣವಾಗಿ ವಿಫಲವಾಗಿವೆ ಎಂದು ತಿಳಿದುಕೊಂಡು ಅನೇಕ ಜನ ಮಿತ್ರರು ಅವರ ಮೇಲೆ ಟೀಕೆ ಮಾಡಿದರು. ಎಲ್ಲಾ ತಾಲ್ಲೂಕು ಬೋರ್ಡ್‌ಗಳು ಮತ್ತು ಪಂಚಾಯಿತಿಗಳು ಹೋಗಿ ಜಿಲ್ಲಾ ಬೋರ್ಡ್‌ಗಳು ಬರುತ್ತವೆ. ಅಧಿಕಾರ ವಿಕೇಂದ್ರೀಕರಣವಾಗುತ್ತದೆ. ಹಳ್ಳಿಯಲ್ಲಿರತಕ್ಕವರಿಗೆ ಹೆಚ್ಚು ಅಧಿಕಾರ ಹೋಗುತ್ತದೆ. ಸರ್ಕಾರ ಮಾಡಿನಂತಹ ಇಂತಹ ಕೆಲಸವನ್ನು ಎಲ್ಲರೂ ಮೆಚ್ಚಬೇಕು. ಸಮಯದ ಅಭಾವವಿರುವುದರಿಂದ ಹೆಚ್ಚು ಮಾತನಾಡದೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮದನಗೋಪಾಲ್ ನಾಯಕ್ (ಶೋರಾಪುರ).— ಮಾನ್ಯ ಉಪಾಧ್ಯಕ್ಷರೇ, ಇಂದಿನ ಗ್ರಾಮಾಭಿವೃದ್ಧಿ ಇಲಾಖೆಯ ಮೇಲಿನ ಬೇಡಿಕೆಯನ್ನು ನಾನು ಖಂಡಿಸುತ್ತಾ, ನನ್ನ ಜಿಲ್ಲೆಯಾದ ಗುಲ್ಬರ್ಗಾದ ಶೋರಾಪುರ ತಾಲ್ಲೂಕಿನಲ್ಲಿ ಈ ಸರ್ಕಾರದಿಂದ ಆಗಿರತಕ್ಕ ಅನ್ಯಾಯವನ್ನು ವಿಶೇಷವಾಗಿ ಸಭೆಯ ಗಮನಕ್ಕೆ ತರುತ್ತೇನೆ. ಕೊಳವೆ ಬಾವಿಗಳ ಬಗ್ಗೆ ಹೇಳುವುದಾದರೆ, ಸರ್ಕಾರ ನನ್ನ ಕ್ಷೇತ್ರಕ್ಕೆ ಯಾವ ರೀತಿಯ ತಾರತಮ್ಯ ಮಾಡಿದೆಯೆಂದರೆ, ಯಾದಗಿರಿಯಲ್ಲಿ ೪೭ ಕೊಳವೆ ಬಾವಿಗಳನ್ನು ಮಾಡಿದ್ದಾರೆ. ಶಹಾಪುರದಲ್ಲಿ ೪೯ ಕೊಳವೆ ಬಾವಿಗಳನ್ನು ಹಾಕಿದ್ದಾರೆ. ಆದರೆ ಶೋರಾಪುರ ತಾಲ್ಲೂಕಿನಲ್ಲಿ ಕೇವಲ ೨೭ ಕೊಳವೆ ಬಾವಿಗಳನ್ನು ಹಾಕಿದ್ದಾರೆ. ಅಂದರೆ ಹಾಕಿರತಕ್ಕ ೨೭ ಕೊಳವೆ ಬಾವಿಗಳಲ್ಲಿ ಎಷ್ಟು ಬಾವಿಗಳಲ್ಲಿ ನೀರು ಬಂದಿದೆ, ಎಷ್ಟು ಕೊಳವೆ ಬಾವಿಗಳು ಕೆಟ್ಟುಹೋಗಿವೆ ಎನ್ನುವುದು ಈ ಸರ್ಕಾರದ ಗಮನದಲ್ಲಿಲ್ಲ. ಈ ಸರ್ಕಾರ ಬಂದು ೮ ತಿಂಗಳಾಗಿದೆ. ನನ್ನ ತಾಲ್ಲೂಕಿನ ಮೂರು ಗ್ರಾಮಗಳಿಗೆ ವಿಶೇಷವಾಗಿ ಕುಡಿಯುವ ನೀರಿನ ಕೊರತೆ ಇದೆ ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಆ ಗ್ರಾಮಗಳಲ್ಲಿ ಬಾವಿ ತೋಡಿಸಿದರೂ ಸಹ ನೀರು ಇಲ್ಲ, ಬೋರ್ ಹಾಕಿದರೂ ಸಹ ನೀರು ಸಿಗುತ್ತಿಲ್ಲ.

ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಗುಂಡ್ಲಗಿರಿ ಎಂಬ ಒಂದು ಹಳ್ಳಿ ಇದೆ ಆ ಹಳ್ಳಿಗೆ ಮಳೆಯ ಆಧಾರದಿಂದ ತುಂಬುವಂಥ ಒಂದು ಕೆರೆ ಇದೆ. ಆ ಕೆರೆಯಲ್ಲಿ ಜನರು ನೀರು ತೆಗೆದುಕೊಂಡು ಬಂದು ಕುಡಿಯುತ್ತಾರೆ. ಆದರೆ ಆ ಕೆರೆಯಲ್ಲಿಯೇ ದನಕರುಗಳನ್ನು ತೊಳೆಯುತ್ತಾರೆ. ಮತ್ತು ಚಿಕ್ಕಮಕ್ಕಳು ಮಲಮೂತ್ರ ಮಾಡಿದರೆ ಅದರಲ್ಲಿಯೇ ನೀರು ತೆಗೆದು ಉಪಯೋಗ ಮಾಡುತ್ತಾರೆ. ಇಂಥ ಕಶ್ಮಲವಾದಂಥ ನೀರನ್ನು ಆ ಜನರು ಕುಡಿಯುತ್ತಿದ್ದಾರೆ. ನಾನು ಈ ವಿಷಯದಲ್ಲಿ ಮಾನ್ಯ ಮಂತ್ರಿಗಳಿಗೆ ಪತ್ರವನ್ನು ಸಹ ಬರೆದಿದ್ದೇನೆ. ಮತ್ತು ನಾನು ಖುದ್ದಾಗಿ ಅವರನ್ನು ಭೇಟಿ ಮಾಡಿ ತಿಳಿಸಿದ್ದೇನೆ. ಆದರೆ ಇದುವರೆಗೂ ಯಾವ ಕ್ರಮವನ್ನು ಸಹ ಕೈಗೊಂಡಿಲ್ಲ. ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರನ್ನು ಒದಗಿಸಿಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ಆದರೆ ನನ್ನ ಕ್ಷೇತ್ರಕ್ಕೆ ಮಾತ್ರ ಕುಡಿಯುವ ನೀರನ್ನು ಒದಗಿಸಿಕೊಟ್ಟಿಲ್ಲ. ಮತ್ತು ಒಂದು ಕೊಳವೆ ಬಾವಿಯನ್ನು ಸಹ ಅಲ್ಲಿ ತೋಡಿಸಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅಲ್ಲಿನ ಜನರಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಜನತಾ ಮನೆಗಳ ಬಗ್ಗೆ. ನಮ್ಮ ಗುಂಡ್ಲಗಿರಿ ತಾಲ್ಲೂಕಿನಲ್ಲಿ ವಿಶೇಷವಾದಂಥ ಯಾವುದೇ ಕಾರ್ಯಕ್ರಮ ನಡೆದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಆಳುವ ಪಕ್ಷದ ಸದಸ್ಯರು ಮಾತನಾಡುತ್ತ ಹೇಳಿದರು. ಹಿಂದಿನ ಸರ್ಕಾರದವರು ಜನತಾ ಮನೆಗಳನ್ನು ಕಟ್ಟಿಸಿಕೊಟ್ಟಿದ್ದರು. ಆ ಮನೆಗಳು ಈಗ ಎಲ್ಲಾ ಬಿದ್ದು ಹೋಗಿವೆ. ಆದರೆ ಆ ಜನತಾ ಮನೆಗಳು ಬಿದ್ದು ಹೋಗಲು ಕಾರಣ ಆ ಮನೆಗಳನ್ನು ಕಟ್ಟಿಕೊಳ್ಳುವಾಗ ಅವರು ಸರಿಯಾಗಿ ಕಟ್ಟಿಕೊಳ್ಳದೆ ಬಿದ್ದು ಹೋಗಿವೆಯೇ ವಿನಃ ಬೇರೆ ಏನೂ ಅಲ್ಲ. ಹಿಂದಿನ ಸರ್ಕಾರದವರು ಜನತಾ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣದ ಕೊರತೆ ಯನ್ನು ಮಾಡಿಲ್ಲ. ಆ ಜನರಿಗೆ ಹೆಚ್ಚು ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಆದರೆ ಅವರು ಮನೆ ಗಳನ್ನು ಕಟ್ಟಿಕೊಳ್ಳುವಾಗ ಸರಿಯಾಗಿ ಕಟ್ಟಿಕೊಂಡಿಲ್ಲ. ಇದರಿಂದ ಅವರ ಮನೆಗಳನ್ನು ಅವರೇ ಕೆಡವಿಕೊಂಡಿದ್ದಾರೆ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡ್‌ನಲ್ಲಿ ಆ ವಿಷಯ ಬರುವುದಿಲ್ಲ.

ಶ್ರೀ ಮದನಗೋಪಾಲ ನಾಯಕ್.— ಆದರೆ ಈ ಸರ್ಕಾರದವರು ಜನತಾ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನೇ ಕೊಟ್ಟಿಲ್ಲ. ನಮ್ಮ ತಾಲ್ಲೂಕಿನಲ್ಲಿ ಜನತಾ ಮನೆಗಳನ್ನು ಕಟ್ಟಿಸಿ ಕೊಡಿ ಎಂದು ನಾನು ಸಂಬಂಧಪಟ್ಟ ಬಿ. ಡಿ. ಓ.ರವರ ಹತ್ತಿರ ಹೋಗಿ ವಿಚಾರ ಮಾಡಿದಾಗ ಅವರು ಹೇಳುತ್ತಾರೆ. ನಮಗೆ ಬಡ್ಜೆಟ್‌ನಲ್ಲಿ ಹಣವನ್ನು ಕೊಟ್ಟಿಲ್ಲವೆಂದು ಆದರೆ ಈ ರೀತಿಯ ತಾರತಮ್ಯ ವನ್ನು ತಾವು ಏತಕ್ಕೆ ಮಾಡುತ್ತಿರೋ ನನಗಂತೂ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ಇಲಾಖೆಯ ಡಿಮ್ಯಾಂಡ್ ಬಂದಾಗ ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಿ.ಡಿ.ಓ.ಗಳ ಕಂಟ್ರೋಲ್ ಅವರ ಇಲಾಖೆಗೆ ಬರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಮದನ ಗೋಪಾಲ ನಾಯಕ್.— ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂಥ ಕುಂದುಕೊರತೆಗಳ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ, ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಜನತೆ ಬಂದು ನಮ್ಮನ್ನು ಕೇಳುತ್ತಾರೆ ಆಗ ನಾವು ಅವರಿಗೆ ಏನು ಉತ್ತರ ಕೊಡಬೇಕೋ ನನಗಂತೂ ಗೊತ್ತಾಗುತ್ತಿಲ್ಲ. ಮತ್ತೆ ಮತ್ತೊಂದು ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ನಮ್ಮ ಸುರಪುರ ತಾಲ್ಲೂಕಿನ ಬ್ಯಾಂಕ್‌ಗಳಲ್ಲಿ ಸಾಲವನ್ನು ಪಡೆಯುವುದಕ್ಕಾಗಿ ರೈತರು ಹೋದರೆ ಆ ಬ್ಯಾಂಕ್‌ನವರು ಹೇಳುತ್ತಾರೆ ನಮ್ಮಲ್ಲಿ ಹಣ ಇಲ್ಲ. ನಮಗೆ ಬಡ್ಜೆಟ್ ಕೊಟ್ಟಿಲ್ಲವೆಂದು. ಆದರೆ ಆ ಬ್ಯಾಂಕ್‌ನವರು ಹೇಳುತ್ತಾರೆ ನೀವು ಕೊಡಬೇಕಾದಂಥ ಸಾಲವನ್ನು ಪಾವತಿ ಮಾಡಿದರೆ ಮತ್ತೆ ನಿಮಗೆ ಸಾಲವನ್ನು ಕೊಡುತ್ತೇವೆಂದು ಈ ರೀತಿಯ ತೊಂದರೆ ಬ್ಯಾಂಕ್‌ನ ವರಿಂದ ರೈತರಿಗೆ ಆಗುತ್ತಿದೆ. ಸರ್ಕಾರ ನಮ್ಮ ಪಕ್ಷವನ್ನು ಸಂಪೂರ್ಣವಾಗಿ ಅಲಕ್ಷ್ಯ ಮನೋಭಾವ ದಿಂದ ನೋಡುತ್ತಿದೆಯೆಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಆ ರೀತಿ

ಅಲಕ್ಷ್ಯ ಮನೋಭಾವನೆ ಬರುವುದಕ್ಕೆ ಕಾರಣ ನಾನು ಕಾಂಗ್ರೆಸ್ ಸದಸ್ಯನೆಂದು ಇರಬಹುದು. ಆ ರೀತಿಯ ಅಲಕ್ಷ್ಯ ಮನೋಭಾವನೆಯನ್ನು ಬಿಟ್ಟು ಎಲ್ಲಾ ತಾಲ್ಲೂಕು ಮತ್ತು ಗ್ರಾಮಗಳಿಗೂ ಧನ ಸಹಾಯ ಮಾಡುವಂತೆ ನನ್ನ ತಾಲ್ಲೂಕಿಗೂ ಧನ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಆಸ್ಪತ್ರೆಗಳ ಕೊರತೆ ಹೆಚ್ಚಾಗಿದೆ. ಈ ಆಸ್ಪತ್ರೆಗಳಲ್ಲಿ ಸಾಕಾದಷ್ಟು ಔಷಧಿಗಳನ್ನು ಒದಗಿಸಿ ಕೊಡುತ್ತಿಲ್ಲ, ಸುಮಾರು ೬-೭ ತಿಂಗಳಿಂದ ಅಲ್ಲಿಗೆ ಡಾಕ್ಟರ್ಸ್ ಪೋಸ್ಟ್ ಮಾಡುತ್ತಿಲ್ಲ, ಈ ವಿಷಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿದ್ದೇನೆ. ಅಲ್ಲಿ ಈಗಾಗಲೇ ಸುಮಾರು ಎರಡು ಮೂರು ಜನ ರೋಗಿಗಳು ಸತ್ತಿದ್ದಾರೆ. ಇಂಥ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಇದೆ. ಇದು ಜನತಾ ಸರ್ಕಾರದ ಧೋರಣೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ರೀತಿಯ ತಾರತಮ್ಯ ಮಾಡದೆ ಎಲ್ಲರಿಗೂ ಒಂದೇ ನ್ಯಾಯವನ್ನು ಒದಗಿಸಿಕೊಡಬೇಕು. ಮತ್ತು ಮಲತಾಯಿ ಧೋರಣೆ ತಾಳಬಾರದೆಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ವೀರಭದ್ರಪ್ಪ (ಕುಟ್ಟೂರು).—ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ಯ ಮಂತ್ರಿಗಳು ಇಡೀ ಕರ್ನಾಟಕ ರಾಜ್ಯದ ಜನತೆಗೆ ಕುಡಿಯುವ ನೀರನ್ನು ಒದಗಿಸಿ ಕೊಟ್ಟು ರಾಜ್ಯದ ಜನತೆಯ ವಿಶ್ವಾಸವನ್ನು ಸಂಪಾದನೆ ಮಾಡಿದ್ದಾರೆಂದು ಇದುವರೆಗೂ ಮಾನ್ಯ ಸದಸ್ಯರು ಹೇಳಿದರು. ಅನೇಕ ಹಳ್ಳಿಗಳಿಗೆ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರನ್ನು ಒದಗಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನೂ ಕೂಡ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ನನ್ನ ತಾಲ್ಲೂಕಿನ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಸುಮಾರು ೯ ಬೋರ್ ವೆಲ್‌ಗಳನ್ನು ಹಾಕಿದರು. ಆದರೆ ಒಂದು ಬೋರ್‌ವೆಲ್‌ನಲ್ಲಿ ಕೂಡ ಸರಿಯಾದಂಥ ಕುಡಿಯುವ ನೀರು ಸಿಗಲಿಲ್ಲ. ಆದ್ದರಿಂದ ನಮ್ಮ ಪ್ರದೇಶದಲ್ಲಿ ಗ್ರಾಮಾಂತರ ಕುಡಿಯುವ ನೀರಿನ ಸರಬರಾಜು ಯೋಜನೆಯ ಮುಖಾಂತರ ನೀರನ್ನು ಒದಗಿಸಿಕೊಟ್ಟರೆ ಒಳ್ಳೆಯದು. ಈ ಯೋಜನೆಯಿಂದ ಸರ್ಕಾರದವರು ಬಾವಿಗಳನ್ನು ತೋಡಿಸಿ ಆ ಬಾವಿಗಳ ಮುಖಾಂತರ ನಲ್ಲಿಗಳನ್ನು ಹಾಕಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಬರಗಾಲ ಪರಿಸ್ಥಿತಿಯ ನಿವಾರಣೆಗಾಗಿ ಡಿಪಿಎಪಿ. ಮತ್ತು ಎನ್‌ಆರ್‌ಇಪಿ. ಯೊಳಗೆ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದವರು ತೆಗೆದುಕೊಂಡು ಬಡಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದಾರೆ. ಮತ್ತು ಕೇಂದ್ರ ಸರ್ಕಾರದಿಂದ ನಮಗೆ ಬರತಕ್ಕಂಥ ಧನಸಹಾಯವನ್ನು ಸಂಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕು. ನಮಗೆ ಕೇಂದ್ರ ಸರ್ಕಾರದಿಂದ ಸುಮಾರು ೪ ಕೋಟಿ ರೂಪಾಯಿಗಳು ಬಂದರೆ ಅದರಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಇನ್ನು ಎರಡು ಕೋಟಿ ರೂಪಾಯಿಗಳನ್ನು ಇತರ ಮುಖ್ಯ ಬಾಬುಗಳಿಗೆ ಉಪಯೋಗಿಸಬೇಕು. ಇವೊತ್ತಿನ ದಿವಸ ಕೇಂದ್ರ ಸರ್ಕಾರದಿಂದ ನಮಗೆ ಬರತಕ್ಕಂಥ ಧನಸಹಾಯವೂ ಸಹ ಸರಿಯಾಗಿ ಬರುತ್ತಿಲ್ಲ. ೧೯೮೨-೮೩ನೇ ಸಾಲಿನಲ್ಲಿ ಅಧಿಕಾರಿಗಳ ಅಚಾತುರ್ಯದಿಂದ ಇಂಥ ಕೆಲಸಗಳು ನಡೆಯುತ್ತವೆ. ಅಂಥ ಅಚಾತುರ್ಯ ಆಗದಂತೆ ನೋಡಿಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈಗ ಎನ್.ಆರ್.ಡಬ್ಲ್ಯೂ.ಎಸ್. ಕೆಲಸ ಮುಗಿದ

೨-೦೦ ಪಿ.ಎಂ.

ಮೇಲೆ ಗ್ರಾಮಪಂಚಾಯತಿಗಳಿಗೆ ವಹಿಸಿಕೊಡುತ್ತಿದ್ದಾರೆ. ಆದರೆ, ನಗರ ನೀರು ಸರಬರಾಜನ್ನು ಸರ್ಕಾರವೇ ವಹಿಸಿಕೊಂಡಿದೆ. ಉದಾಹರಣೆಗೆ ಬಳ್ಳಾರಿಯ ನಗರ ನೀರು ಸರಬರಾಜು ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು, ವಿದ್ಯುಚ್ಛಕ್ತಿ ಮೊದಲಾದ ವ್ಯವಸ್ಥೆಗಳನ್ನು ಸರ್ಕಾರವೇ ವಹಿಸಿಕೊಂಡರೆ ಬಹಳ ಒಳ್ಳೆಯದು. ಇವುಗಳನ್ನು ಗ್ರಾಮ ಪಂಚಾಯಿತಿಯವರಿಗೆ ಕೊಟ್ಟರೆ ಅವರಿಗೆ ಸಮರ್ಪಕವಾಗಿ ನಡೆಸಿಗೊಂಡು ಹೋಗಲು ಬರುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕು. ಎಲ್ಲೆಲ್ಲಿ ನಲ್ಲಿ ಯೋಜನೆ ಇದೆ, ಅಲ್ಲೆಲ್ಲಾ ಸರ್ಕಾರವೇ ವಹಿಸಿಕೊಂಡು ವ್ಯವಸ್ಥಿತವಾಗಿ ನಡೆಸಿಕೊಡಬೇಕಾಗಿ ನಾನು ಸೂಚಿಸಬಯಸುತ್ತೇನೆ.

ಇನ್ನು, ಈ ಡಿಪಿಎಪಿ. ಕೆಳಗೆ ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು. ಈ ಯೋಜನೆ ಅಡಿಯಲ್ಲಿ ಮಾಡಿದ ರಸ್ತೆಗಳು ಮಳೆಗಾಲದಲ್ಲಿ ಹಾಳಾಗಿ ಹೋಗಿಬಿಡುತ್ತವೆ. ರಸ್ತೆಗಳನ್ನು ಮಾಡಿದ ಮೇಲೆ ಅವುಗಳ ಉಸ್ತುವಾರಿಗಾಗಿ ಸರ್ಕಾರ ಯಾವುದೇ ರೂಪದಲ್ಲಾಗಲೀ ಹಣವನ್ನು ಒದಗಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಮತ್ತು ಇದಕ್ಕಾಗಿ ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್‌ನ್ನು ಸ್ಥಾಪಿಸುವುದು ಒಳ್ಳೆಯದು. ಈ ಸಂದರ್ಭದಲ್ಲಿ ಗ್ರಾಮಾಂತರ ನೀರು ಸರಬರಾಜಿಗಾಗಿ ಕೇವಲ ೫೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಈ ಮೊತ್ತ ಬಹಳ ಕಡಿಮೆಯಾಯಿತು. ಬೆಂಗಳೂರು ನಗರ ಬಹಳ ದೊಡ್ಡ ನಗರ ಇಲ್ಲಿ ನೀರು ಪೂರೈಕೆಗೆ ಯೋಜನೆಯನ್ನು ಮಾಡಬೇಕಾದ ಅಗತ್ಯ ಇದೆ. ಒಂದು, ಎರಡು, ಮೂರನೇ ಹಂತದ ಯೋಜನೆಗಳಿಗೆ ನಾಲ್ಕು ನೂರು ಕೋಟಿ ರೂಪಾಯಿ ಆಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ೨ ಕೋಟಿ ಜನರು ಇರತಕ್ಕಂಥ ಪರಿಸ್ಥಿತಿ ಇರುವಾಗ ಕೇವಲ ೫೫ ಕೋಟಿ ರೂಪಾಯಿಗಳನ್ನು ನಿಗದಿ ಪಡಿಸಿರುವುದು ಬಹಳ ಕಡಿಮೆಯಾಯಿತು. ಇದಕ್ಕಾಗಿ ಇನ್ನೂ ೨೦-೩೦ ಕೋಟಿ ರೂಪಾಯಿಗಳನ್ನು ನೀಡಬೇಕಾದದ್ದು ಅವಶ್ಯಕವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅವಶ್ಯಕತೆ ಬಹಳವಾಗಿದೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ತೆಗೆದು ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಜನತಾ ಮನೆಗಳ ಬಗ್ಗೆ ಒಂದು ಮಾತನ್ನು ಹೇಳಬೇಕು. ಸನ್ಮಾನ್ಯ ಮಂತ್ರಿಗಳಾದ ಶ್ರೀ ಜಾಲಪ್ಪನವರು ನನ್ನ ಕ್ಷೇತ್ರಕ್ಕೆ ಬಂದಾಗ ಅವರನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋಗಲಾಯಿತು. ಒಂದು ಹಳ್ಳಿಯಲ್ಲಿ ೩೦ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ಅಲ್ಲಿ ವಾಸ ಮಾಡಲಿಕ್ಕೆ ಕೂಡ ಸಾಧ್ಯವಿಲ್ಲ. ಅಂತಹ ಮನೆಗಳಲ್ಲಿ ವಾಸ ಮಾಡಲಿಕ್ಕೆ ಯಾರ ಕೈಯಿಂದಲೂ ಸಾಧ್ಯವಿಲ್ಲ. ಇಂತಹ ವ್ಯವಸ್ಥೆ ಆಗಬಾರದು. ಜನತಾ ಮನೆಗಳನ್ನು ಕಟ್ಟಿಸಿಕೊಡುವಾಗ, ಸರ್ಕಾರಕೊಡುವ ಆರ್ಥಿಕ ಸಹಾಯದ ಮೊತ್ತವನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಮನೆ ಕಟ್ಟಲು ಈಗ ಇಟ್ಟಿಗೆ ಮೊದಲಾದ ಸಾಮಗ್ರಿಗಳ ಧಾರಣೆ ಹೆಚ್ಚಾಗಿರುವುದರಿಂದ ಬರೇ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಧ್ಯವಾಗುವುದಿಲ್ಲ. ಕನಿಷ್ಟ ಪಕ್ಷ ಐದು ಸಾವಿರ ರೂಪಾಯಿಯಾದರೂ ಕೊಟ್ಟರೆ ಒಳ್ಳೆಯ ಮನೆ ಕಟ್ಟಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಈ ಯೋಜನೆ ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ಹೇಳಬೇಕಾಗಿದೆ ಈ ಯೋಜನೆಯಲ್ಲಿ ಅನೇಕ ಕಡೆ ಹಣ ದುರುಪಯೋಗವಾಗಿದೆ, ಆದ್ದರಿಂದ ಈ ರೀತಿ ಆಗದಂತೆ, ನಮ್ಮ ಜನತಾ ಸರ್ಕಾರದವರು ಒಂದು ಶಾಸಕರ, ಅಧಿಕಾರಿಗಳ ಸಮಿತಿಯನ್ನು ನೇಮಿಸಿ, ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅವರ ಒಂದು ವರದಿಯನ್ನು ತರಿಸಿಕೊಂಡು ಎಲ್ಲೆಲ್ಲಿ ಈ ಯೋಜನೆ ವಿಫಲವಾಗಿದೆ ಎಂಬುನನ್ನು ಅರಿತುಕೊಂಡು, ಇದು ಅಲ್ಲಿ ಸಫಲವಾಗಬೇಕಾದರೆ ಏನು ಮಾಡಬೇಕೆಂದು ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡರೆ ಒಳ್ಳೆಯದೆಂದು ಹೇಳಿ, ಇದುವರೆಗೆ ಒಂದೆರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್, ನಾಗನಗೌಡ (ಕುರುಗೋಡು).—ಮಾನ್ಯ ಅಧ್ಯಕ್ಷರೇ, ಈಗ ಹೊಸ ಸದಸ್ಯರೆಲ್ಲರೂ ಗ್ರಾಮಾಭಿವೃದ್ಧಿ ಮತ್ತು ನೀರು ಸರಬರಾಜಿನ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಾನು ಕೇವಲ ಎರಡು-ಮೂರು ವಿಷಯಗಳ ಬಗ್ಗೆ ಮಾತ್ರ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಜನರು ಸಾಕಷ್ಟು ಅಭಿಪ್ರಾಯಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, ಬೆಂಗಳೂರು ನಗರಕ್ಕೆ ನೀರು ಸರಬರಾಜಿಗೆ ೨೦೦-೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಅದೇನೂ ದೊಡ್ಡ ಮಾತಲ್ಲ. ಅಲ್ಲಿ ನೀರಿನ ಪೂರೈಕೆಗೆ ಅಷ್ಟು ಖರ್ಚಾಗುತ್ತದೆ ಎಂದು ಹೇಳಿದರು. ಪ್ರತಿಯೊಂದು ಹಳ್ಳಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ೮೦೦ ಕೋಟಿ ರೂಪಾಯಿ ಆಗುತ್ತದೆ. ಇದನ್ನು ಆಧಾರವಾಗಿಟ್ಟುಕೊಂಡರೆ, ೩೦-೪೦ ಲಕ್ಷ ಜನಸಂಖ್ಯೆ ಇರುವ ಪಟ್ಟಣಕ್ಕೆ ೨೦೦-೨೫೦ ಕೋಟಿ ಖರ್ಚು ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಹೀಗಿರುವಾಗ ೨ ಕೋಟಿ ಜನರು ಇರತಕ್ಕಂಥ ಹಳ್ಳಿಗಳಿಗೆ ಎಂಟು ನೂರು ಕೋಟಿ ಖರ್ಚು ಮಾಡುವುದು ದೊಡ್ಡ ವಿಷಯವಲ್ಲ. ಇದನ್ನು ಪರಿಗಣಿಸುವಾಗ ಯಾವ ಸರ್ಕಾರವೇ ಇರಲಿ, ಹಿಂದಿನ ಸರ್ಕಾರವಾಗಲೀ, ಈಗಿನ ಸರ್ಕಾರವಾಗಲೀ, ಅದು ಹಳ್ಳಿಯ ಜನರ ವಿರುದ್ಧವಾದ ಸರ್ಕಾರವೆಂದು ಹೇಳಲೇಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳ ಕಳಕಳಿಯನ್ನು

ನಾನು ಮೆಚ್ಚುತ್ತೇನೆ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡದೇ ಇದ್ದರೆ, ಹಳ್ಳಿಯ ಜನರು ದಂಗೆ ಏಳುವ ಪರಿಸ್ಥಿತಿ ಬರಬಹುದು ಎಂದು ಪ್ರೆಸ್ ಮೂಲಕ ಹೇಳಿಕೆ ಕೊಡಲು ಅವರು ಯೋಚಿಸುತ್ತಿದ್ದಾರೆ. ಇನ್ನು, ಈ ಅಂತ್ಯೋದಯ ಕಾರ್ಯಕ್ರಮವನ್ನು ನಮ್ಮ ಜಿಲ್ಲೆಯಲ್ಲೂ ಸಹ ಕಾರ್ಯರೂಪಕ್ಕೆ ತಂದಿದ್ದಾರೆ. ದುರ್ದೈವದ ಒಂದು ಘಟನೆಯೆಂದರೆ ನಮ್ಮ ಜಿಲ್ಲೆಯಲ್ಲಿ ಒಂಭತ್ತು ಜನ ಶಾಸಕರಲ್ಲಿ ೫ ಜನ ಕಾಂಗ್ರೆಸ್ ಶಾಸಕರು ಇದ್ದಾರೆ. ಜನತಾ ಶಾಸಕರು ಮೂರು ಜನ ಇದ್ದಾರೆ. ಅಂತ್ಯೋದಯ ಸ್ಕೀಮ್‌ನ್ನು ಜನತಾ ಶಾಸಕರು ಇರತಕ್ಕಂಥ ಎರಡು ತಾಲ್ಲೂಕುಗಳಲ್ಲಿ ಮಾತ್ರ ಕಾರ್ಯರೂಪಕ್ಕೆ ತಂದಿದ್ದಾರೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಜನರೇ ಇದರ ಬಗ್ಗೆ ತೀರ್ಮಾನ ಮಾಡಲಿ ಎಂದು ನಾನು ಹೇಳುತ್ತೇನೆ. ಮತ್ತೊಂದು ವಿಷಯವನ್ನು ನಾನು ಅತ್ಯಂತ ವಿಷಾದದಿಂದ ಸರ್ಕಾರಕ್ಕೆ ತಿಳಿಸಬಯಸುತ್ತಿದ್ದೇನೆ. ಈಗ ಹಳ್ಳಿಗಳಲ್ಲಿ ಮಹಿಳೆಯರಿಗಾಗಿ ಶೌಚಗೃಹಗಳಿಲ್ಲ. ಇದರ ಬಗ್ಗೆ ಸರ್ಕಾರ ಆಲೋಚನೆಯನ್ನೇ ಮಾಡಿಲ್ಲ. ಕೊನೆಯದಾಗಿ ಕ್ಷಾಮದ ಬಗ್ಗೆ ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ್ ಸ್ಕೇರ್‌ಸಿಟಿ ಕಮಿಟಿ ಮೀಟಿಂಗ್‌ನಲ್ಲಿ ಒಂದು ನಿರ್ಣಯ ಆಗಿದೆ. ಅಲ್ಲಿ ಈ ರೀತಿ ಮಾಡುತ್ತಿದ್ದಾರೆ. ಇದು ಬರತಕ್ಕದ್ದು ಕ್ಷಾಮಕ್ಕಾಗಿ ಖರ್ಚು ಮಾಡತಕ್ಕಂಥ ಹಣ. ಇದನ್ನು ತಕ್ಷಣ ಪರಿಗಣಿಸಬೇಕು. ಇದು ಕೇಂದ್ರದ ಒಂದು ಗ್ರಾಂಟ್ ಇದೆ. ಇದನ್ನು ಲೋನ್ ಆಗಿ ಪರಿವರ್ತಿಸಬಾರದು.

ಇನ್ನು, ಅಂತಿಮವಾಗಿ ಸಿಂಪ್ಲಿಫೈಡ್ ವಾಟರ್ ಸಿಸ್ಟಮ್‌ಗೆ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲೂಕಿಗೆ ೪ ಲಕ್ಷ ೮೦ ಸಾವಿರ ರೂಪಾಯಿ ಬೇಕಾಗುತ್ತದೆ. ಈಗ ೫೫–೬೦ ಸಾವಿರ ರೂಪಾಯಿ ವೆಚ್ಚದಲ್ಲಿ ಒಂದು ಯೋಜನೆ ಈ ಸಂಬಂಧವಾಗಿ ಇದೆ. ಪ್ರತಿಯೊಂದು ಹಳ್ಳಿಗೂ ನೀರು ಕೊಡಲು ೮೦೦ ಕೋಟಿ ರೂಪಾಯಿ ಬೇಕಾಗಿಲ್ಲ. ೧೦೦ ಕೋಟಿ ರೂಪಾಯಿಗಳಲ್ಲಿ ಪ್ರತಿಯೊಂದು ಹಳ್ಳಿಗೂ ನೀರು ಕೊಡಲು ಸಾಧ್ಯವಿದೆ.

ಕೊನೆಯದಾಗಿ ನಮ್ಮ ತಾಲೂಕಿಗೆ ಹೋದವರ್ಷ ಎರಡು ಹಳ್ಳಿಗಳಿಗೆ ಮಾತ್ರ ಪ್ರೊಟೆಕ್ಟೆವ್ ವಾಟರ್ ಸಿಸ್ಟಮ್ ಪ್ರಕಾರ ಕೊಟ್ಟಿದ್ದಾರೆ. ಈ ಪ್ರಮಾಣದಲ್ಲಿ ನೋಡುವುದಾದರೆ ಪ್ರತಿಯೊಂದು ಹಳ್ಳಿಗೂ ಈ ಸೌಲಭ್ಯವನ್ನು ಕಲ್ಪಿಸಬೇಕಾದರೆ ಇನ್ನು ಐವತ್ತು ವರ್ಷ ಬೇಕಾಗುತ್ತದೆ. ಕನಿಷ್ಟಪಕ್ಷ ಒಂದು ಸಲಕ್ಕೆ ಪ್ರತಿಯೊಂದು ತಾಲೂಕಿನಲ್ಲೂ ಐದು–ಆರು ಹಳ್ಳಿಗಳಿಗೆ ಕೊಡದೇ ಇದ್ದರೆ, ನಾವು ಜನತೆಯಿಂದ ಆರಿಸಿ ಬಂದವರು ಏನು ಮಾಡುತ್ತಿದ್ದೇವೆ ಎಂದು ಜನರು ಕೇಳುತ್ತಾರೆ ; ಇದನ್ನು ಪರಿಗಣಿಸಬೇಕು. ಇಷ್ಟು ಮಾತುಗಳನ್ನು ಹೇಳಿ, ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ) — ಮಾನ್ಯ ಸಭಾಧ್ಯಕ್ಷರೇ ಈ ಸಭೆಯ ಮುಂದೆ ಇಟ್ಟಿರತಕ್ಕಂಥಾ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ನನ್ನ ಸ್ನೇಹಿತರು ಕೆಲವರು ವಿರೋಧ ಹಾಗೂ ಪರ ಮಾತನಾಡತಕ್ಕಂಥಾ ಅಭ್ಯಾಸ ಇರುವುದನ್ನು ನಾನು ನೋಡುತ್ತಾ ಬಂದಿದ್ದೇನೆ. ನಾನು ಇದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಇಷ್ಟೆ ಯಾವುದಾದರೂ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಂಡಾಗ ಅದು ಒಳ್ಳೆಯ ಕಾರ್ಯಕ್ರಮಗಳಾಗಿದ್ದರೆ ಒಳ್ಳೆಯ ಕಾರ್ಯಕ್ರಮ ಎಂದು ಹೇಳುವ ಸಂಪ್ರದಾಯ ಇರಬೇಕು, ಕೆಟ್ಟದ್ದು ಇದ್ದರೆ ಕೆಟ್ಟದ್ದು ಅಂತ ಹೇಳಬಹುದು. ಈ ಪ್ರಜಾಪ್ರಭುತ್ವದಲ್ಲಿ ನಾವು ಒಂದು ಹೆಚ್ಚಿನ ಪ್ರಗತಿ ಸಾಧಿಸಬೇಕು ಅಂತ ಇರುವಾಗ ಅದನ್ನು ಯಾವ ರೀತಿಯಾಗಿ ಸಾಧಿಸಬೇಕು ಅನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದಂತೆ ನಾನು ಕಾಣಲಿಲ್ಲ. ತಮಗೆ ಹೇಳಬೇಕಾದರೆ, ೧೯೮೨–೮೩ನೇ ಸಾಲಿನಲ್ಲಿ ಜನತಾ ಮನೆಗಳಾಗಲಿ ಅಥವಾ ಐ.ಡಿ.ಪಿ. ಪ್ರೋಗ್ರಾಂ ಆಗಲಿ, ಈ ಆರು ತಿಂಗಳಲ್ಲಿ ಹೆಚ್ಚಿನ ಒಂದು ಪ್ರಗತಿ ಸಾಧಿಸಲಿಲ್ಲಾ ಅನ್ನುವುದರ ಬಗ್ಗೆ ನನ್ನ ಸ್ನೇಹಿತರು ಅಂಕಿಅಂಶಗಳನ್ನು ಹೇಳಿದರು. ನಾನು ಈ ಸಂದರ್ಭದಲ್ಲಿ ಅವರನ್ನು ಕೇಳುವುದೇನೆಂದರೆ ಈ ಹಿಂದೆ ಇದ್ದಂಥಾ ಸರ್ಕಾರ ಆ ಜನಗಳಿಗೆ ಕುರಿಗಳನ್ನು ಕೊಳ್ಳಲಿಕ್ಕೆ ದನಗಳನ್ನು ಕೊಳ್ಳಲಿಕ್ಕೆ ಎಮ್ಮೆಗಳನ್ನು ಕೊಳ್ಳಲಿಕ್ಕೆ ಲಕ್ಷಾಂತರ ರೂಪಾಯಿ ಕೊಟ್ಟರಲ್ಲ, ಅದು ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ ಅನ್ನುವ ಅರಿವು ಗೊತ್ತಿದ್ದರೆ ಬಹುಶಃ ಈ ಮಾತು ಹೇಳುತ್ತಿರಲಿಲ್ಲವೋ ಏನೋ ? ಈ ಒಂದು ಕಾರ್ಯಕ್ರಮದಲ್ಲಿ ಇಂತಹ ದುಡ್ಡನ್ನು ಯೋಗ್ಯ ರೀತಿಯಲ್ಲಿ ಖರ್ಚು ಮಾಡಲು, ಮುಂದೆ ಈಗ ಮಾಡಲು ನೋಡಿಕೊಳ್ಳತಕ್ಕಂಥಾ ಜವಾಬ್ದಾರಿ ನಮ್ಮದೂ ಇದೆ ನಿಮ್ಮದೂ ಇದೆ. ಇದೆ ಆ ಒಂದು ಕರ್ತವ್ಯವನ್ನೂ ನಾವೂ ಮಾಡಲಿಲ್ಲಾ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ನೀರಿನ ಕೊಳವೆ ಬಾವಿಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವಾಗಿ ನಾನು ಹೇಳುವುದೇನೆಂದರೆ ನನ್ನದು ಶೃಂಗೇರಿ ಕ್ಷೇತ್ರ. ನಮ್ಮ ಕಡೆ ಒಂದು ದಿವಸಕ್ಕೆ ೭-೮ ಇಂಚು ಮಳೆ ಬರುತ್ತದೆ. ಬಯಲು ಸೀಮೆಗೂ ಮಲೆನಾಡಿಗೂ ಇದನ್ನು ಹೋಲಿಸಿದರೆ ಕಷ್ಟ ವಾಗುತ್ತದೆ. ನಮ್ಮ ಕಡೆ ಕೆಲವು ಕಡೆಗಳಲ್ಲಿ ಕೊಳವೆ ಬಾವಿಗಳನ್ನು ಸಹ ಮಾಡಿದ್ದಾರೆ. ನಾನು ಅವರಲ್ಲಿ ಕೇಳುವುದೇನೆಂದರೆ ನಮ್ಮ ಕಡೆಯಲ್ಲಿ ಹೆಚ್ಚಿಗೆ ಓಪನ್‌ವೆಲ್ಸ್ ಕೊಟ್ಟರೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಇನ್ನೊಂದು ವಿಷಯ ನಾನು ಹೇಳುವುದೇನೆಂದರೆ ನಮ್ಮ ಕಡೆ ಇರ ತಕ್ಕಂಥಾ ಓಪನ್ ವೆಲ್ಸ್‌ನಲ್ಲಿ ಸುಮಾರು ೧೦೦ಕ್ಕೆ ೧೨ ಬಾವಿಗಳಲ್ಲಿ ನೀರು ಇಲ್ಲ. ಒಂದು ಓಪನ್‌ವೆಲ್ ತೆಗೆಯಬೇಕಾದರೆ ಈವೊತ್ತಿನ ದಿವಸ ೧೦-೧೫ ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದರ ಬದಲು ಈಗ ಯಾವ ಓಪನ್‌ವೆಲ್‌ನಲ್ಲಿ ನೀರು ಇರುವುದಿಲ್ಲವೋ ಅದಕ್ಕೆ ೪-೫ ಸಾವಿರ ರೂಪಾಯಿ ಖರ್ಚು ಮಾಡಿದರೆ, ಅದನ್ನು ಸ್ವಲ್ಪ ಆಳ ಮಾಡಿದರೆ ಸಾಕು ಚೆನ್ನಾಗಿ ನೀರು ಬರುತ್ತದೆ. ಆದುದರಿಂದ ನಮ್ಮ ಕಡೆಯಲ್ಲಿ ಹೆಚ್ಚಿನ ರೀತಿಯಲ್ಲಿ ಓಪನ್ ವೆಲ್ಸ್ ಮಾಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಈ ಬಗ್ಗೆ ಇನ್ನೊಂದು ವಿಚಾರ ಏನೆಂದರೆ ನಮ್ಮ ಭಾಗದಲ್ಲಿ ಅಲ್ಲಿ ಇಲ್ಲಿ ಗುಂಡ್ಡಗಳು ಇವೆ, ಸಣ್ಣ ಸಣ್ಣ ಝರಿಗಳು ಹರಿದು ಬರುತ್ತವೆ. ಅದನ್ನು ಗ್ರಾವಿಟಿ ಮುಖಾಂತರ ನೀರನ್ನು ಹರಿಸುವ ಒಂದು ವ್ಯವಸ್ಥೆ ಮಾಡಿದರೆ ಹೆಚ್ಚಿನ ಪ್ರಯೋಜವಾಗುತ್ತದೆ ಎಂದು ಹೇಳುತ್ತೇನೆ. ಹಿಂದೆಯೇ ಈ ಕೆಲಸ ಮಾಡಬೇಕಾಗಿತ್ತು, ಆದರೂ ಈಗಲೂ ತಡವಾಗಿಲ್ಲ. ಬಯಲುಸೀಮೆಗೂ ಮಲೆನಾಡಿಗೂ ಹೋಲಿಸದೆ ಈಗಲಾದರೂ ನಮ್ಮ ಮಲೆನಾಡಿಗೆ ಒಂದು ಆದ್ಯತೆ ಕೊಟ್ಟು ಈ ಕೆಲಸ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ನಾನು ಮೊದಲೇ ಹೇಳಿದ ಹಾಗೆ ನಮ್ಮ ಮಲೆನಾಡು ಭಾಗದಲ್ಲಿ ಒಂದು ದಿವಸಕ್ಕೆ ೮-೧೦ ಇಂಚು ಮಳೆ ಬರುವುದರಿಂದ ಮಳೆಗಾಲದಲ್ಲಿ ಅಲ್ಲಿ ರಸ್ತೆ ಸೇತುವೆಗಳ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ನಮ್ಮ ಭಾಗಕ್ಕೆ ಈಗಲಾದರೂ ಕೂಡ ಹೆಚ್ಚಿನ ಹಣ ಒದಗಿಸಿ ಹೆಚ್ಚು ಹೆಚ್ಚು ರಸ್ತೆಗಳನ್ನೂ ಮತ್ತು ಸೇತುವೆಗಳನ್ನೂ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ನಮ್ಮ ಕಡೆ ಸಣ್ಣ ಸಣ್ಣ ಹೊಳೆಗಳು ಹರಿಯುವುದರಿಂದ ಅದಕ್ಕೆ ೫-೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು ೧೨-೨೦ ಎಕರೆಗೆ ನೀರಾವರಿಯಾಗುತ್ತದೆ. ಇದರಿಂದ ಆ ರೈತರು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೂ ಕೂಡ ಅನುಕೂಲವಾಗುತ್ತದೆ. ನಮ್ಮ ಭಾಗದಲ್ಲಿ ದೊಡ್ಡ ದೊಡ್ಡ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಆ ಮುಖಾಂತರವಾದರೂ ನೀರು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಇನ್ನು ನಮ್ಮ ಸ್ನೇಹಿತರ ಈ ಸರ್ಕಾರ ಬಂದ ಮೇಲೆ ಏನು ಸಾಧಿಸಿದೆ ಎನ್ನುವ ಬಗ್ಗೆ ಮಾತನಾಡಿ ದ್ದಾರೆ. ಈ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಅಧಿಕಾರಿ ವಿಕೇಂದ್ರಿ ಕರಣದ ಬಗ್ಗೆ ಮಹಾತ್ಮಾ ಗಾಂಧೀಜಿಯವರು ಏನು ಭಾಷೆ ಕೊಟ್ಟಿದ್ದಾರೆ, ದಿವಂಗತ ನೆಹರೂರವರು ಏನು ಹೇಳಿದ್ದಾರೆ ಅದನ್ನು ಇವರ ಕಾಲದಲ್ಲಿ ಅಂದರೆ ೧೯೭೩-೭೪ನೇ ಸಾಲಿನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ. ಹಳ್ಳಿಯಲ್ಲಿರತಕ್ಕಂಥ ಜನರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳತಕ್ಕಂಥ ರೀತಿಯಲ್ಲಿ ಅಧಿಕಾರ ವಿಕೇಂದ್ರಿಕರಣ ಮಾಡುವುದಕ್ಕೆ ಜಿಲ್ಲಾ ಪರಿಷತ್ತು ಹಾಗೂ ಗ್ರಾಮೀಣ ಪಂಚಾಯಿತಿ ನಿರ್ಮಾಣದ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಅವರೆಲ್ಲರೂ ತಮ್ಮದೇ ಆದಂಥಾ ಜವಾಬ್ದಾರಿಯನ್ನು ತಿಳಿದುಕೊಂಡು ಸರ್ಕಾರ ನಡೆಸತಕ್ಕಂಥಾ ರೀತಿಯಲ್ಲೇ ಅವರೂ ನಡೆಸಿಕೊಂಡು ತಮ್ಮ ಅಭಿವೃದ್ಧಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅನುಕೂಲ ವಾಗುತ್ತದೆ. ಆವಾಗ ಡೆಲ್ಲಿಯಿಂದ ಬೆಂಗಳೂರಿಗೂ, ಬೆಂಗಳೂರಿನಿಂದ ಪ್ರತಿ ಹಳ್ಳಿಗೂ ಅಧಿಕಾರೀ ವಿಕೇಂದ್ರೀಕರಣವಾಗುತ್ತದೆ. ಹೀಗೆ ಈ ಸರ್ಕಾರ ಬಂದ ಮೇಲೆ ಸಾಧಿಸಿರುವುದರ ಬಗ್ಗೆ ಏನೂ ಹೇಳಿ ಲ್ಲವೋ. ಇನ್ನೊಂದು ವಿಷಯ ಹೇಳಬೇಕಾದರೆ, ಈ ಸರ್ಕಾರ ಬಂದ ಮೇಲೆ ೧೮ ವರ್ಷಕ್ಕೆ ಮೇಲ್ಪಟ್ಟು ಇರುವವರಿಗೆ ಮತದಾನ ಕೊಡುವ ಒಂದು ವ್ಯವಸ್ಥೆ ಮಾಡಿದೆ ಎನ್ನುವುದನ್ನು ನಾನು ಬಹಳ ಸಂತೋಷ ದಿಂದ ಹೇಳುತ್ತೇನೆ.

ಇನ್ನು ಅಂತ್ಯೋದಯ ಕಾರ್ಯಕ್ರಮವನ್ನು ಇವರು ಏನು ಇಟ್ಟಿದ್ದಾರೆ ಇದು ಎಲ್ಲಾ ಹಳ್ಳಿಗಳಲ್ಲೂ ಮುಂದೆ ಫಲಪ್ರದವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಕಟ್ಟಿಗೆ ಅಭಾವದ ಬಗ್ಗೆ ಹೇಳುವುದಾದರೆ, ಇದು ಎಲ್ಲಾ ಕಡೆಯೂ ಇದೆ. ಎಲ್ಲಾ ಹಳ್ಳಿಯಲ್ಲೂ ಕಟ್ಟಿಗೆ ಅಭಾವ ಇದೆ. ಆದುದರಿಂದ ನಾನು ಹೇಳುವುದೇನೆಂದರೆ ಗೋಬರ್‌ಗ್ಯಾಸ್ ಅನ್ನು ಹೆಚ್ಚು ಹೆಚ್ಚಾಗಿ ಇಂಟ್ರಡ್ಯೂಸ್ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಮೊದಲು ಈ ಗೋಬರ್ ಗ್ಯಾಸ್ ಮಾಡಬೇಕಾದರೆ ೭–೫ ಸಾವಿರ ರೂಪಾಯಿನಲ್ಲಿ ಆಗುತ್ತಿತ್ತು. ಈಗಿನ ಎಸ್ಟಿಮೇಟ್ ನೋಡಿದರೆ ಅದಕ್ಕೆ ೨೦–೩೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಇದಕ್ಕೆ ಸರ್ಕಾರದವರು ಹೆಚ್ಚಿಗೆ ಸಬ್ಸಿಡಿ ಕೊಟ್ಟು ಎಲ್ಲಾ ಕಡೆಯೂ ಹೆಚ್ಚು ಹೆಚ್ಚಾಗಿ ಉಪಯೋಗಿಸುವುದಕ್ಕೆ ಹೆಚ್ಚು ಹಣ ಕೊಟ್ಟು ಆ ಮೂಲಕ ಎಲ್ಲಾ ಜನರಿಗೂ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ) —ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಖಾತೆಯ ಸಚಿವರು ಈ ಸದನದ ಮುಂದೆ ಇಟ್ಟಿರತಕ್ಕಂಥಾ ಳ ಬೇಡಿಕೆಗಳನ್ನು ತಾತ್ವಿಕ ದೃಷ್ಟಿಯಿಂದ ವಿರೋಧಿಸುತ್ತಾ ಅದರ ಬಗ್ಗೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಮಾತ್ರ ಇಚ್ಛೆ ಪಡುತ್ತೇನೆ ಮಾನ್ಯ ಅಧ್ಯಕ್ಷರೇ, ಈ ಗ್ರಾಮೀಣ ಅಭಿವೃದ್ಧಿ ನಾನು ಪಂಚಾಯತ್ ರಾಜ್ ಖಾತೆ ಹೊಣೆಯನ್ನು ಹೊತ್ತಿರತಕ್ಕಂಥಾ ಯುವಕ ಮಂತ್ರಿಗಳು ಏನು ಇದ್ದಾರೆ, ಇದನ್ನು ತಿಳಿದಿರತಕ್ಕಂಥಾ ಮಂತ್ರಿಗಳು ಉತ್ಸಾಹಿ ಇದ್ದಾರೆ ಅವರು ಇದನ್ನು ಸ್ವಲ್ಪ ಗಮನಿಸಬೇಕು. ಹಿಂದೆ ಹಳೇ ಮೈಸೂರು ಇದ್ದಾಗಲೂ ಕೂಡ ಈ ಒಂದು ಸ್ವತಂತ್ರ ಸ್ಥಾನ ಹೊಂದಿ ತನ್ನದೇ ಆದಂಥ ರೀತಿಯಲ್ಲಿ ಗ್ರಾಮೀಣ ಅಭಿವೃದ್ಧಿಯ ಒಂದು ಇಲಾಖೆಯನ್ನು ತೆರೆದು ಪೂರ್ವ ಭಾವಿಯಾಗಿಯೇ ಕೆಲಸಗಳನ್ನು ಮಾಡಿರತಕ್ಕಂಥಾದ್ದು ಸರ್ಕಾರಕ್ಕೆ ಇದು ವೇದ್ಯವಾಗಿದೆ ಎಂದು ನಾನಾದರೂ ಕೂಡ ಈ ಸಂರ್ಭದಲ್ಲಿ ಭಾವಿಸುತ್ತೇನೆ ನಮಗೆ ಸ್ವಾತಂತ್ರ್ಯ ಬಂದಮೇಲೆ ೧೯೪೭ರಿಂದ ೧೯೫೨ರ ವರೆಗೆ ಕೇಂದ್ರ ಸರ್ಕಾರದವರೆ ಒಂದು ನಿರ್ಣಯ ಮಾಡಿ ಎಲ್ಲಾ ರಾಜ್ಯದಲ್ಲೂ ಕೂಡ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಜಾರಿಗೆ ಕೊಟ್ಟು ಅದನ್ನು ಹಂತಹಂತವಾಗಿ ಮಾಡಲು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಮುಖಾಂತರ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗುತ್ತಾ ಇರುವುದು ತಮಗೆಲ್ಲಾರಿಗೂ ಗೊತ್ತಾಗಿದೆ.

೧೯೫೨ರಲ್ಲಿ ಕೇಂದ್ರ ಸರ್ಕಾರದವರು ರಾಷ್ಟ್ರೀಯ ವಿಸ್ತರಣಾ ಯೋಜನೆಯ ನಂತರ ಜಾರಿಗೆ ಕೊಟ್ಟಂತಹ ಕಾರ್ಯಕ್ರಮ ಸಮಾಜ ವಿಕಾಸ ಅಭಿವೃದ್ಧಿ ಕಾರ್ಯಕ್ರಮ. ಈ ಕಾರ್ಯಕ್ರಮಗಳನ್ನು ಸರ್ಕಾರದವರು ಸಮಾಜದಲ್ಲಿರುವ ಬಡವರ, ದೀನದಲಿತರ ಮತ್ತು ಹರಿಜನ ಗಿರಿಜನರ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಯಾರು ಬಡತನದ ರೇಖೆಯ ಕೆಳಗೆ ಅವರನ್ನು ಮೇಲಕ್ಕೆತ್ತಲು ಸುಮಾರು ಹತ್ತಾರು ವರ್ಷಗಳಿಂದ ಜಾರಿಗೆ ತಂದರು. ಬರಗಾಲ ಪೀಡಿತ ಪ್ರದೇಶಗಳಲ್ಲಿ ಸಮಗ್ರವಾಗಿ ಈ ಕಾರ್ಯಕ್ರಮಗಳನ್ನು ತೆಗೆದುಕೊಂಡು, ಅಂತ್ಯೋದಯ ಕಾರ್ಯಕ್ರಮವನ್ನು ಇತ್ತೀಚೆಗೆ ಸರ್ಕಾರದವರು ತಮ್ಮ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವುದರ ಜೊತೆಗೆ ಬಡವರ ದೀನದಲಿತರ ಮತ್ತು ಬಡತನದ ರೇಖೆಯಿಂದ ಕೆಳಗೆ ಇರತಕ್ಕವರ ಜೀವನವನ್ನು ಸುಧಾರಿಸತಕ್ಕ ಕೆಲಸಗಳನ್ನು ಮಾಡಿದ್ದಾರೆ, ೧೯೫೨ರಲ್ಲಿ ಜಾರಿಗೆ ಕೊಟ್ಟಂಥ ಈ ಯೋಜನೆಗಳಲ್ಲಿ ಗ್ರಾಮಾಂತರಗಳಲ್ಲಿ ೨೫ ವಂತಿಗೆಯನ್ನು ತೆಗೆದುಕೊಂಡು, ಕೆಲವು ಸಂದರ್ಭದಲ್ಲಿ ೪೦ ಭಾಗ ವಂತಿಗೆಯನ್ನು ತೆಗೆದುಕೊಂಡು ಇನ್ನೂ ಕೆಲವು ಸಂದರ್ಭಗಳಲ್ಲಿ ೬೦ ಭಾಗ ವಂತಿಯನ್ನು ತೆಗೆದುಕೊಂಡು ಅಂದು ಅಧಿಕಾರಿಗಳು ಗ್ರಾಮಾಂತರಗಳಿಗೆ ಹೋಗಿ ಯಾವರೀತಿಯಲ್ಲಿ ಕೆಲಸ ಮಾಡುತ್ತಿದ್ದರೋ ಆರೀತಿಯಲ್ಲಿ ಇಂದು ಸರ್ಕಾರದವರು ೧೫–೧೬ ಕಾರ್ಯ ಕ್ರಮಗಳನ್ನು ಈ ದಿಸೆಯಲ್ಲಿ ಅಳವಡಿಸಿಕೊಂಡಿದ್ದರೂ ಸಹ ಆಗ ಸಾಧಿಸಿದಂಥ ಸಾಧನೆಯನ್ನು ಈಗ ಸಾಧಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೆ ನಾನು ಈ ಮಾತನ್ನು ಟೀಕೆಗಾಗಿ ಹೇಳುತ್ತಿದ್ದೇನೆಂದು ಯಾರೂ ಭಾವಿಸಬಾರದು, ಕರ್ನಾಟಕರಾಜ್ಯದಲ್ಲಿ ೧೯೮೩ನೇ ಇಸವಿ ಬಹಳ ಬರಗಾಲದಿಂದ ಕೂಡಿದ ಕಾಲ ಎಂದು ಹೇಳಿದರೆ, ತಪ್ಪಾಗಲಾರದು: ೧೯೭೨ರಲ್ಲಿ ರಾಜ್ಯದ ಬಹುಭಾಗದಲ್ಲಿ ಬರಗಾಲ ಇತ್ತು, ನಮ್ಮ ಸ್ನೇಹಿತರೊಬ್ಬರು, ಹೇಳಿದರು ಆಗ ಆಹಾರಕ್ಕೆ ಮಾತ್ರ ಅಭಾವ ಇತ್ತು

ನೀರಿಗೆ ಅಭಾವ ಇರಲಿಲ್ಲ. ಈಗ ಆಹಾರಕ್ಕೂ ಅಭಾವ ಇದೆ, ನೀರಿಗೂ ಅಭಾವ ಇದೆ ಎಂದು. ನಮ್ಮ ಅನುಭವದಲ್ಲಿ ಹೇಳುವುದಾದರೆ, ಕೊಳವೆ ಬಾವಿಗಳನ್ನು ತೆಗೆಯತಕ್ಕ ಯೋಜನೆ ಆಗ ಇರಲಿಲ್ಲ, ಇದು ಇತ್ತೀಚೆಗೆ ಬಂದಿದೆ. ಇದು ೧೯೭೪—೭೫—೭೬ರ ನಂತರ ಬಂದಂಥ ಯೋಜನೆ. ಆಗ ತೆರೆದ ಬಾವಿಗಳನ್ನು ಆಳ ತೆಗೆಯುವುದು ಕೆರೆ ಕಟ್ಟೆಗಳನ್ನು ದುರಸ್ತಿ ಮಾಡಿದರೆ ನೀರಿನ ಅಭಾವ ನೀಗುತ್ತಿತ್ತು. ಕೊಳವೆ ಬಾವಿಗಳನ್ನು ತೆಗೆಯತಕ್ಕ ಯೋಜನೆ ಇತ್ತೀಚೆಗೆ ಬಂದಂಥಾದ್ದು. ೧೯೭೪ ರಿಂದ ಈಚೆಗೆ ಕುಡಿಯುವ ನೀರಿನ ಅಭಾವ ಆದಾಗ ಸರ್ಕಾರದವರು ಕೆಲವು ಯಂತ್ರಗಳನ್ನು ಕಂಡುಕೊಂಡು ಬಾವಿಗಳನ್ನು ೫೦ ಅಡಿ ಆಳ ತೆಗೆದರೆ ೧೦೦೦ ರಿಂದ ೨೦೦೦ ಗ್ಯಾಲನ್‌ಗಳಷ್ಟು ನೀರು ಬರುತ್ತಿತ್ತು. ನಮ್ಮ ರಾಜ್ಯದ ದುರ್ದೈವವೋ, ಏನೋ, ನಾನು ಜನತಾ ಸರ್ಕಾರ ಬಂದಂಥ ದುರ್ದೈವ ಎಂದು ಹೇಳುವುದಿಲ್ಲ, ನಮ್ಮ ರಾಜ್ಯದ ದುರ್ದೈವ ಎಂದೇ ಹೇಳುತ್ತೇನೆ, ಈಗ ೧೦೦ ಅಡಿ ಆಳ ಬಾವಿ ತೆಗೆದರೂ ಸಹ ೩೦೦–೪೦೦ ಗ್ಯಾಲನ್ ನೀರು ಬರುವುದಿಲ್ಲ. ಕೆಲವು ಕಡೆ ನೀರೇ ಬರದೆ ಇರತಕ್ಕ ಪರಿಸ್ಥಿತಿ ಬಂದಿದೆ. ಭೂಮಿಯಲ್ಲಿ ನೀರಿನ ಆಳ ಬಹಳ ಕೆಳಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ ಮುಂದೆ ನೀರಿನ ಜಾಡ್ಯವೇ ದೊಡ್ಡ ಸಮಸ್ಯೆ ಯಾಗುವ ಕಾಲ ಬಂದರೆ ಅದಕ್ಕೆ ನಾವು ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಸರ್ಕಾರ ದವರು ಇದನ್ನು ಸುಧಾರಿಸುವ ಸಲವಾಗಿ ಅವರು ತಮ್ಮ ಕೈಲಾದ ಪ್ರಯತ್ನವನ್ನು ಮಾಡಿ ಕಳೆದ ೬ ತಿಂಗಳಲ್ಲಿ ಸುಮಾರು ೧೩ ಸಾವಿರ ಬಾವಿಗಳನ್ನು ಹಾಕಿದ್ದಾರೆಂದು ಅಂಕಿ ಸಂಖ್ಯೆಗಳ ತಿಳಿಸುತ್ತದೆ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೂ ೧೬ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇರುವಾಗ ಅದರ ಆಧಾರದ ಮೇಲೆ ಕೆಲಸ ಕಾರ್ಯಗಳು ಆಗಿಲ್ಲ ಎಂದು ಕೆಲವು ಸದಸ್ಯರು ಮನ ನೊಂದು ನಮ್ಮ ಕಳಕಳಿಯನ್ನು ವ್ಯಕ್ತ ಮಾಡಿದ್ದರಲ್ಲಿ ಅರ್ಥವಿದೆಯೆಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲೆಲ್ಲಿ ಯಾವ ರೀತಿಯಲ್ಲಿ ಅನ್ಯಾಯವಾಗಿದೆ, ಅಂಥ ಕಡೆ ಪರಿಸ್ಥಿತಿ ಯನ್ನು ಸುಧಾರಿಸುವುದಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದು ಕೊಳ್ಳಬೇಕೆಂದು ನನ್ನ ಮನವಿ.

ನಮ್ಮ ಮೈಸೂರು ಜಿಲ್ಲೆಯಲ್ಲಿಯೂ ಈ ಕೊಳವೆ ಬಾವಿಗಳನ್ನು ತೋಡಿದ್ದಾರೆ. ಕೈ ಪಂಪುಗಳನ್ನು ಸಹ ಈ ಬಾವಿಗಳಿಗೆ ಜೋಡಿಸಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಕೈ ಪಂಪುಗಳನ್ನು ಜೋಡಿಸುವ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದ ಒಳ್ಳೆಯ ಯೋಜನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಮತ್ತು ಅವರು ಜವಾಬ್ದಾರಿಯಿಂದ ನಡೆದು ಕೊಂಡರೆ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಿದೆ. ಈ ಅಧಿಕಾರಿಗಳು ಎಲ್ಲಿ ಅಭಾವ ಪರಿಸ್ಥಿತಿ ಜಾಸ್ತಿ ಇದೆ, ಎಲ್ಲಿ ಹೆಚ್ಚಿನ ಎಕ್ವಿಪ್‌ಮೆಂಟ್‌ಗಳ ಅವಶ್ಯಕತೆ ಇದೆ ಅಲ್ಲಿಗೆ ಜಾಗರೂಕತೆ ವಹಿಸಿ ಕೆಲಸ ಮಾಡಬೇಕು. ಈ ರೀತಿಯ ಆದೇಶವನ್ನು ಅಧಿಕಾರಿಗಳಿಗೆ ತಾವು ಕೊಡಬೇಕು, ಈಗ ತಾತ್ಕಾಲಿಕ ವಾಗಿ ತೋಡಿರತಕ್ಕ ಬಾವಿಗಳಿಗೆ ಪಂಪುಗಳನ್ನು ಜೋಡಿಸತಕ್ಕ ಕೆಲಸ ಮಾಡಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳುತ್ತೇನೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ನಮ್ಮಲ್ಲಿ ರಾಷ್ಟ್ರೀಯ ಗ್ರಾಮೀಣ ಯೋಜನೆಯನ್ವಯ ನೀರನ್ನು ಒದಗಿಸತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಸಾಕಾದಷ್ಟು ಹಳ್ಳಿಗಳಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ಇಡೀ ರಾಜ್ಯದಲ್ಲಿಯೇ ಎಲ್ಲಾ ಹಳ್ಳಿಗಳಿಗೂ ಅನ್ವಯವಾಗತಕ್ಕ ರೀತಿಯಲ್ಲಿ ಈ ಯೋಜನೆಯನ್ನು ತಯಾರು ಮಾಡಿ ಯಾವುದಾದರೂ ಒಂದು ಹಂತದಲ್ಲಿ ದುಡ್ಡನ್ನು ಒದಗಿಸಿ ನೀರಿನ ಅಭಾವವನ್ನು ನೀಗಿಸುವುದು ಸಾಧು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ ಈ ಯೋಜನೆಯಲ್ಲಿ ಕೊಳವೆ ಬಾವಿಗಳಿಗೆ ಹಾಕಿರತಕ್ಕ ಪಂಪು ಮತ್ತು ಮೋಟಾರ್‌ಗಳು ಕೆಟ್ಟಂಥ ಸಂದರ್ಭದಲ್ಲಿ ತಿಂಗಳುಗಟ್ಟಲೆ ಅವುಗಳನ್ನು ದುರಸ್ತಿ ಮಾಡದೆ ಜನರಿಗೆ ಕುಡಿಯುವ ನೀರಿನ ತೊಂದರೆಯಾಗಿರುತ್ತದೆ. ಇಂಥ ಕಡೆಯಲ್ಲಿ ಸರ್ಕಾರದ ವರು ಏನಾದರೂ ಒಂದು ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ ಮಾಡಿ ನಂತರ ಈ ಮೋಟಾರ್‌ಗಳನ್ನು ಸರಿಯಾಗಿ ರಿಪೇರಿ ಮಾಡತಕ್ಕ ವ್ಯವಸ್ಥೆಯನ್ನು ಮಾಡುವುದು ಸಾಧು ಎಂದು ನಾನಾದರೂ ಈ ಸಂದರ್ಭ ದಲ್ಲಿ ತಮಗೆ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಅನೇಕ ಯೋಜನೆಗಳನ್ನು ಗ್ರಾಮೀಣ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರದವರು ಕೈಗೊಂಡಿರುವುದರಿಂದ ಈ ಸಮಸ್ಯೆಯನ್ನು ಸ್ವಲ್ಪ ಮಟ್ಟಿ ಗಾದರೂ ಬಗೆಹರಿಸಬಹುದಾಗಿದೆ. ಆದರೆ ತಾಲ್ಲೂಕು ಬೋರ್ಡ್‌ಗಳ ಅಧಿಕಾರ ವರ್ಗ, ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿರತಕ್ಕ ಅಧಿಕಾರ ವರ್ಗದವರು ಈ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅಳವಡಿಸಿಕೊಂಡದ್ದೇ ಆದರೆ ಇವು ಬಡವರಿಗೆ ಮುಟ್ಟಿ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತದೆ.

ಈಗ ಈ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೆ ಇದ್ದುದರಿಂದ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಇಲ್ಲಿ ಒಂದು ನ್ಯೂನತೆ ಇದೆಯೆಂದು ನಾನು ಕೇಳಿದ್ದೇನೆ. ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿಯೇ ಒಂದು ಸರ್ವೀಸಸ್ ಯೂನಿಟ್ ಮಾಡಿ, ಅವರು ಕೊಳವೆ ಬಾವಿಗಳನ್ನು ತೆಗೆಯತಕ್ಕದ್ದು ಮತ್ತು ರಿಪೇರಿ ಮಾಡತಕ್ಕದ್ದು ಮಾಡಿದರೆ ಒಳ್ಳೆಯದು. ಬೇರೆ ಇಲಾಖೆಯವರು ಬಂದು ಈ ಕೆಲಸಗಳನ್ನು ಮಾಡುವುದಾದರೆ ಅಷ್ಟು ಸಮರ್ಪಕವಾದ ಕೆಲಸ ಆಗುವುದಿಲ್ಲ. ಆದುದರಿಂದ ಸರ್ಕಾರದವರು ಈ ಒಂದು ಸರ್ವೀಸಸ್ ಭಾಗವನ್ನು ಜಾರಿಗೆ ತರುವುದು ಸಾಧುವಾದುದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಕಮ್ಯುನಿಟಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳು ಪ್ರಾರಂಭವಾದ ಕಾಲದಲ್ಲಿ ಸುಮಾರು ೨೫–೩೦ ವರ್ಷಗಳಿಂದ ಸಮಾಜ ಶಿಕ್ಷಣ ವಿಸ್ತರಣಾ ಅಧಿಕಾರಿಗಳು ಎಂದು ಗಂಡಸರು ಮತ್ತು ಹೆಂಗಸರು ನೇಮಕಗೊಂಡರು. ಇವರಿಗೆ ಯಾವ ಒಂದು ಹಂತದಲ್ಲಿಯೂ ಪ್ರಮೋಷನ್ ಕೊಡತಕ್ಕ ಕೆಲಸವಾಗಿಲ್ಲ. ರೆವಿನ್ಯೂ ಇಲಾಖೆಯವರಿಗೆ, ಅಗ್ರಿಕಲ್ಚರ್ ಇಲಾಖೆಯವರಿಗೆ ಬಿ. ಡಿ. ಒ. ಗಳು ಎಂದು ಪ್ರಮೋಷನ್ ಕೊಡುವಾಗ ಈ ಇಲಾಖೆಯಲ್ಲಿ ೨೦—೩೦ ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬಂದರೂ ಸಹ ಇವರಿಗೆ ಪ್ರಮೋಷನ್ ಕೊಟ್ಟಿಲ್ಲ. ಇವರ ಸೇವೆಯನ್ನೂ ತಾವು ಲೆಕ್ಕಕ್ಕೆ ತೆಗೆದುಕೊಂಡು ಇವರನ್ನೂ ಸಹ ತಾವು ಬಿ. ಡಿ. ಒ. ಆಗಿ ಏಕೆ ಹಾಕಬಾರದು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

೨–೩೦ ಪಿ. ಎಂ.

ಈಗಾಗಲೇ ನಮ್ಮಲ್ಲಿ ಈ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಸ್ಥಿರೀಕರಣ ಯೋಜನೆ ಎಂದು ಏನು ಅಳವಡಿಸಿಕೊಂಡಿದ್ದಾರೆ ಆ ಯೋಜನೆಗೆ ಇದುವರೆಗೆ ತಾಲ್ಲೂಕು ಮಟ್ಟದಲ್ಲಿ ಮಂಜೂರು ಮಾಡಿಕೊಂಡು ಹಣ ಸಂದಾಯವಾಗತಕ್ಕ ಕೆಲಸ ನಡೆಯುತ್ತಿತ್ತು. ಇತ್ತೀಚೆಗೆ ಈ ಯೋಜನೆಗೆ ಮಂಜೂರಾತಿ ಪಡೆಯಬೇಕಾದರೆ ಜಿಲ್ಲಾಮಟ್ಟಕ್ಕೆ ಹೋಗಬೇಕು. ಈ ಯೋಜನೆಯ ಮುಖಾಂತರವಾಗಿ ಆಗಿರುವ ಕೆಲಸಕ್ಕೆ ಹಣ ಪಾವತಿ ಮಾಡಿಸಬೇಕಾದರೆ ಜಿಲ್ಲಾಮಟ್ಟಕ್ಕೆ ಹೋಗಿ ಮಂಜೂರು ಮಾಡಿಸಿ, ಹಣ ಪಾವತಿ ಮಾಡಬೇಕು ಎನ್ನುವಂಥ ಕೆಲಸ ನಡೆದಿದೆ ಎಂಬ ವಿಷಯ ನನ್ನ ಗಮನಕ್ಕೆ ಬಂದಿದೆ. ಹಾಗೇನಾದರೂ ಆದರೆ ಅದರ ಕೆಲಸ ಕೂಡ ನಿಧಾನವಾಗುತ್ತದೆ. ಬಹಶಃ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಹಣ ಮಂಜೂರು ಮಾಡಿಸಿ, ಪಾವತಿ ಮಾಡಬೇಕು ಎಂದು ಹೇಳಿದರೆ ಈ ಯೋಜನೆ ನಿಜವಾಗಿಯೂ ಕುಂಠಿತವಾಗುತ್ತದೆ ಮತ್ತು ಕರಪ್ಷನ್‌ಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ ಎಂದು ನನ್ನಗಾದರೂ ಅನಿಸುತ್ತದೆ. ಆದುದರಿಂದ ಅದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಅವರನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಈ ವರ್ಷ ಕೊಳವೆ ಬಾವಿಗಳನ್ನು ತೋಡತಕ್ಕ ಸಂದರ್ಭದಲ್ಲಿ ಜಿಯಾಲಜಿಸ್ಟ್ ಹೋಗಿ ಐಡೆಂಟಿಫೈ ಮಾಡಿದಂಥ ಸ್ಥಳದಲ್ಲಿ ಕೊಳವೆ ಬಾವಿಗಳನ್ನು ಹಾಕಬೇಕು ಎಂದು ಸರ್ಕಾರದವರು ನಿಗದಿ ಮಾಡಿದ್ದಾರೆ. ಏಕೆಂದರೆ, ಹೆಚ್ಚು ಫೇಲ್ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ಈ ಯೋಜನೆ ಮಾಡಿದ್ದಾರೆ. ಅದು ಸ್ವಾಗತಾರ್ಹವಾದುದು. ಜಿಯಾಲಜಿಸ್ಟ್ ಹೋಗಿ ಎಲ್ಲಿ ಪಾಯಿಂಟ್ ಗುರುತು ಮಾಡುತ್ತಾರೋ ಅಲ್ಲಿ ಮಾತ್ರ ಬಾವಿ ತೆಗೆಯಬೇಕು ಎಂದು ಕಟ್ಟುನಿಟ್ಟಾಗಿ ಆದೇಶ ಕೊಡುವುದು ಸೂಕ್ತ. ಏಕೆಂದರೆ, ಬಹಳ ಕಡೆ ಫೇಲ್ ಆಗಿವೆ. ಕೆಲವು ಸ್ಥಳಗಳಲ್ಲಿ ಏನಾಗಿದೆ ಎಂಬುವರ ಬಗ್ಗೆ ಉದಾಹರಣೆ ಕೊಡುವುದು ಅಷ್ಟು ಸೂಕ್ತವಲ್ಲ. ಮಾನ್ಯ ಮಂತ್ರಿಗಳಿಗೆ ಗೊತ್ತಿರಬೇಕು, ಅವರೇ ಉದಾಟನೆ ಮಾಡಿದಂಥ ಸ್ಥಳದಲ್ಲಿ ಜಿಯಾಲಜಿಸ್ಟ್ ಗೊತ್ತುಮಾಡಿದಂಥ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಬಾವಿ ತೆಗೆಯಬೇಕು ಎಂಬ ಗೊಂದಲವಿತ್ತು. ಅದರ ಬಗ್ಗೆ ಸದನದಲ್ಲೂ ಕೂಡ ಚರ್ಚೆಯಾಯಿತು ಎಂದು ನನಗನ್ನಿಸುತ್ತದೆ. ಜಿಯಾಲಜಿಸ್ಟ್ ಹೋಗಿ ಎಲ್ಲಿ ನೀರು ಸಿಗುತ್ತದೆ ಎಂದು ಗುರುತು ಮಾಡುತ್ತಾರೋ ಆ ಜಾಗದಲ್ಲಿ ಕೊಳವೆ ಬಾವಿಗಳನ್ನು ಹಾಕತಕ್ಕಂಥ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂಬ ಕಟ್ಟುನಿಟ್ಟಾದ ಆದೇಶವನ್ನು ಮಾನ್ಯ ಮಂತ್ರಿಗಳು ಕೊಡಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಅವರನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಈಗಾಗಲೇ ನಮ್ಮಲ್ಲಿ ಅಂತ್ಯೋದಯ ಯೋಜನೆ ಎಂಬ ಹೊಸದಾದ ಯೋಜನೆಯನ್ನು ಪ್ರಾರಂಭ ಮಾಡಿ ಅದನ್ನು ಜಾರಿಗೆ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ಆ ಯೋಜನೆ ಪ್ರಕಾರ ಕೆಲವು ತಾಲ್ಲೂಕುಗಳನ್ನು ಆರಿಸಿಕೊಂಡು ಒಂದೊಂದು ಹಳ್ಳಿಯಲ್ಲಿ ಐದೈದು ಸಂಸಾರಗಳಿಗೆ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿಯಾಗಿ ಒಂದು ಹಳ್ಳಿಯಲ್ಲಿ ೫ ಸಂಸಾರಗಳನ್ನು ಆರಿಸಿಕೊಂಡು ಕೊಡುವುದಕ್ಕೆ ಪ್ರಾರಂಭ ಮಾಡಿದರೆ ೨೧ ನೇ ಶತಮಾನಕ್ಕಾದರೂ ಪೂರೈಸತ್ತೀರಾ ಎಂಬ ಸಂಶಯ ಬರುತ್ತದೆ. ಪ್ರಾರಂಭದಲ್ಲಿ ಕೆಲವು ತಾಲೂಕುಗಳನ್ನು ಆರಿಸಿಕೊಂಡಿರಿ. ಆ ಹಳ್ಳಿಗಳಲ್ಲಿರುವ ಅಥವಾ ಆ ಗ್ರಾಮದಲ್ಲಿರುವ ಬಡತನದ ರೇಖೆಗಿಂತ ಕೆಳಗೆ ಇರತಕ್ಕ ಹರಿಜನ–ಗಿರಿಜನರು ಹಿಂದುಳಿದ ವರ್ಗದವರನ್ನು ಪಟ್ಟಿಮಾಡಿ ಅವರೆಲ್ಲರಿಗೂ ಮುಂದೆ ೫ ವರ್ಷಗಳಲ್ಲಾದರೂ ಕೂಡ ಈ ಅಂತ್ಯೋದಯ ಯೋಜನೆಯಿಂದ ಫಲ ದೊರಕತಕ್ಕ ಕೆಲಸ ಮಾಡುವುದು ಸರಿಯೇನೋ ಎನಿಸುತ್ತದೆ. ಆದುದರಿಂದ ಅದರ ಬಗ್ಗೆ ತೀವ್ರವಾದ ಗಮನವನ್ನು ಮಾನ್ಯ ಮಂತ್ರಿಗಳು ಹರಿಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಂಡು, ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕು ಎಂದು ಇದ್ದೆ, ಆದರೆ ಕಾಲದ ಮಿತಿ ಇರುವುದರಿಂದ ಇಷ್ಟಾದರೂ ಮಾತ ನಾಡಲಿಕ್ಕೆ ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಎಸ್. ದೊಡ್ಡಮೇಟಿ. (ರೋಣ).—ಮಾನ್ಯ ಅಧ್ಯಕ್ಷರೆ. ನಾನು ಈ ಬೇಡಿಕೆಯನ್ನು ಸಮರ್ಥಿಸುತ್ತಾ ತಾವು ಕೊಟ್ಟ ಕಾಲದ ಮಿತಿಯೊಳಗೆ ನನ್ನ ಮಾತನ್ನು ಮುಗಿಸಲು ಪ್ರಯತ್ನಿಸುತ್ತೇನೆ. ಮೊದಲನೆಯದಾಗಿ ನೀರಿನ ಸಮಸ್ಯೆ. ನಮ್ಮ ಸರ್ಕಾರ ನೀರು ಇಲ್ಲದಂಥ ಎಲ್ಲಾ ಜನರಿಗೆ ನೀರನ್ನು ಒದಗಿಸುವ ಸಾಹಸವನ್ನು ಮಾಡಿತು. ಮೊದಲು ನೀರಿನ ಪರಿಸ್ಥಿತಿ ಹೇಗಿತ್ತು ಎನ್ನುವುದನ್ನು ಸ್ವಲ್ಪ ಹೇಳುತ್ತೇನೆ. ನಾನು ಚುನಾಯಿತನಾಗಿ ಬಂದ ಕೂಡಲೆ ಒಂದು ಗ್ರಾಮಕ್ಕೆ ಹೋಗಿದ್ದೆ. ಅದರ ಹೆಸರು ಹೊಸರಾಂಪುರ, ಅದು ಒಂದು ಸಾಧಾರಣ ಕುಗ್ರಾಮ. ಹಿಂದಿನ ಸರ್ಕಾರ ಆ ಗ್ರಾಮಕ್ಕೆ ಏನು ಸೌಕರ್ಯ ಕೊಟ್ಟಿತ್ತು ಎಂದು ನೋಡಿದೆ. ನಾನು ಹೋದತಕ್ಷಣ ಕಂಡಿದ್ದು ಏನೆಂದರೆ, ಅಲ್ಲಿ ನೀರು ಇರಲಿಲ್ಲ ನೀರಿಗಾಗಿ ಆ ಜನ ಪರಿತಪಿಸುತ್ತಿದ್ದರು. ಅವರು ಹಾಲು ಮತದವರು. ಜನ ನೀರಿಗಾಗಿ ಕೊರೆಯುತ್ತಿದ್ದರು. ಅಲ್ಲಿ ಹಳ್ಳ ಬತ್ತಿ ಹೋಗಿತ್ತು, ಅವರು ಒಂದು ಕೋಲನ್ನು ತೆಗೆದುಕೊಂಡು ಗೆರೆ ಹೊಡೆದು ನೀರನ್ನು ಬಸಿಯಲ್ಲಿ ತಮ್ಮ ದನಕರುಗಳಿಗೆ ಕುಡಿಸುತ್ತಿದ್ದರು, ತಾವೂ ಕೂಡ ಆ ಜಾಗದಲ್ಲಿ ನೀರನ್ನು ಕುಡಿಯುತ್ತಿದ್ದರು. ಇದು ಹಿಂದಿನ ಪರಿಸ್ಥಿತಿ. ಹಿಂದಿನ ಸರ್ಕಾರ ಆ ಜನಕ್ಕೆ ಕೊಟ್ಟ ಸ್ಥಿತಿ ಅದು. ನಿಜವಾಗಲೂ ಆ ಜನಕ್ಕೆ ನೀರು ಇರಲಿಲ್ಲ. ನಾನು ಹೋದತಕ್ಷಣ. ನಾನು ಹೋದದ್ದೇ ಸಾಕು ಎಂದು ತಿಳಿದುಕೊಂಡು ಮೊದಲು ಕೇಳಿದ್ದೇನು ಗೊತ್ತೇ ನೀರು ಕೊಡಿ ಎಂದು. ಮೊದಲು ನೀರು ಬಿಟ್ಟು ಇನ್ನೇನೂ ಕೇಳಲಿಲ್ಲ. ಆ ಮೇಲೆ ಶಾಲೆ ಕೊಡಿ ಎಂದು ಕೇಳಿದ್ದಾರೆ. ಅದೂ ಕೂಡ ನಮ್ಮ ತಂದೆ ತುಳಿದ ಜಾಗ. ಆ ಊರಿಗೆ ಒಂದು ಹಾದಿ ಇತ್ತು, ಆದರೆ ಆ ಹಾದಿ ಕೂಡ ಕೆಟ್ಟು ಹಾಳಾಗಿ ಹೋಗಿದೆ. ಈ ಸರ್ಕಾರ ಬಾದಮೇಲೆ, ಸರ್ಕಾರದ ಗಮನಕ್ಕೆ ತಂದ ಮೇಲೆ ಈಗ ಆ ಜನಕ್ಕೆ ಕುಡಿಯುವ ನೀರಿನ ವ್ಯವಸ್ಥೆಯಾಗಿದೆ ದಾರಿಯ ವ್ಯವಸ್ಥೆಯಾಗಿದೆ. ಹೀಗೆ ನನ್ನ ತಾಲೂಕಿನ ಹಾಗೂ ರಾಜ್ಯದ ಅನೇಕ ತಾಲ್ಲೂಕುಗಳಲ್ಲಿ ನೀರಿನ ಸಮಸ್ಯೆ ಪರಿಹಾರವಾಗಿದೆ ಎನ್ನುವುದಕ್ಕೆ ಇದು ಒಂದೇ ಒಂದು ಉದಾಹರಣೆ ಸಾಕು. ಮತ್ತೆ ಆರ್ಥಿಕ ಬಲಕ್ಕಿಂತ ಮನೋಬಲ ಈ ಸರ್ಕಾರಕ್ಕೆ ಇದೆ. ಮನೋಬಲ ಇದ್ದ ಸರ್ಕಾರಕ್ಕೆ ಆರ್ಥಿಕ ಬಲ ತನ್ನಿಂದ ತಾನೇ ಬರುತ್ತದೆ, ಈ ಕುಡಿಯುವ ನೀರಿನ ಸಮಸ್ಯೆಯ ಜೊತೆಗೆ ನೈರ್ಮಲ್ಯವೂ ಕೂಡ ಮುಖ್ಯವಾದ ಕೆಲಸ, ನೈರ್ಮಲ್ಯ ಇದ್ದರೆ ಅಷ್ಟೇ ಸಾಲದು, ಕೊಳಚೆ ನೀರು ಹರಿದು ಹೋಗುತ್ತದಲ್ಲ ಅದು ಗ್ರಾಮದ ಮಧ್ಯದಲ್ಲಿ ಹುಡುಗಟ್ಟಿ ಕೆಸರು, ಕೊಳಚೆ ಆಗದಂತೆ ಅದಕ್ಕೆ ಸರಿಯಾದ ಗಟಾರದ ವ್ಯವಸ್ಥೆಯಾಗಬೇಕು ಎಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸಾಮುದಾಯಿಕ ಅಭಿವೃದ್ಧಿ ಮತ್ತು ಗ್ರಾಮಾಂತರ ಸಂಘಟನೆಯ ಅಭಿವೃದ್ಧಿ ವಿಷಯ. ಇದು ನಿಜಕ್ಕೂ ಕೂಡ ಜನರ ಜೀವನದ ನಾಡಿಯನ್ನೂ ಕೂಡ ಹಿಡಿದಿದೆ. ನನಗೆ ಒಂದು ಸಂಕೋಚ ಏನೆಂದರೆ, ರಾಷ್ಟ್ರೀಕೃತ ಬ್ಯಾಂಕುಗಳ ಹಾಗೂ ಅಭಿವೃದ್ಧಿ ಇಲಾಖೆಗಳ ನಡುವೆ ಪರಸ್ಪರ ಹೊಂದಾಣಿಕೆ ಇಲ್ಲ ಈ ಬ್ಯಾಂಕುಗಳ ಮೇಲೆ ಯಾರ ನಿಯಂತ್ರಣ ಇದೆ ಎನ್ನುವುದನ್ನೂ ಕೂಡ ನಾವು ವಿಚಾರ ಮಾಡಬೇಕಾಗಿದೆ. ನಿಜವಾಗಿಯೂ ಬಡವನಿಗೆ ಆ ಬ್ಯಾಂಕುಗಳ ಮೂಲಕ ಆರ್ಥಿಕ ಸಹಾಯ ಸಿಗುತ್ತದೆಯೋ ಎಂದು ವಿಚಾರ ಮಾಡಿ. ಎಷ್ಟೋ ಜನ ಕುರಿ–ಕೋಳಿಗಳನ್ನು ತೆಗೆದುಕೊಂಡಿದ್ದಾರೆ, ಅದು ಹೇಗೆ ? ಬಡವರಿಗೆ

ಅವು ದಕ್ಕಲಿಲ್ಲ. ಇದು ಹಿಂದಿನ ಕಥೆ. ಅಲ್ಲಿ ಏನು ನಡೆಯುತ್ತಿತ್ತು ಅಂದರೆ ರಾಜಕೀಯ ಹಸ್ತಕರ ಪ್ರಭಾವ. ರಾಜಕೀಯ ಹಸ್ತಕರ ಪ್ರಭಾವ ಹೆಚ್ಚಾಗಿ ಅಲ್ಲಿ ನಿಜವಾಗಿಯೂ ಬಡವನಿಗೆ ಸಹಾಯ ಸಿಗಲಿಲ್ಲ.

ಇನ್ನು ಸಾಮೂಹಿಕ ತುಂತುರು ನೀರಾವರಿ ಯೋಜನೆ ಕೂಡ ಬಹಳ ಕಷ್ಟನಷ್ಟದಲ್ಲಿದೆ. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟವರಿಗೆ ಕಾಗದವನ್ನು ಬರೆದಿದ್ದೇನೆ. ಸಾಮೂಹಿಕ ತುಂತುರು ನೀರಾವರಿ ಯೋಜನೆಯನ್ನು ಏನೋ ನೀವು ರೈತರಿಗೆ ಅಳವಡಿಸಿದ್ದೀರಿ. ಆದರೆ ಬಾವಿಯಿಂದ ನೀರನ್ನು ಮೇಲಕ್ಕೆತ್ತುವ ಯಂತ್ರ ಏನಾದರೂ ಕೆಟ್ಟು ಹೋದರೆ ರೈತರ ಜೀವನ ಯಂತ್ರವೇ ನಿಂತು ಹೋದಂ ತಾಗುತ್ತದೆ. ಆದುದರಿಂದ ಈ ವಿಷಯಕ್ಕೂ ಕೂಡ ಸರ್ಕಾರದವರು ಗಮನಕೊಡಬೇಕಾಗಿದೆ. ಯಾವ ಯಾವ ಕಂಪನಿಗಳಿಂದಲೋ ಯಂತ್ರಗಳನ್ನು ತಂದು ಹಾಕಿದ್ದಾರೆ ಇದನ್ನೂ ಕೂಡ ತಾವು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಇಲಾಖೆಗೆ ತನ್ನದೇ ಆದ ಅಧಿಕಾರಿಗಳು ಇರಬೇಕು. ಮಾನ್ಯ ಶ್ರೀ ವೈ. ರಾಮಕೃಷ್ಣರವರು ಮಾತನಾಡುತ್ತಾ ಯಾರವಲು ತಂದ ಅಧಿಕಾರಿಗಳಿಂದ ಹೇಗೆ ಬಾಳುವೆ ಮಾಡುವುದು ಸಾಧ್ಯವೆಂದು ಹೇಳಿದ ಹಾಗೆ ಯಾರವಲು ತಂದ ಹೆಂಡತಿಯಿಂದ ಹೇಗೆ ಸಂಸಾರ ಸಾಗಿಸುವುದು ? ಇದರಿಂದ ಕಷ್ಟವಾಗುತ್ತದೆಂದು ನನ್ನ ಅನಿಸಿಕೆಯಾಗಿದೆ. ಆದುದರಿಂದ ಈ ಇಲಾಖೆಯ ರಥದ ಗಾಲಿಗಳು ತನ್ನದೇ ಆಗಿದ್ದು ಅದಕ್ಕೆ ಕೀಲನ್ನು ಜಡಿದು ಹಾಗೆಯೇ ಎಣ್ಣೆಯನ್ನು ಉಣಿಸಬೇಕು. ಹಿಂದಿನ ಸರ್ಕಾರದವರು ಏನೋ ಮಾಡಿದ್ದಾರೆ, ಆದರೆ ಅಲ್ಲಿ ಏನು ಹಣ ಸೋರಿ ಹೋಗುತ್ತಿದೆ ಅದು ಸೋರಿ ಹೋಗದ ಹಾಗೆ ಆ ತೂತಿಗೆ ತಾವು ಏನಾದರೂ ಸೀಲ್ ಹಾಕುತ್ತೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆರ್ಥಿಕ ಪರಿಸ್ಥಿತಿಯಿಂದ ಹೇಳುವುದಾದರೆ ಹಿಂದಿನ ಸರ್ಕಾರದವರು ಏನು ಬಿಟ್ಟು ಹೋಗಿದ್ದಾರೆ, ನೂಗಿಲಿಂದ ಆರ್ಥಿಕ ಪರಿಸ್ಥಿತಿಯಂತಿರುವ ಪೀತಾಂಬರವನ್ನು ಉಪಯೋಗ ಮಾಡದೇ, ಅದನ್ನು ಪಕ್ಕಕ್ಕೆ ಸರಿಸಿ ಹೊಸ ಪೀತಾಂಬರವನ್ನು ಉಡುವುದಕ್ಕೆ ಹೊಸದಾಗಿಯೇ ನೇಯ ಬೇಕಾಗಿದೆ. ಅದಕ್ಕಾಗಿ ನಮ್ಮ ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮ ಪಡಿಸುವುದಕ್ಕೆ ಹೊಸ ಹೊಸ ಮಾರ್ಗಗಳನ್ನು ಹಾಕಿ, ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಮ್ಮ ರಾಜ್ಯ ಸರ್ಕಾರ ಪ್ರಯತ್ನ ಪಡಬೇಕಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ಒಳ್ಳೆಯ ಬಾಂಧವ್ಯವನ್ನು ಉಂಟು ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ರಾಜಕೀಯವನ್ನು ಏನಾದರೂ ಬೆರೆಸಿದರೆ ಯಾವ ಸದಸ್ಯರೂ ಕೂಡ ಸುಮ್ಮನೆ ಇರಲಿಕ್ಕೆ ಸಾಧ್ಯವಿಲ್ಲನೆಂದು ಈ ಮೂಲಕ ಗೌರವಯುತವಾಗಿ ಈ ಸದನದ ಮೂಲಕ ನಮ್ಮಷ್ಟಕ್ಕೆ ನಾವೇ ಹೇಳಿಕೊಳ್ಳಬೇಕಾಗಿದೆಯೆಂದು ಹೇಳಿ, ಇಷ್ಟು ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವ್ (ನಂಜನಗೂಡು).— ಸನ್ಮಾನ್ಯ ಸಭಾಪತಿಗಳೇ, ಈ ಬೇಡಿಕೆಯನ್ನು ನಾನು ವಿರೋಧಿಸುತ್ತಾ, ಈ ಬೇಡಿಕೆಯ ಚಿತ್ರ ಹೇಗಿದೆ ಎಂದರೆ ತೆನ್ನಾಲಿ ರಾಮಕೃಷ್ಣ ಕುದುರೆಯನ್ನು ಸಾಕಿದ ಹಾಗೆ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಕುದುರೆಯನ್ನು ಸಾಕಿದ ಹಾಗಾಗಿದೆ. ಸ್ವಾಮಿ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಇವರು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆದರೆ ಅದು ಅಷ್ಟು ಸಮರ್ಥನೀಯವಾದುದಲ್ಲ. ಇವರ ಸರ್ಕಾರ ಬಂದಮೇಲೆ ಇನ್ನೊಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದಾರೆ. ಅದು ಏನೆಂದರೆ, 'ಅಂತ್ಯೋದಯ' ಕಾರ್ಯಕ್ರಮ. ಇದು ಹೇಗಿದೆ ಎಂದರೆ 'ಬಡವರ ಅಂತ್ಯ', 'ಶ್ರೀಮಂತರ ಉದಯ', ಎನ್ನುವ ಪಾಲಿಸಿ ಇದೆ.

ಒಬ್ಬ ಸದಸ್ಯರು.—ಅಂತ್ಯೋದಯ ಒಂದೇ ಅಲ್ಲ, ಆಶಾಕಿರಣ ಎನ್ನತಕ್ಕ ಯೋಜನೆಯನ್ನು ಸಹ ಜಾರಿಗೆ ತರಲಾಗುತ್ತಿದೆ.

ಶ್ರೀ ಎಂ. ಮಹದೇವ್.—ಈ ಕ್ಲಸ್ಟರ್ ಪ್ರೋಗ್ರಾಂ ಎಂದು ಏನು ಹಾಕಿಕೊಂಡಿದ್ದಾರೆ. ಇದು ಹೇಗಿದೆ ಎಂದರೆ ಇಲ್ಲಿ ಶ್ರೀ ಲಕ್ಷ್ಮೀಸಾಗರ್‌ರವರು ಸಭೆಯಲ್ಲಿ ಚರ್ಚೆಯನ್ನು ಅಂತ್ಯ ಮಾಡಿದರೆ, ಶ್ರೀ ರಘುಪತಿಯವರು ಉದಯ ಮಾಡಿದ ಹಾಗಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅಂತ್ಯವಾದ ಮೇಲೆ ಉದಯವಾಗುತ್ತದೆ.

ಶ್ರೀ ಎಂ. ಮಹದೇವ್.—ಈ ಕ್ಲಸ್ಟರ್ ಪ್ರೋಗ್ರಾಂನ್ನು ಅಳವಡಿಸುವುದಕ್ಕೆ ಎಂಥೆಂಥಾ ಗ್ರಾಮ ಗಳನ್ನು ಸೆಲೆಕ್ಟ್ ಮಾಡುತ್ತಿದ್ದಾರೆಂದರೆ ಯಾವ ಯಾವ ಗ್ರಾಮಗಳಲ್ಲಿ ನೀರಿನ ಸೌಕರ್ಯವಿದೆ. ಆರ್ಥಿ ಕವಾಗಿ ಪ್ರಬಲವಾಗಿರತಕ್ಕ ಕುಟುಂಬಗಳು ಇವೆ ಅಂಥಾ ಗ್ರಾಮಗಳನ್ನು ರಾಷ್ಟ್ರೀಕರಣ ಬ್ಯಾಂಕ್

ವತಿಯಿಂದ ಸೆಲೆಕ್ಟ್ ಮಾಡಿಕೊಂಡು ಬಡವರನ್ನು ಉದ್ಧಾರ ಮಾಡುವ ಉದ್ದೇಶ ಈ ಸರ್ಕಾರದ್ದು ಆಗಿದೆ. ಇದರಿಂದಾಗಿ ಕಡುಬಡ ಕುಟುಂಬಗಳಿಗೆ ಅನುಕೂಲವಾಗುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದ ವರಿಗೆ ಇದರಿಂದ ಅನುಕೂಲವಾಗುತ್ತಿಲ್ಲ. ಇದಕ್ಕೆ ತಮಗೆ ಉದಾಹರಣೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಮನೆ ಆಶ್ರಯವಿಲ್ಲದೇ ಇರತಕ್ಕಂಥ ಗ್ರಾಮಗಳು ಇದೆಯೋ ಅಲ್ಲಿಗೆ ಈ ಅಂತ್ಯೋದಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೆ ಅಲ್ಲಿ ಹಿಂದುಳಿದಿರತಕ್ಕವರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಿತ್ತು. ಆದರೆ ಇವತ್ತು ಏನಾಗಿದೆ ಎಂದರೆ ನಾವು ಹಿಂದಿನವರು ೧೦ ತಪ್ಪು ಮಾಡಿದ್ದರೆ ನೀವು ೧೦೦ ತಪ್ಪು ಮಾಡುತ್ತಿದ್ದೀರಿ. ಭ್ರಷ್ಟಾಚಾರ ಹೇಗಿತ್ತೋ ಅದು ಹಾಗೆಯೇ ಇದೆ ಏನೂ ಕಡಿಮೆಯಾಗಿಲ್ಲ.

ಉಪಾಧ್ಯಕ್ಷರು.—ವಿಷಯಕ್ಕೆ ಬನ್ನಿ...

ಶ್ರೀ ಎಂ. ಮಹದೇವ್.—ಈ ಕ್ಲಸ್ಟರ್ ಕಾರ್ಯಕ್ರಮವನ್ನು ನೀವು ಏನು ಹಾಕಿಕೊಂಡಿದ್ದೀರಿ ಅದನ್ನು ಸಾಮಾನ್ಯವಾಗಿ ಯಾವ ಗ್ರಾಮಗಳು ಬಹಳ ಆರ್ಥಿಕವಾಗಿ ತೊಂದರೆಯನ್ನು ಅನುಭವಿಸು ತ್ತಿವೆಯೋ ಅಂಥಾ ಗ್ರಾಮಗಳನ್ನು ನೀವು ಸೆಲೆಕ್ಟ್ ಮಾಡಿಲ್ಲ, ಅದಕ್ಕೆ ಬೇಕಾದರೆ ನಾನು ತಮಗೆ ಅಂಕಿಅಂಶಗಳನ್ನು ಕೊಡುತ್ತೇನೆ. ನೀವು ಬರೀ ರಾಷ್ಟ್ರೀಕರಣ ಬ್ಯಾಂಕ್ ಇಲ್ಲವೇ, ಸಹಕಾರಿ ಬ್ಯಾಂಕ್ ಗಳವರ ಹಿತದೃಷ್ಟಿಯನ್ನು ಮಾತ್ರ ನೋಡುತ್ತಿದ್ದೀರೇ ಹೊರತು ಹಿಂದುಳಿದವರ ಹಿತವನ್ನು ಕಾಪಾಡುವ ದೃಷ್ಟಿಯನ್ನಿಟ್ಟುಕೊಂಡು ನೀವು ಮಾಡುತ್ತಿಲ್ಲ. ಇವತ್ತು ಎಲ್ಲಿ ನೀರಾವರಿ ಪ್ರದೇಶವಿದೆ ಅಂಥಾ ಕಡೆ ಗಳಲ್ಲಿ ಮಾತ್ರ ಸೆಲೆಕ್ಟ್ ಮಾಡಿದ್ದೀರಿ, ಆದರೆ ಎಲ್ಲಿ ಗುಡ್ಡಗಾಡು ಪ್ರದೇಶವಿದೆ, ಗುಡಿಸಲುಗಳಲ್ಲಿ ವಾಸ ಮಾಡತಕ್ಕ ಜನಗಳಿದ್ದಾರೆ ಅಂಥಾ ಗ್ರಾಮಗಳ ಬಗ್ಗೆ ತಾವು ಯೋಚನೆ ಮಾಡಿಲ್ಲ. ಆದುದರಿಂದ ಮೂಲಭೂತವಾದ ಉದ್ದೇಶವೇನಿದೆ ಅದರಂತೆ ನ್ಯಾಯವಾಗಿ ಇದರಿಂದ ಅನುಕೂಲ ದೊರೆಯಬೇಕಾಗಿ ದೆಯೋ ಅದು ದೊರೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳು ತ್ತೇನೆ,

ಇನ್ನು ಪೌರ ಕಾರ್ಮಿಕರು ಏನಿದ್ದಾರೆ ಅವರು ಇವತ್ತಿನ ದಿವಸ ಸಮಾಜದಲ್ಲಿ ಬಹಳ ಕಷ್ಟದಲ್ಲಿದ್ದಾರೆ. ಅವರ ಒಂದೊಂದು ಕುಟುಂಬ ೧೦ ಅಡಿ ಉದ್ದ ೧೦ ಅಡಿ ಅಗಲದ ಜಾಗದಲ್ಲಿ ವಾಸವಾಗಿದೆ, ಅವರ ಗುಡಿಸಲುಗಳು ಬಹಳ ಹೀನ ಸ್ಥಿತಿಯಲ್ಲಿವೆ. ಅವರ ಸಲುವಾಗಿ ಸರ್ಕಾರ ಯಾವ ಒಂದು ಕಾರ್ಯಕ್ರಮ ವನ್ನೂ ಹಾಕಿಕೊಂಡಿಲ್ಲ. ಅವರು ಸಮಾಜದಲ್ಲಿ ಶೋಷಿತ ವರ್ಗದಿಂದ ಬಹಳ ಕಡಿಮೆ ದರ್ಜೆಯಲ್ಲಿ ದ್ದಾರೆ. ಅವರಿಗೆ ಇದುವರೆಗೆ ಏನೊಂದು ವ್ಯವಸ್ಥೆಯನ್ನೂ ಮಾಡಿಲ್ಲ. ಆದ್ದರಿಂದ, ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಆ ಪೌರ ಕಾರ್ಮಿಕರಿಗೆ ಆರ್ಥಿಕವಾಗಿ ಏನಾದರೂ ಒಂದು ರೀತಿಯಲ್ಲಿ ಸಹಾಯ ಮಾಡಬೇಕು, ಅವರಿಗೋಸ್ಕರ ಸರ್ಕಾರ ಸ್ಪಷ್ಟವಾಗಿ ಏನಾದರೂ ಕಾರ್ಯಕ್ರಮಗಳನ್ನು ರೂಪಿಸಿ ಅವರೂ ರಾಷ್ಟ್ರದ ಸತ್ಪ್ರಜೆಗಳಾಗಿ ಬಾಳುವಂತೆ ಮಾಡ ಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಎಕ್ಸೆಸ್ ಲ್ಯಾಂಡ್ ಬಗ್ಗೆ......

ಶ್ರೀ ಅಬ್ದುಲ್ ನಜೀರ್ ಸಾಬ್.—ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಹೇಳುವುದಕ್ಕೆ ಬದಲಾಗಿ ಪೌರ ಕಾರ್ಮಿಕರು ಎಕ್ಸೆಸ್ ಲ್ಯಾಂಡ್ ಬಗ್ಗೆ ಹೇಳುವುದಕ್ಕೆ ಹೋದರೆ ಹೇಗೆ ?

ಶ್ರೀ ಎಂ. ಮಹಾದೇವ.—ಕುಡಿಯುವ ನೀರಿನ ಬಗ್ಗೆಯೇ ಮಾತನಾಡುವುದಾದರೆ, ನಾನು ಮೊನ್ನೆ ಪಕ್ಷಿಧಾಮಕ್ಕೆ ಭೇಟಿ ನೀಡಿದ್ದೆ. ಅದು ಇಡೀ ರಾಷ್ಟ್ರದ ಜನರನ್ನೇ ಆಕರ್ಷಿಸುವ ಸ್ಥಾನ. ಆದರೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ದಣಿದು ನೋಡುವುದಕ್ಕೆ ಹೋದವರಿಗೆ ಅಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಕಾರಣ ಅಲ್ಲಿ ವಾಟರ್ ಪಲೂಷನ್ ಆಗಿದೆ. ದೇಶದ ಜನರು ಬರುವ ಜಾಗ ದಲ್ಲಿ ಮಂತ್ರಿಗಳು, ನಾವು ಹೋಗುವ ಜಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹಳ್ಳಿಗಾಡುಗಳಿಗೆ ಹೋಗಿ ನೋಡಿ ಎಂದರೆ ವಿಹಾರ ಸ್ಥಳಗಳಿಗೆ ಹೋಗುತ್ತೀರಲ್ಲ ?

ಶ್ರೀ ಎಂ. ಮಹಾದೇವ.—ಕಾರ್ಖಾನೆಯ ನೀರೆಲ್ಲ ಅಲ್ಲಿಗೆ ಬಂದು ಪಲ್ಯೂಷನ್ ಆಗಿ ಕುಡಿಯು ವುದಕ್ಕೆ ಯೋಗ್ಯವಾದ ನೀರು ಅಲ್ಲಿ ದೊರೆಯುವುದಿಲ್ಲ. ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಗ್ರಾಮೀಣ ಪ್ರದೇಶದ ಯುವ ಜನರಿಗೆ ಸ್ವಯಂ ಉದ್ಯೋಗದಲ್ಲಿ ತರಬೇತಿ ನೀಡುತ್ತೇವೆಂದು ಹೇಳಿ

ದ್ದೀರಿ. ಅವರಿಗೆ ಯಾವ ರೀತಿ ತರಬೇತಿ ನೀಡುತ್ತಿದ್ದೀರಿ ? ಅವರಿಗೆ ಸಾಕಷ್ಟು ಆರ್ಥಿಕ ಸಹಾಯ ನೀಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯೂತ್ ಕ್ಲಬ್ಬುಗಳಿಗೆ ಸಾಕಷ್ಟು ಆರ್ಥಿಕ ನೆರವು ನೀಡುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನೀವು ಕ್ಲಬ್ಬುಗಳು ಮತ್ತು ವಿಹಾರ ಧಾಮಗಳಲ್ಲೇ ಇದ್ದೀರಿ, ಅಲ್ಲಿ ಇಳಿದು ಹಳ್ಳಿಗಾಡುಗಳ ಕಡೆಗೆ ಸ್ವಲ್ಪ ಬನ್ನಿ

ಶ್ರೀ ಎಂ. ಮಹಾದೇವ.— ಗ್ರಾಮೀಣ ಯುವಕರಿಗೆ ತರಬೇತಿ ಎಂದು ಸ್ವಯಂ ಉದ್ಯೋಗ ಯೋಜನೆಯಲ್ಲಿ ಇದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಯೂತ್ ಕ್ಲಬ್ಬಿಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ಮಹಾದೇವ.—ಸಂಬಂಧ ಬರುವ ಹಾಗೆ ಮಾಡಿ. ಗ್ರಾಮೀಣ ಯುವಕರು ಯುವಕರಾಗಿದ್ದಾರೆ. ಅವರು ಎಸ್.ಎಸ್.ಎಲ್.ಸಿ ಓದಿ ವ್ಯವಸಾಯ ಮಾಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಇತ್ತ ಉದ್ಯೋಗಕ್ಕೆ ಹೋಗುವುದಕ್ಕೂ ಆಗುತ್ತಿಲ್ಲ. ಅಂಥ ಜನರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ, ಬಡವರ ಮಕ್ಕಳಿಗೆ ಯಾವ ಅನುಕೂಲ ಪಡೆಯುವುದಕ್ಕೂ ಆಗುತ್ತಿಲ್ಲ. ಅಂಥ ಯುವಕರನ್ನು ಸರ್ಕಾರದವರೇ ಒಂದು ಪಟ್ಟಿ ಮಾಡಿ ಅವರಲ್ಲಿ ಎಸ್‌ಎಸ್‌ಎಲ್‌ಸಿ ಓದಿದವರಿಗೆ ಉದ್ಯೋಗ ತರಬೇತಿ ನೀಡುವ ಸ್ವಯಂ ವ್ಯವಸ್ಥೆ ಮಾಡಿ ಅವರಿಗೊಂದು ಉದ್ಯೋಗ ದೊರೆಯತಕ್ಕ ವ್ಯವಸ್ಥೆ ಮಾಡಿ. ಅವರು ಆರ್ಥಿಕವಾದ ತೊಂದರೆಯಿಂದಾಗಿ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಆಗದೆ ಆ ವಾತಾವರಣದಲ್ಲಿದ್ದಾರೆ. ಎಸ್.ಎಸ್.ಎಲ್.ಸಿ. ಯಲ್ಲಿ ಅನುತ್ತೀರ್ಣರಾದವರ ಪರಿಸ್ಥಿತಿಯಂತೂ ಬಹಳ ಕಷ್ಟ. ಹರಿಜನ–ಗಿರಿಜನ ಹಾಗೂ ಹಿಂದುಳಿದವರಿಗೆ ಯಾವ ಹಿನ್ನೆಲೆಯೂ ಇಲ್ಲ. ಅವರಿಗೆ ಯಾವ ಸೌಕರ್ಯವೂ ಇಲ್ಲದೆ ಬಹಳ ಕಷ್ಟದಲ್ಲಿದ್ದಾರೆ. ಅಂಥ ಯುವಕರನ್ನು ಗುರುತಿಸಿ ಅವರಿಗೆ ಉದ್ಯೋಗವಕಾಶ ಕಲ್ಪಿಸಿ ಕೊಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯಾದಗಲ್ ಬಸವರೆಡ್ಡಿ ರಂಗರೆಡ್ಡಿ (ನರಗುಂದ).—ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳ ಬಗ್ಗೆ ನನ್ನ ಅಭಿಪ್ರಾಯ ಸೂಚಿಸುತ್ತಾ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಇವೆಲ್ಲ ಹಿಂದಿನ ಕಾರ್ಯಕ್ರಮಗಳು. ಇವುಗಳ ಕಾರ್ಯ ಎಷ್ಟರ ಮಟ್ಟಿಗೆ ನಡೆದಿದೆ ಎಂಬ ಅಂಕಿ ಅಂಶಗಳನ್ನು ನೋಡಿದಾಗ ಸುಮಾರು ೬ ತಿಂಗಳ ಇವರ ಕಾರ್ಯ ಚಟುವಟಿಕೆಗಳನ್ನು ಪರಿಶೀಲನೆ ಮಾಡಿದರೆ ಯಾವ ಒಂದು ಟೀಕೆಯನ್ನು ಮಾಡತಕ್ಕ ಸ್ಥಿತಿಯಲ್ಲಿ ಇಲ್ಲವೆಂದು ಹೇಳಬಹುದು. ಮುಖ್ಯವಾಗಿ ಐಆರ್‌ಡಿಪಿ ಮತ್ತು ಡಿಪಿಎಪಿ ಬಗ್ಗೆ ಹೇಳಬೇಕೆಂದರೆ, ಅದರಲ್ಲೂ ಮೊದಲಿಗೆ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಇದೊಂದು ಬಹಳ ಅಲಕ್ಷ್ಯ ಮಾಡಿದಂತಹ ಒಂದು ಕಾರ್ಯಕ್ರಮ ಆಗಿತ್ತೆಂದರೆ ಉತ್ಪ್ರೇಕ್ಷೆಯಾಗಲಾರದು. ಸಂಬಂಧಪಟ್ಟ ಮಂತ್ರಿಗಳು ಇದರ ಕಾರ್ಯ ನಿರ್ವಹಣೆಯನ್ನು ವಹಿಸಿಕೊಂಡಾಗ ನಮಗೂ ಸಹಿತ ಅನ್ನಿಸಿತು, ಈ ಇಲಾಖೆ ಅಷ್ಟು ಪ್ರಾಮುಖ್ಯತೆ ಪಡೆದುದಲ್ಲ ಎಂದು. ಆದರೂ ಅವರು ಅಂದರೆ ನಾವು ನೀರು ಸಾಹೇಬರು ಎಂದು ಕರೆಯುವ ನಜೀರ್ ಸಾಹೇಬರು ಬಂದು ಬಹಳ ಅಕ್ಕರೆಯಿಂದ ಈ ಇಲಾಖೆಯನ್ನು ವಹಿಸಿಕೊಂಡು ಎಲ್ಲ ಕಡೆ ನೀರು ನೀರು ಎಂದು ಹಾಹಾಕಾರ ಪಡುತ್ತಿದ್ದುದನ್ನು ತಪ್ಪಿಸಿ ಎಲ್ಲರಿಗೂ ನೀರು ಕೊಟ್ಟು ತಣಿಸಿದ್ದಾರೆಂದರೆ ಇದೇನು ದೊಡ್ಡ ಮಾತಲ್ಲ,

೩-೦೦ ಪಿ. ಎಂ.

ಆದರೆ ಅಂಕಿ ಅಂಶಗಳನ್ನು ನಾವು ನೋಡಿದರೆ ೧೩ ಸಾವಿರ ಕೊಳವೆ ಬಾವಿಗಳನ್ನು ಎಲ್ಲ ಕಡೆ ತೆಗೆದಿರುವುದು ಗೊತ್ತಾಗುತ್ತದೆ. ಅದೊಂದು ದೊಡ್ಡ ಸಾಧನೆ. ಈ ಸಭೆಯಲ್ಲಿ ಮತ್ತು ಹೊರಗಡೆ ಬ್ರಾಕಿಷ್ ವಾಟರ್ ಜೋನ್‌ನಲ್ಲಿ ಯೋಗ್ಯವಾದ ಕುಡಿಯುವ ನೀರಿನ ವ್ಯವಸ್ಥೆ ಆಗದಿರುವ ಬಗ್ಗೆ ಚರ್ಚೆಯಾಗಿವೆ. ಅಂಥ ಭಾಗಗಳಲ್ಲಿ ಕೊಳವೆ ಬಾವಿಗಳನ್ನು ಮಾಡಿದರೂ ಕೂಡ ಯೋಗ್ಯವಾದ ನೀರು ಸಿಗುವುದಿಲ್ಲ. ಅಂಥ ಭಾಗದ ಜನರಿಗೆ ಕುಡಿಯುವ ನೀರಿಲ್ಲದೆ ದಾರುಣ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಅಂಥ ಪ್ರದೇಶದಿಂದ ಬಂದವನು. ಹಿಂದೆ ಅಲ್ಲಿ ಅನೇಕ ಕೊಳವೆ ಬಾವಿಗಳನ್ನು ಹಾಕಿದರೂ ಅದು ನಿರುಪಯುಕ್ತವಾಗಿವೆ. ಅಷ್ಟೇ ಅಲ್ಲದೆ ಅಲ್ಲಿ

ಸಿಹಿ ನೀರು ಸಿಗಬಹುದು, ಇಲ್ಲಿ ಸಿಹಿ ನೀರು ಸಿಗಬಹುದು ಎಂದು ಆ ಪ್ರದೇಶದ ಜನರು ಹೇಳಿದಾಗ ಅಂಥ ಕಡೆ ಹೊಸದಾಗಿ ಬಾವಿಗಳನ್ನು ತೆಗೆಯುವುದಕ್ಕೆ ಪ್ರಯತ್ನಪಟ್ಟರೂ ಆಡಳಿತಾತ್ಮಕ ತೊಂದರೆಯಿಂದ ಆ ಪ್ರದೇಶದಲ್ಲಿ ಕೊಳವೆ ಭಾವಿಗಳನ್ನು ಹಾಕಿಲ್ಲ. ಆದ್ದರಿಂದ ಆ ಭಾಗದಲ್ಲಿ ಇದ್ದಂಥ ನೀರನ್ನು ಕುಡಿಯುವುದಕ್ಕೆ ಯೋಗ್ಯವಾಗುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಆ ಪ್ರದೇಶದಲ್ಲಿ ತುಂಬಾ ಕೆರೆಗಳಿವೆ. ಹೆಚ್ಚು ಮಳೆ ಬಂದಾಗ ಮಳೆ ನೀರಿನ ಜೊತೆಗೆ ಕೆಲವು ಸಲ ನೀರಾವರಿಯು ಕೆಟ್ಟ ಪರಿಸ್ಥಿತಿಯಿಂದಾಗಿ ನೀರು ಹರಿದುಹೋಗಿ ಅದರ ಜೊತೆ ಸೇರಿಕೊಂಡು ಕ್ರಿಮಿಕೀಟಗಳು ಮತ್ತು ಕಸಕಡ್ಡಿಗಳು ಬೆರೆತು ಅಶುದ್ಧವಾದ ನೀರಾಗುತ್ತದೆ. ನಮ್ಮ ಕಡೆ ಕುಡಿಯುವುದಕ್ಕೆ ಯೋಗ್ಯವಾದ ನೀರು ಸಿಗದಿರುವುದರಿಂದ ಕೆರೆ ನೀರನ್ನೇ ಅವಲಂಬಿಸಬೇಕಾಗಿದೆ. ಆದ್ದರಿಂದ ಕೆರೆ ನೀರನ್ನು ಕುಡಿಯುವ ನೀರನ್ನಾಗಿ ಮಾಡುವ ಬಗ್ಗೆ ಪರಿಶೀಲನೆ ಮಾಡಬೇಕು. ಹಲವಾರು ಸಲ ನಾನು ಈ ಸಲಹೆಯನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ ಕೆರೆಗಳಿವೆ ಆ ನೀರನ್ನು ಕುಡಿಯುವುದಕ್ಕೆ ಯೋಗ್ಯವಾದ ನೀರನ್ನಾಗಿ ಮಾರ್ಪಡಿಸಿ ಕುಡಿಯುವ ನೀರಿನ ಜಾಲವನ್ನು ಹರಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಜನತಾ ಮನೆಗಳ ಬಗ್ಗೆ ಒಂದು ಮಾತನ್ನು ಹೇಳಿದರೆ ಔಚಿತ್ಯವನ್ನು ಮೀರಿ ಹೋದಂತಾಗುವುದಿಲ್ಲವೆಂದು ಭಾವಿಸುತ್ತೇನೆ.

ಉಪಾಧ್ಯಕ್ಷರು.—ಅದಕ್ಕೂ ಈ ಬೇಡಿಕೆಗೂ ಸಂಬಂಧವಿಲ್ಲ.

ಶ್ರೀ ಬಿ. ಆರ್. ಯಾವಗಲ್.—ನನ್ನ ಮತಕ್ಷೇತ್ರದಲ್ಲಿ ಒಂದು ವಿಶೇಷವಾದ ಸಮಸ್ಯೆ ಇರುವುದರಿಂದ ಅದನ್ನು ಹೇಳುತ್ತಿದ್ದೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಶಿರೋಳ ಗ್ರಾಮ ಇದೆ. ಅಲ್ಲಿ ೧೦೧ ಮನೆಗಳನ್ನು ಕಟ್ಟಿ ಯಾರಿಗೂ ಕೊಡದೇ ಇಟ್ಟಿದ್ದರು. ಆದರೆ ಅದನ್ನು ಕಟ್ಟಿಸಿದ ಆರು ತಿಂಗಳು ಅಥವಾ ವರ್ಷದೊಳಗೆ ಅದು ಬಿದ್ದುಹೋಗಿದ್ದರೂ ಆ ಬಗ್ಗೆ ಯಾವ ವಿಚಾರಣೆಯೂ ಆಗಲಿಲ್ಲ. ಈಗ ಆ ಭಾಗದಲ್ಲಿ ಹೊಸದಾಗಿ ಮನೆಗಳನ್ನು ಕಟ್ಟುವುದಕ್ಕೂ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಐ. ಆರ್. ಡಿ. ಪಿ. ಯೋಜನೆ ಪ್ರಕಾರ ಒಂದು ಬ್ಲಾಕ್‌ನಲ್ಲಿ ೬೦೧ ಕುಟುಂಬಗಳಿಗೆ ಸಹಾಯ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದು ಈಗಾಗಲೇ ಆ ದಿಸೆಯಲ್ಲಿ ಶೇಕಡ ೭೫ರಷ್ಟು ಖರ್ಚಾಗಿದೆ. ಇದರಲ್ಲಿ ಹೆಚ್ಚಾಗಿ ಎಮ್ಮೆಗಳನ್ನು ಆಡುಗಳನ್ನು ಕೊಟ್ಟಿರಬಹುದು. ಕೊಟ್ಟಂಥ ಸಾಲ ವಿನಿಯೋಗವಾಗಿದ್ದರೂ, ಸಬ್ಸಿಡಿ ಹೋಗಿದ್ದರೂ ಅವರು ಕೊಳ್ಳುವುದಕ್ಕೆ ಅಷ್ಟು ಪ್ರಾಣಿಗಳ ವ್ಯವಸ್ಥೆ ಇತ್ತೋ ಇಲ್ಲವೋ ಎಂಬುದನ್ನು ನೋಡಿದಾಗ ಆ ಕೆಲಸ ಸಮರ್ಪಕವಾಗಿ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಮುಂದೆ ಈ ಕಾರ್ಯಕ್ರಮ ಜಾರಿಗೊಳಿಸುವಾಗ ಎಲ್ಲ ನ್ಯೂನತೆಗಳನ್ನೂ ಸರಿಪಡಿಸಿ ಸಾಗುವಂಥ ಕೆಲಸ ಮಾಡಬೇಕೆಂದು ಸಲಹೆ ಕೊಡುತ್ತೇನೆ. ಎನ್. ಆರ್. ಡಬ್ಲ್ಯು. ಸ್ಕೀಂ ಪ್ರಕಾರ ಮಾಡಿದ ಕುಡಿಯುವ ನೀರಿನ ಯೋಜನೆಯಲ್ಲಿ ಮುಖ್ಯವಾದ ದೋಷ ಇದೆ. ಯೋಜನೆಗೆ ಅಂದಾಜು ವೆಚ್ಚ ಎಷ್ಟು ತಗಲುತ್ತದೋ ಅದನ್ನು ಟೆಂಡರ್ ಕರೆದು ಕೊಡುತ್ತಾರೆ. ಆದರೆ ೧೦-೧೫ ವರ್ಷಗಳಾದರೂ ಹಣ ಸಾಲದೆ ಯೋಜನೆ ಪೂರ್ತಿಯಾಗದೆ ಅನೇಕ ಯೋಜನೆಗಳು ಅಪೂರ್ಣವಾಗಿರುವ ಸಂದರ್ಭ ಇವೆ. ನನ್ನ ಮತಕ್ಷೇತ್ರದಲ್ಲಿ ಅಂಥ ಉದಾಹರಣೆ ಇದ್ದು ಇಡೀ ರಾಜ್ಯದಲ್ಲಿ ಇಂಥ ಬೇಕಾದಷ್ಟು ಉದಾಹರಣೆಗಳು ಬರುವುದರಿಂದ ಅವುಗಳನ್ನು ತುರ್ತಾಗಿ ಮುಗಿಸಲು ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಅಲ್ಲಿರುವಂಥ ಸಿಬ್ಬಂದಿಯೂ ಕೂಡ ಸಾಲದಾಗಿದೆ. ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಭೆಯಲ್ಲಿ ಎಲ್ಲಿ ಪ್ರಸ್ತಾಪ ಮಾಡಿದರೂ ಬೇರೆ ಕಡೆಯಿಂದ ಆರ್ಡರ್ ಬರಬೇಕು, ಅವರು ನೋಡಬೇಕು ಎಂದು ಹೇಳುತ್ತಾರೆ. ಆದ್ದರಿಂದ ಆ ಇಲಾಖೆಯನ್ನು ವ್ಯವಸ್ಥಿತವಾಗಿ ಮಾಡಬೇಕು. ಎರವಲು ಪಡೆದ ಅಭಿವೃದ್ಧಿ ಇಲಾಖೆ ಎರವಲಾಗಿಯೇ ಹೋಗಬಾರದು. ಅದಕ್ಕೆ ಖಾಯಂ ಆದ ಸಿಬ್ಬಂದಿ ಇರಬೇಕು. ಡಿ.ಪಿ.ಎ.ಪಿ. ಕಾರ್ಯಕ್ರಮದ ಬಗ್ಗೆ ಹೇಳಬೇಕೆಂದರೆ ನನ್ನ ಮತ ಕ್ಷೇತ್ರದಲ್ಲಿ ೧೩ ಲಕ್ಷ ರೂಪಾಯಿನ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದು ಯಾವುದೋ ಸಣ್ಣ ಕಾರಣಕ್ಕಾಗಿ ದುಡ್ಡು ಕೊಡುವುದು ನಿಧಾನ ಮಾಡಿ ಕೆಲಸ ಮಧ್ಯದಲ್ಲೇ ನಿಲ್ಲುವಂಥ ಪರಿಸ್ಥಿತಿ ಬಂತು. ಈ ರೀತಿ ಆಗಬಾರದು. ಯಾವ ಕೆಲಸವನ್ನು ತೆಗೆದುಕೊಂಡಿರುತ್ತಾರೋ ಅದು ಮುಗಿಯುವವರೆಗೆ ಸಿಬ್ಬಂದಿಯನ್ನಾಗಲಿ ಅಥವಾ ಕೆಲಸವನ್ನಾಗಲೀ ಬದಲಿಸಬಾರದು.

ಶ್ರೀ ಜೆ. ಡಿ. ಸೋಮಪ್ಪ.—ತಮ್ಮ ಕ್ಷೇತ್ರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೆಗೆದಿದ್ದಾರೋ ಗೊತ್ತಾಗಲಿಲ್ಲ.

ಶ್ರೀ ಬಿ. ಆರ್. ಯಾವಗಲ್.—ನಮ್ಮಲ್ಲಿ ಬ್ರಾಕಿಷ್ ಜೋನ್ ಆಗಿರುವುದರಿಂದ ಬೋರ್‌ವೆಲ್ ತೆಗೆದರೂ ಪ್ರಯೋಜನವಾಗುವುದಿಲ್ಲ. ಕುಡಿಯುವುದಕ್ಕೆ ಯೋಗ್ಯವಾದ ನೀರು ಸಿಗದಿರುವುದರಿಂದ ನಾವೇ ತೆಗೆಯುವುದು ಬೇಡ ಎಂದು ಹೇಳಿದ್ದೇವೆ ಸಮಾಜ ವಿಸ್ತರಣಾ ಅಧಿಕಾರಿಗಳ ಬಗ್ಗೆ ಒಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಹಲವಾರು ವರ್ಷಗಳಿಂದ ಅವರು ಅಲ್ಲೀ ಇದ್ದರೂ ಅವರಿಗೆ ಪ್ರಮೋಷನ್ ಅನುಕೂಲತೆ ಇಲ್ಲದಿರುವುದರಿಂದ ಆ ಬಗ್ಗೆ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎನ್. ಶಿವರಾವ್ (ಬಂಟವಾಳ).—ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇಲಾಖೆ ಬೇಡಿಕೆಗಳಿಗೆ ನನ್ನ ಸಮ್ಮತಿಯನ್ನು ಸೂಚಿಸುತ್ತಾ ಕೆಲವು ವಿಚಾರಗಳನ್ನು ಸಭೆಯ ಮುಂದಿಡುತ್ತೇನೆ. ಹಿಂದಿನ ಸರ್ಕಾರ ಮಾಡಿದ್ದ ಎಲ್ಲ ಕಾರ್ಯಕ್ರಮಗಳನ್ನೇ ಈ ಸರ್ಕಾರ ಮುಂದುವರೆಸುತ್ತಿದ್ದರೂ ಅದರ ಜೊತೆಗೆ ಅಂತ್ಯೋದಯ ಎಂಬ ಹೊಸ ಕಾರ್ಯಕ್ರಮವನ್ನು ಸೇರಿಸಿ ಬಡವರ ಏಳಿಗೆಯ ವಿಚಾರದಲ್ಲಿ ಹೆಚ್ಚು ಕಾಳಜಿ ವಹಿಸಲಾಗಿದೆ. ಅಧಿಕಾರಸ್ಥರು ಅಧಿಕಾರಕ್ಕೋಸ್ಕರ, ಮತ ಗಳಿಕೆಗೋಸ್ಕರ ಕೆಲವಾರು ವಿಚಾರಗಳನ್ನು, ಕೆಲವಾರು ಕಾರ್ಯಕಲಾಪಗಳನ್ನು ಈ ಮೊದಲು ಇಟ್ಟಿದ್ದರು. ಆದರೆ ಅವರು ಕೆಲವು ವಿಚಾರಗಳನ್ನು ಇಟ್ಟಿದ್ದರೇ ಹೊರತು ಸಾಕಷ್ಟು ಕೆಲಸ ಮಾಡಿಲಿಲ್ಲ. ಅವರು ಸಾಕಷ್ಟು ಕೆಲಸ ಮಾಡದೇಹೋದ ಕಾರಣ ಅವರನ್ನು ಜನ ನಂಬದೆ ಅವರು ಅಧಿಕಾರ ಕಳೆದು ಕೊಂಡರು. ಈಗಿನ ಸರ್ಕಾರ ಹಿಂದಿನವರು ಮಾಡಿದ ಲೋಪದೋಷಗಳನ್ನು ಸರಿಪಡಿಸಿಕೊಂಡು ಹೋಗಬೇಕಾದ್ದು ಕರ್ತವ್ಯವಾಗಿದೆ. ಈ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಒಂದು ಸಾವಿರಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರುವ ಕಡೆ ಕೊಳವೆ ಬಾವಿಗಳನ್ನು ತೊಡುವ ವಿಚಾರ ಪ್ರಸ್ತಾಪ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಸರಿಹೋಗದಿರುವ ವಿಚಾರ. ಅಲ್ಲಿ ಸಾಮೂಹಿಕ ಮನೆಗಳು ಇಲ್ಲದೇ ಇರುವುದರಿಂದ ಎಲ್ಲೆಲ್ಲಿ ೧೦ ಮನೆಗಳು ಇರುತ್ತವೆ ಅಲ್ಲಿಗೆಲ್ಲಾ ಕೊಳವೆ ಬಾವಿಗಳನ್ನು ಒದಗಿಸಬೇಕಾಗುತ್ತದೆ. ಅಲ್ಲಿ ಒಂದು ಮನೆಗೂ ಇನ್ನೊಂದು ಮನೆಗೂ ಅರ್ಧದಿಂದ ಒಂದು ಕಿಲೋಮೀಟರ್ ದೂರವಿರುತ್ತದೆ. ಹಾಗೂ ಅಲ್ಲಿ ಎತ್ತರದ ಪ್ರದೇಶದಲ್ಲಿ ಇರುವ ಜನರಿಗೆ ನೀರಿನ ಅಗತ್ಯ ಬಹಳ ಇದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಕೊಳವೆ ಬಾವಿಗಳನ್ನು ಒದಗಿಸ ಬೇಕಾಗಿದೆ. ಇವತ್ತು ಜನಾರೋಗ್ಯ ಇಲಾಖೆಯವರು ಏನು ಕೊಳವೆ ಬಾವಿಗಳನ್ನು ತೋಡುತ್ತಿದ್ದಾರೆ ಇವುಗಳಲ್ಲಿ ಬಹಳ ಲೋಪದೋಷಗಳು ಇವೆ. ಇವರು ಬಾವಿಗಳನ್ನು ತೋಡಲು ಕಂಟ್ರಾಕ್ಟರ್‌ಗಳಿಗೆ ಬಿಟ್ಟುಕೊಡುತ್ತಾರೆ. ಕೊಳವೆ ಬಾವಿಗಳನ್ನು ಎಲ್ಲೆಲ್ಲಿ ತೋಡಬೇಕೆಂದು ಶಾಸ್ತ್ರಜ್ಞರು ಜಾಗಗಳನ್ನು ಸೂಚಿಸಿರುತ್ತಾರೆ ಅಲ್ಲಿ ಅವರು ಬಾವಿಗಳನ್ನು ತೋಡುವುದಿಲ್ಲ, ಎಲ್ಲಿ ಜಾಗ ಸಮತಟ್ಟಾಗಿದೆ, ತಮ್ಮ ವಾಹನ ಹೋಗಲು ಅನುಕೂಲವಾಗಿದೆ ಅಂತಹ ಕಡೆ ಅವರು ಬಾವಿಗಳನ್ನು ತೋಡುತ್ತಾರೆ. ಅವರ ಇಚ್ಛೆಗೆ ಅನುಸಾರವಾಗಿ ಬಾವಿಗಳನ್ನು ತೋಡುತ್ತಿದ್ದಾರೆ. ಅಂತಹ ಕಡೆ ತೋಡಿದ ಕೊಳವೆ ಬಾವಿಗಳು ವಿಫಲವಾದರೆ ಅಂತಹ ಕಡೆ ಮತ್ತೊಂದು ಬಾವಿ ತೋಡಲು ಆಸ್ಪದವಿರುವುದಿಲ್ಲ. ಆದ್ದರಿಂದ ಶಾಸ್ತ್ರಜ್ಞರು ಯಾವ ಜಾಗ ನಿಗಧಿ ಮಾಡುತ್ತಾರೋ ಆ ಜಾಗದಲ್ಲಿ ಅವರು ಬಾವಿಗಳನ್ನು ತೋಡಬೇಕೆಂದು ಹೇಳುತ್ತೇನೆ. ಹಾಗೂ ಅವರು ತೋಡಿದ ಬಾವಿಗಳನ್ನು ಪರಿಶೀಲನೆ ಮಾಡಲು ಯಾರಿಗೂ ಅಧಿಕಾರ ಇಲ್ಲದಿರುವುದರಿಂದ ಕೆಲವು ಕಡೆ ಕಡಿಮೆ ಆಳ ತೋಡಿ ಹೆಚ್ಚು ಆಳ ತೋಡಿರುವುದಾಗಿ ಹೇಳಿ ಅಷ್ಟಕ್ಕೆ ಹಣ ಪಡೆದುಕೊಳ್ಳಬಹುದಾಗಿದೆ. ಆದ ಕಾರಣ ಅವರಿಗೆ ಬಿಲ್ ಪಾಸ್ ಮಾಡುವುದಕ್ಕಿಂತ ಮುಂಚೆ ಬಾವಿಗಳ ಆಳದ ಬಗ್ಗೆ ಪರಿಶೀಲನೆ ಮಾಡಲು ತಹಶೀಲ್ದಾರರಿಗೆ ಅಧಿಕಾರವನ್ನು ಕೊಟ್ಟು ಪರಿಶೀಲಿಸಬೇಕೆಂದು ನಾನು ಹೇಳುತ್ತೇನೆ. ಮತ್ತು ಕೊಳವೆ ಬಾವಿಗಳು ಫೇಲ್ ಆದ ಸಂದರ್ಭದಲ್ಲಿ ಪುನಃ ಅದೇ ಜಾಗದಲ್ಲಿ, ಅದೇ ವಠಾರದಲ್ಲಿ ಮತ್ತೆ ಇನ್ನೊಂದು ಕೊಳವೆ ಬಾವಿಯನ್ನು ತೋಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಎಲ್ಲಿ ಕೊಳವೆ ಬಾವಿಗಳಲ್ಲಿ ಹೆಚ್ಚು ಹೆಚ್ಚು ನೀರು ದೊರೆಯುತ್ತದೆ ಅಲ್ಲಿಗೆ ಪೈಪ್‌ಗಳನು ಅಳವಡಿಸಿ ಒಂದು ಅಥವಾ ೧½ ಕಿಲೋ ಮೀಟರ್ ದೂರದ ವಠಾರಗಳಿಗೂ ನೀರನ್ನು ಒದಗಿಸಹುದೆಂದು ಮತ್ತು ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಹಿಂದಿನ ಸರ್ಕಾರದಲ್ಲಿ ಕೆಲವು ಕಡೆ ತೆರೆದ ಬಾವಿಗಳನ್ನು ತೋಡಿಸಿದ್ದು ಅವುಗಳಲ್ಲಿ ಕೆಲವು ಬಾವಿಗಳಲ್ಲಿ ನೀರು ಬರದೇ ಇರತಕ್ಕ ಪರಿಸ್ಥಿತಿ ಇದೆ. ಅಂತಹ ಕಡೆ ಮತ್ತೊಂದು ಬಾವಿಯನ್ನು ತೋಡಿಸುವ ಬದಲು ಆ ಬಾವಿಗಳ ಆಳವನ್ನೇ ಮತ್ತೆ ೫ ರಿಂದ ೧೦ ಅಡಿಯವರೆಗೆ ಇಳಿಸದರೆ ಕಡಿಮೆ ವೆಚ್ಚದಲ್ಲಿ ನೀರನ್ನು ಪಡೆಯಬಹುದೆಂದು ನಾನು ಹೇಳುತ್ತೇನೆ. ಆದ್ದರಿಂದ ಫೇಲ್ ಆಗಿರುವ ಬಾವಿಗಳನ್ನು ಆಳಪಡಿಸುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳ

ಬೇಕೆಂದು ನಾನು ಹೇಳುತ್ತೇನೆ. ಇನ್ನು ಭಾಗ್ಯ ಜ್ಯೋತಿ ಯೋಜನೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಪ್ರಯೋಜನವನ್ನೂ ದೊರಕಿಸಿಲ್ಲ. ನಮ್ಮ ಹಳ್ಳಿಗಳ ಕಡೆ ಕಂಬ ತಂದು ಹಾಕಿ ಎರಡು ವರ್ಷಗಳಾದವು, ಅಲ್ಲಿಗೆ ತಂತಿಗಳು ಬಂದಿಲ್ಲ, ವಿದ್ಯುತ್ ಬಂದಿಲ್ಲ. ಬರೀ ಕಂಬ ತಂದು ಹಾಕುವುದರಿಂದ ಭಾಗ್ಯಜ್ಯೋತಿ ಯೋಜನೆ ಆಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಈ ಬಗ್ಗೆ ಗಮನಹರಿಸಬೇಕು. ನೇಗಿಲುಭಾಗ್ಯ ಯೋಜನೆಯು ಅಡಿಯಲ್ಲಿ ಹೆಚ್ಚುವರಿ ಲ್ಯಾಂಡನ್ನು ಭೂಮಿ ಇಲ್ಲದವರಿಗೆ ಕೊಡಬೇಕೆಂದು ಇದೆ. ಈ ಯೋಜನೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತ ವಾಗುವುದು ಕಷ್ಟವಿದೆ. ಕಾರಣ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್‌ಪ್ಲಸ್ ಲ್ಯಾಂಡೇ ಇಲ್ಲ. ಈ ಒಂದು ಯೋಜನೆ ಕೆಳಗೆ ಏನು ೧ ಎಕರೆ ಎಂದು ಹೇಳಿದ್ದೀರಿ ಅದನ್ನು ಎರಡೂವರೆ ಎಕರೆ ಒಳಗೆ ಇರುವವರಿಗೆ ಎಂದು ಮಾಡಿದರೆ ಈ ನೇಗಿಲುಭಾಗ್ಯ ಯೋಜನೆ ಪರಿಣಾಮಕಾರಿಯಾದೀತು ಎಂದು ನಾನು ಹೇಳುತ್ತೇನೆ. ಇನ್ನು ಐ.ಆರ್.ಡಿ.ಪಿ. ಯೋಜನೆ ಕೆಳಗೆ ಕುರಿಗಳಿಗಾಗಿ ಸಾಲ ಕೊಡುತ್ತಾರೆ, ಇದರಲ್ಲಿ ನಮ್ಮ ಜಿಲ್ಲೆಯಲ್ಲಿ ದುರ್ವ್ಯವಹಾರ ನಡೆಯುತ್ತಿದ್ದು ಈ ಬಗ್ಗೆ ಪುನರ್ ಪರಿಶೀಲನೆ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೂ ದನಗಳನ್ನು ಕೊಳ್ಳುವಾಗ ತಾಲ್ಲೂಕಿನ ಹೊರಗಡೆ ಯಿಂದಲೇ ಕೊಳ್ಳಬೇಕೆಂದು ನಿಬಂಧನೆ ಇದೆ. ಈ ನಿರ್ಬಂಧವನ್ನು ತೆಗೆದುಹಾಕಿ ರೈತ ತನ್ನ ತಾಲ್ಲೂಕಿ ನಲ್ಲಿಯೇ ಯಾರಿಂದ ಬೇಕಾದರೂ ದನಗಳನ್ನು ಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಇಲ್ಲದಿದ್ದರೆ ಇದರಲ್ಲೂ ಸಾಕಷ್ಟು ದುರ್ವ್ಯವಹಾರವಾಗುತ್ತದೆಂದು ನಾನು ಹೇಳುತ್ತೇನೆ. ಇವತ್ತು ಪಂಚಾಯಿತಿಗಳಲ್ಲಿ ಸಮಾಜ ಕಲ್ಯಾಣದ ಕೆಲಸ ಹಾಗೂ ರೆವಿನ್ಯೂ ಕೆಲಸ ಎರಡನ್ನೂ ಇವತ್ತು ಗ್ರಾಮ ಕರಣಿಕನೊಬ್ಬನೇ ಮಾಡುತ್ತಿದ್ದಾನೆ. ಇವತ್ತು ಎಲ್ಲಿ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಲ್ಲಿ ಎನ್.ಆರ್.ಇ.ಪಿ. ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಪಂಚಾಯಿತಿಯವರ ಆಲಸ್ಯ ಹಾಗೂ ದಡ್ಡತನದಿಂದ ನಡೆಯುತ್ತಿರುವುದರಿಂದ ಅಲ್ಲಿನ ಗ್ರಾಮ ಕರಣಿಕರೂ ಮುತುವರ್ಜಿ ವಹಿಸದೇ ಕೆಲಸ ಕಾರ್ಯಗಳಲ್ಲಿ ಹಿಂದೆ ಬಿದ್ದಿರುತ್ತಾರೆ. ಆದ್ದರಿಂದ ಸಮಾಜ ಕಲ್ಯಾಣದ ಕೆಲಸ ಕಾರ್ಯಗಳನ್ನು, ಪಂಚಾಯ್ತಿಯ ಕೆಲಸಗಳನ್ನು, ರೆವಿನ್ಯೂ ಕೆಲಸಗಳನ್ನು ಹೊರತುಪಡಿಸಿ ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಎನ್.ಆರ್.ಇ.ಪಿ. ಮುಖಾಂತರ ೨-೩ ವರ್ಷಗಳ ಹಿಂದೆ ಮಾಡಿದ ರಸ್ತೆಗಳು ಕೆಟ್ಟುಹೋಗಿದ್ದು ಅವುಗಳ ಯಾರೂ ಸಹಾ ನಡೆದಾಡುವಂತಹ ಸ್ಥಿತಿಯಿಲ್ಲ. ಇವುಗಳನ್ನು ಸರಿಪಡಿಸಲು ಇಲಾಖೆ ಪ್ರತ್ಯೇಕ ಹಣದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ಕಡೆ ಪೌಷ್ಟಿಕ ಆಹಾರದ ಸರಬರಾಜು ಬಗ್ಗೆ ಯಾವ ಕಾರ್ಯಕ್ರಮವೂ ಸಮರ್ಪಕವಾಗಿ ಆಗಿಲ್ಲ. ಆದ್ದರಿಂದ ಎಲ್ಲಾ ಗ್ರಾಮದ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಕ್ಕುವ ಹಾಗೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ, ಕರೀಗೌಡ.—(ಹಾಸನ) ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಾನು ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದರೆ ಹೊಗಳುವ ಹಾಗೂ ಕೆಟ್ಟದ್ದನ್ನು ಮಾಡಿದರೆ ತೆಗಳತಕ್ಕ ಸಹಜ ಗುಣವುಳ್ಳವನು ನಾನು ಎಂದು ಹೇಳಿ, ಇವತ್ತು ಈ ಸರ್ಕಾರದ ಸಾಧನೆಗಳ ಬಗ್ಗೆ ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ. ನನ್ನ ಜಿಲ್ಲೆಯ ಶಾಸಕರಾದ ಮಾನ್ಯ ಸೋಮಪ್ಪನವರು ಮಾತನಾಡುತ್ತಾ, ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ರಾಜ್ಯದಲ್ಲಿ ಬರಗಾಲ ಬಂತು. ಕುಡಿಯುವ ನೀರಿನ ಪರಿಸ್ಥಿತಿ ಉಲ್ಬಣ ವಾಯಿತೆಂದು ಹೇಳಿದರು. ಸ್ವಾಮಿ, ನಾನು ಅವರಿಗೆ ಕೇಳುತ್ತೇನೆ. ಬರಗಾಲ ಬರುವುದಕ್ಕೂ ಸರ್ಕಾರ ಆಡಳಿತಕ್ಕೆ ಬರುವುದಕ್ಕೂ ಯಾವುದೇ ಸಂಬಂಧವಿದೆಯೇ? ಪ್ರಕೃತಿ ವಿಕೋಪಕ್ಕೆ ಪ್ರತಿ ವರ್ಷವೂ ರಾಜ್ಯ ತುತ್ತಾಗುತ್ತಲೇ ಇದೆಯೆಂದು ಮಾನ್ಯ ಸೋಮಪ್ಪನವರು ಅರ್ಥ ಮಾಡಿಕೊಳ್ಳಬೇಕು. ಈ ಸಾರಿ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಕುಡಿಯುವ ನೀರಿನ ಪೂರೈಕೆಗಾಗಿ ಮಾಡಿರತಕ್ಕಂಥ ಕೆಲಸವನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಕೂಡ ಅಭಿನಂದನೆ ಸಲ್ಲಿಸಿದ್ದಾರೆ. ಹಾಸನ ಜಿಲ್ಲೆ ಒಂದಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿ ಸುಮಾರು ೬೩ ಲಕ್ಷ ರೂಪಾಯಿಗಳನ್ನು ಜನತಾ ಸರ್ಕಾರದವರು ಕೊಟ್ಟಿದ್ದಾರೆ. ಅದರಿಂದ ಅನೇಕ ಬಾವಿಗಳನ್ನು ಕೊರೆದಿದ್ದಾರೆ. ಸೋಮಪ್ಪನವರ ಕ್ಷೇತ್ರದಲ್ಲಿ ೧೨೪ ಇಂಚು ಮಳೆಯಾಗುತ್ತದೆ. ಅಲ್ಲಿ ನೀರಿನ ಬವಣೆ ಇಲ್ಲ, ಆ ಕಾರಣದಿಂದ ಅಲ್ಲಿ ಬಾವಿ ಗಳನ್ನು ಕೊರೆದಿಲ್ಲ. ೭ ತಾಲ್ಲೂಕುಗಳಲ್ಲಿ ಸುಮಾರು ೭೦-೮೦ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕ ಕೆಲಸಗಳ ಬಗ್ಗೆ ಸರ್ಕಾರದ ವಿಚಾರದಲ್ಲಿ ಹಿಂದುಮುಂದು ಮಾತನಾಡಲಿಕ್ಕೆ ಯಾರೂ ತಯಾರಾಗಿಲ್ಲ. ಕಾಮಗಾರಿಗಳ ಬಗ್ಗೆಯೂ ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ನಾನು ೫ ವರ್ಷಗಳ ಕಾಲ ತಾಲ್ಲೂಕು ಬೋರ್ಡು ಸದಸ್ಯನಾಗಿದ್ದೆ. ೧೯೮೦-೮೧ನೇ ಇಸವಿಯಲ್ಲಿ ಬರಗಾಲ ಬಂದಾಗ, ಹಿಂದೆ ಇದ್ದಂಥ ಸರ್ಕಾರದವರು ೧೦-೧೨ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದರು. ಈ ಸಾರಿ ಏಪ್ರಿಲ್ ತಿಂಗಳ ಕೊನೆಯಲ್ಲಿ ರಿಲೀಫ್ ವರ್ಕ್‌ಗಾಗಿ ನನ್ನ ಒಂದು ಕ್ಷೇತ್ರದಲ್ಲಿ ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪ್ರತಿ ಹಳ್ಳಿಯಲ್ಲಿ ಒಂದು ಕೆಲಸವನ್ನು ಮಾಡಿಸಲಾಗಿದೆ. ನಮ್ಮ ಕ್ಷೇತ್ರದ ಜನ ಸರ್ಕಾರವನ್ನು ಅಭಿನಂದಿಸುವುದರಲ್ಲಿ ಹಿಂದುಮುಂದು ನೋಡುವುದಿಲ್ಲ. ದನಕರುಗಳಿಗೆ ಹುಲ್ಲು ಒದಗಿಸುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಜನತಾ ಮನೆಗಳ ಬಗ್ಗೆ ಮಾತನಾಡಿದರು. ಕಾಂಗ್ರೆಸ್ ಸರ್ಕಾರದಲ್ಲಿ ಕಟ್ಟಿದಂಥ ಮನೆಗಳು ಇವುಗಳಿಗೆ ಕಾಂಗ್ರೆಸ್ ಮನೆಗಳೆಂದು ಹೆಸರು ಇಡಬೇಕಾಗಿತ್ತು. ಹಿಂದಿನ ಸರ್ಕಾರದವರು ಏನು ಮಾಡಿದರು, ಚುನಾವಣೆ ಸಮಯದಲ್ಲಿ ಒಂದೊಂದು ತಾಲ್ಲೂಕಿಗೆ ೧೦೦೦-೧೩೦೦ ಮನೆಗಳನ್ನು ಕಟ್ಟಿಸಿದರು. ಮಂಜೂರಾತಿ ದೊರಕಿದ್ದು ಕೇವಲ ೩೨೦ ಮನೆಗಳಿಗೆ ಮಾತ್ರ. ಎಷ್ಟೋ ಮನೆಗಳು ಈಗಾಗಲೇ ಬಿದ್ದು ಹೋಗಿವೆ. ಅರ್ಧಂಬರ್ಧ ಆಗಿರುವ ಮನೆಗಳು ಬೇಕಾದಷ್ಟು ಇವೆ. ಬಿದ್ದು ಹೋಗಿರುವ ಮನೆಗಳ ಬಗ್ಗೆ ದೂರು ಕೊಟ್ಟರೂ ಏನೂ ಉಪಯೋಗವಾಗಲಿಲ್ಲ. ನಮ್ಮ ಸ್ವಂತ ಊರಿನಲ್ಲಿಯೇ ಮೂರು ಮನೆಗಳು ಬಿದ್ದು ಹೋಗಿವೆ. ಇನ್ನು ಡಿ.ಪಿ.ಎ.ಪಿ. ಹಾಗೂ ಐ.ಆರ್.ಡಿ.ಪಿ ಯೋಜನೆಗಳ ಮೂಲಕ ದೀನದಲಿತರಿಗೆ ಹಿಂದುಳಿದ ವರ್ಗಗಳವರಿಗೆ ಕುರಿ ಕೋಳಿ ಸಾಲ ಕೊಡಿಸಿದರು. ಇವತ್ತು ಯಾರ ಮನೆಯಲ್ಲೂ ಕುರಿಗಳಾಗಲೀ, ಕೋಳಿಗಳಾಗಲೀ ಇಲ್ಲ. ಎತ್ತುಗಾಡಿ ಸಾಲ ಕೊಡಿಸಿದರೂ ಒಬ್ಬರೂ ಉಳಿಸಿಕೊಂಡಿಲ್ಲ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೇಗಿಲಭಾಗ್ಯ ಯೋಜನೆ ಜಾರಿಗೆ ಬಂದಿದೆ, ಅದೇ ರೀತಿ ಪ್ರತಿ ಹಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ೫ ಕುಟುಂಬಗಳನ್ನು ಹುಡುಕಿ ಅವುಗಳನ್ನು ಮೇಲಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ತಿಳಿಸಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಮಾನ್ಯ ಮಂತ್ರಿಯವರು ಅಧಿಕಾರ ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದ ಪಂಚಾಯತ್ ರಾಜ್ಯ ಮಸೂದೆಯನ್ನು ಏನು ತಂದಿದ್ದಾರೆ, ಇದು ಬಹಳ ಅಮೋಘವಾದುದು, ಕಳೆದ ೩೫ ವರ್ಷಗಳಲ್ಲಿ ನೀವು ಇದನ್ನು ಮಾಡುವುದಕ್ಕಾಗಲಿಲ್ಲ, ಈ ಬೇಡಿಕೆ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಸಭಾಧ್ಯಕ್ಷರೇ, ಜನತಾ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಜನತೆಗೆ ಮಾತುಕೊಟ್ಟಂತೆ ಅಧಿಕಾರ ವಿಕೇಂದ್ರೀಕರಣವನ್ನು ಮಾಡುತ್ತೇವೆಂಬ ಅಂಶವನ್ನು ಒಪ್ಪಿ ಅದನ್ನು ದೃಢೀಕರಿಸಿ, ಅದಕ್ಕೆ ಪ್ರಥಮ ಸ್ಥಾನ ಕೊಟ್ಟು ಇಂದು ಮಾನ್ಯ ಗ್ರಾಮೀದಾಭಿವೃದ್ಧಿ ಸಚಿವರು ಪ್ರಥಮವಾಗಿ ವಿಧಾನ ಸಭೆಯಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ, ಜನತಾ ಸರ್ಕಾರವನ್ನು ಸ್ವಾಗತಿಸುತ್ತೇನೆ. ಅದೇರೀತಿ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಮಂತ್ರಿಯವರನ್ನು ಅಭಿನಂದಿಸುತ್ತೇನೆ. ೧೯೭೭ರಲ್ಲಿ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ, ಗ್ರಾಮಾಭಿವೃದ್ಧಿಗೋಸ್ಕರ ಒಟ್ಟು ಆದಾಯದಲ್ಲಿ ಶೇಕಡ ೪೦ ಭಾಗವನ್ನು ಮೀಸಲಿಡಬೇಕೆಂದು ತೀರ್ಮಾನ ಮಾಡಿತು. ಇವತ್ತು ಅದನ್ನೇ ರಾಜ್ಯ ಸರ್ಕಾರ ಮುಂದುವರಿಸಿಕೊಂಡು ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ತ್ವರಿತಗತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗಿ ಯೋಜನೆಗಳನ್ನು ರೂಪಿಸಿ ನಮ್ಮ ಮುಂದೆ ಮಂಡಿಸಿದೆ, ಇದು ಸ್ವಾಗತಾರ್ಹವಾದದ್ದು. ಈ ವಿಚಾರದಲ್ಲಿ ನಮ್ಮ ಸ್ನೇಹಿತರುಗಳು ರಾಜಕೀಯವಾಗಿ ಕೆಲವು ಟೀಕೆಗಳನ್ನು ಮಾಡಿದರೂ ಕೂಡ ಮನಃಪೂರ್ವಕವಾಗಿ ಮಾಡಲಿಲ್ಲವೆಂದೂ ಬರೀ ಪ್ರಚಾರಕ್ಕಾಗಿ ಮಾತ್ರ ಮಾಡಿದರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮೀಣ ರಾಜ್ಯದ ಸ್ಥಾಪನೆಗಾಗಿ ನಮ್ಮ ಸರ್ಕಾರ ಕೈಗೊಂಡಿರತಕ್ಕ ಕಾರ್ಯಕ್ರಮಗಳು ಸ್ತುತ್ಯಾರ್ಹವಾಗಿವೆ. ನಮ್ಮ ಸ್ನೇಹಿತರುಗಳು ಕೂಡ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಸಹಕರಿಸುತ್ತಾರೆಂದು ನಂಬಿರುತ್ತೇವೆ. ಸರ್ಕಾರದವರು ಈ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶಗಳಲ್ಲ ನ್ಯಾಯಸಮ್ಮತವಾಗಿ ಕಾರ್ಯಗತವಾಗುವಂತೆ ತಾಲ್ಲೂಕು, ಜಿಲ್ಲಾ ಮಟ್ಟದ ಅಧಿಕಾರಿಗಳು

ಹಾಗೂ ಚುನಾಯಿತ ಸದಸ್ಯರುಗಳ ಮೂಲಕ ಜಾರಿಗೊಳಿಸುವಂತೆ ತ್ವರಿತವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಈ ಸಾರಿ ಬರಗಾಲ ಕಾರ್ಯಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸರ್ಕಾರದವರು ಯಾವರೀತಿ ಎದರಿಸಿದರು ಎನ್ನುವುದನ್ನು ಯಾರೂ ಕೂಡ ಅಲ್ಲಗಳೆಯುವಂತಿಲ್ಲ.

ಈ ಕಾರ್ಯಕ್ರಮವನ್ನು ಎಲ್ಲಾ ಜನತೆಯೂ ಮೆಚ್ಚಿಕೊಂಡಿದ್ದಾರೆ. ಇದು ಜನತಾ ಪಕ್ಷದವರೇ ಆಗಲಿ, ಯಾವ ರಾಜಕೀಯ ಪಕ್ಷದವರೇ ಆಗಲಿ, ಅಲ್ಲಗಳೆಯದೇ ಸ್ವಾಗತ ಮಾಡಿರತಕ್ಕ ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ದುಡ್ಡಿನ ಕೊರತೆ ಇದ್ದರೂ ಸಹ ನಮ್ಮ ಸರ್ಕಾರ ತನ್ನ ಸ್ವಂತ ಆದಾಯದಿಂದ ಹಣವನ್ನು ಬಳಸಿ ನೀರಿನ ಕೊರತೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಹೋಗಲಾಡಿಸಿ ಜನತೆಯ ಮೆಚ್ಚಿಗೆಯನ್ನು ಪಡೆದಿದೆ, ಇದೊಂದು ದೊಡ್ಡ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಆ ಕಡೆ ಜನರು ಈ ಕಡೆ ಜನರು ಮನಃಪೂರ್ವಕವಾಗಿ ಸ್ವಾಗತಿಸಿ ಒಪ್ಪಿಕೊಳ್ಳತಕ್ಕ ಕಾರ್ಯಕ್ರಮ. ಇವೊತ್ತು ಗ್ರಾಮಗಳ ಅಭಿವೃದ್ಧಿಗೆ ರೂಪಿಸಬೇಕಾದ ಕಾರ್ಯಕ್ರಮಗಳು ಆಗಬೇಕಾದರೆ ಖಂಡಿತ ಅಧಿಕಾರ ವಿಕೇಂದ್ರೀಕರಣವಾಗಬೇಕು. ಆ ರೀತಿ ಮಾಡಿದರೆ ಮಾತ್ರ ಈ ಕಾರ್ಯಕ್ರಮಗಳನ್ನು ತ್ವರಿತವಾಗಿ ಜಾರಿಗೊಳಿಸುವುದಕ್ಕೆ ಅನುಕೂಲವಾಗುತ್ತದೆ. ಕಳೆದ ೩೫ ವರ್ಷದಿಂದ ಜಾರಿ ಆಗದೇ ಇದ್ದಂಥ ಮೂಲಭೂತ ಸಂಸ್ಥೆಗಳಿಗೆ ನಮ್ಮ ಸರ್ಕಾರ ಸಮಯೋಜಿತವಾಗಿ ಯೋಚನೆ ಮಾಡಿ, ಜಿಲ್ಲಾ ಪರಿಷತ್ತು ಕಾರ್ಯರೂಪಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಅದನ್ನು ಕೂಡ ನಾನು ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಸ್ವಾಗತಿಸುತ್ತಿದ್ದೇನೆ. ಗ್ರಾಮಾಭಿವೃದ್ಧಿ ಕಾರ್ಯಕ್ರಮದಲ್ಲಿ ಹೆಚ್ಚು ಪ್ರಯೋಜನಕಾರಿಯಾದ ಎನ್‌ಆರ್‌ಇಪಿ ಕಾರ್ಯಕ್ರಮದಲ್ಲಿ ಅನೇಕ ಗ್ರಾಮೀಣ ಕಾರ್ಯಗಳು, ನಮ್ಮ ಸರ್ಕಾರ ಹೊಸದಾಗಿ ಅಧಿಕಾರ ವಹಿಸಿಕೊಂಡನಂತರ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿವೆ ಎಂದು ಹೇಳುತ್ತೇನೆ. ಇನ್ನು ಅಂತ್ಯೋದಯ ಕಾರ್ಯಕ್ರಮದ ಬಗ್ಗೆ ನಮ್ಮ ಮಹದೇವ್ ಅವರು ಅಂತ್ಯ ಮತ್ತು ಉದಯ ಎಂದು ಹೇಳಿದ್ದಾರೆ. ಒಂದು ಅಂತ್ಯ ಆದಮೇಲೆ ಮತ್ತೊಂದು ಉದಯವಾಗಲೇ ಬೇಕೆಂದು ಮಾನ್ಯ ಬಂಗಾರಪ್ಪನವರು ತಿಳಿಸಿದರು. ಅಂತ್ಯೋದಯ ಸ್ಕೀಮಿನಿಂದ ನಿಜವಾಗಿ ಬಡವರ 'ಉದ್ಧಾರವಾಗುತ್ತದೆ. ಅದರ ಬಗ್ಗೆ ಟೀಕೆ ಅನವಶ್ಯಕ. ಜಾರಿಗೊಳಿಸುವಾಗ ಲೋಪದೋಷಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟು ಯಶಸ್ವಿಯಾಗಿ ಆಗತಕ್ಕ ಕಾರ್ಯ ರೂಪವನ್ನು ರೂಪಿಸಬೇಕೇ ಹೊರತು ಟೀಕೆಗೆ ಒಳಪಡಿಸಬಾರದು. ಈ ಆಡಳಿತ ನಿರ್ವಹಣೆಯ ಬಗ್ಗೆ ಗ್ರಾಮಾಂತರ ಪ್ರದೇಶಗಳ ಕೆಲವು ಅನುಭವಗಳನ್ನು ನಾನು ಈ ಸದನದ ಮುಂದೆ ಈ ಸಂದರ್ಭದಲ್ಲಿ ಇಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಅವುಗಳನ್ನು ಪರಿಗಣನೆಗೆ ತೆಗೆದುಕೊಂಡು ಅವು ಸಮರ್ಪಕವಾಗಿ ಗ್ರಾಮೀಣ ಜನತೆಗೆ ಅನುಕೂಲವಾಗುವಂತೆ ಒಳಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಲೆಕ್ಕಿಗರ ಅವಾಂತರ ಏನಿದೆ ಎಂದರೆ ಸರ್ಕಾರ ಯಾವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಮಾಡಿರುತ್ತಾರೆ ಅವೆಲ್ಲಕ್ಕೂ ಅಂದರೆ ಹತ್ತು ಚಿತ್ರ ಪಟಗಳನ್ನು ಒಂದು ಮಸಿಬಟ್ಟು ನುಂಗಿದಂತೆ ಎಲ್ಲಾ ನುಂಗಿಬಿಡುತ್ತಾರೆ.

ಶ್ರೀ ಚಿಮ್ಮನಕಟ್ಟಿ.—ಅಂತ್ಯೋದಯ ತಮ್ಮ ಕ್ಷೇತ್ರದಲ್ಲಿ ಎಷ್ಟು ಜಾರಿಯಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಬಿ. ಗಂಗಣ್ಣ.—ಮಾನ್ಯ ಚಿಮ್ಮನಕಟ್ಟಿಯವರಿಗೆ ನನ್ನ ಕ್ಷೇತ್ರದಲ್ಲಿ ಅಂತ್ಯೋದಯ ಸ್ಕೀಮಿನಿಂದ ಆಗಿರತಕ್ಕ ಪ್ರಗತಿಯನ್ನು ವಿವರಿಸಲಿಕ್ಕೆ ಆಗುವುದಿಲ್ಲ. ಅವರನ್ನು ನನ್ನ ಕ್ಷೇತ್ರಕ್ಕೆ ಆಹ್ವಾನಿಸುತ್ತೇನೆ, ಅವರೇ ಬಂದು ನೋಡಲಿ.

ಉಪಾಧ್ಯಕ್ಷರು.—ಅಂತ್ಯೋದಯ ಸ್ಕೀಮ್ ಜನತಾ ಸರ್ಕಾರದಲ್ಲಿ ಈಗ ಪ್ರಾರಂಭವಾಗಿರುವುದು

ಶ್ರೀ ಬಿ. ಗಂಗಣ್ಣ.—ಗ್ರಾಮಲೆಕ್ಕಿಗರಿಂದ ಆಗತಕ್ಕ ತೊಂದರೆಗಳನ್ನು ನಿವಾರಣೆ ಮಾಡಬೇಕಾದರೆ, ಗ್ರಾಮಲೆಕ್ಕಿಗರನ್ನು ಪಂಚಾಯಿತಿ ಛೇರಮನ್‌ರವರ ಅಧೀನದಲ್ಲಿ ತರದೇ ಹೋದರೆ ನ್ಯಾಯ ರೀತಿಯಲ್ಲಿ ಆಗುವುದಿಲ್ಲ. ಈಗ ನಾನು ಇನ್ನೂ ಅನೇಕ ಸಲಹೆಗಳನ್ನು ಕೊಡಬೇಕೆಂದಿದ್ದರೂ ತಾವು ಸಮಯದ ಅಭಾವವನ್ನು ತೋರಿಸುತ್ತಿದ್ದೀರ. ಮುಂದಿನ ದಿನಗಳಲ್ಲಿ ಅನೇಕ ಸಂದರ್ಭ ಸಿಕ್ಕುವಂತ ಅವಕಾಶ ಇರುವುದರಿಂದ, ಆ ದಿವಸಗಳಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಸಭೆಯ ಮುಂದಿಡಲು ಇಷ್ಟಪಡುತ್ತೇನೆ. ಈಗ ಸಮಯದ ಅಭಾವವಿರುವುದರಿಂದ, ಕೆಲವು ಲಿಖಿತ ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ನಮ್ಮ ಮಾನ್ಯ ಮಂತ್ರಿಗಳು ಅವುಗಳನ್ನು ಅಂಗೀಕರಿಸಬೇಕೆಂದು

ಕೇಳಿಕೊಂಡು, ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳ ಉತ್ತಮವಾದಂಥ ಕಾರ್ಯಕ್ರಮ ನಡೆದಿದೆ. ನನ್ನ ಮೂರು ತಾಲ್ಲೂಕಿನ ನಾಲ್ಕು ಹೋಬಳಿಗಳಲ್ಲೂ ಉತ್ತಮವಾಗಿ ಕಾರ್ಯ ನಡೆದಿದೆ. ಎಲ್ಲಿಯೂ ಕೂಡ ತಾರತಮ್ಯಕ್ಕೆ ಅವಕಾಶ ಇಲ್ಲದೇ ಕುಡಿಯುವ ನೀರಿನ ಕೊರತೆ ಎಲ್ಲಿತ್ತು ಅದನ್ನು ಹೋಗಲಾಡಿಸಿದ್ದಾರೆ. ೧೦೦ ಕೊಳವೆಬಾವಿಗಳನ್ನು ಹಾಕಿಕೊಟ್ಟಿದ್ದಾರೆ, ಆ ಬಗ್ಗೆ ನಾನು ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳಿಗೆ ನಮ್ಮ ಜನರ ಪರವಾಗಿ ಅಭಿನಂದಿಸುತ್ತೇನೆ. ತಾರತಮ್ಯ ರಹಿತವಾಗಿ ನಮ್ಮ ಸರ್ಕಾರ ಆಡಳಿತ ನಿರ್ವಹಣೆಯನ್ನು ನಿರ್ವಹಿಸಿ ಜನ ಮೆಚ್ಚುವಂತೆ ಮಾಡಿದ್ದಾರೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಂಪಾಪತಿ.—(ದಾವಣಗೆರೆ) ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತಿನ ದಿವಸ, ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ ಅವನ್ನು ನಾನು ಬೆಂಬಲಿಸುತ್ತೇನೆ. ಹಾಗೆ ಇದರಲ್ಲಿ ಇರತಕ್ಕ ಕೆಲವು ಲೋಪದೋಷಗಳನ್ನು ಕೂಡ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ. ಈಗ ಇವರು ಗ್ರಾಮಾಭಿವೃದ್ಧಿಯ ಬಗ್ಗೆ ಹೇಳುತ್ತಾರೆ. ಗ್ರಾಮಾಭಿವೃದ್ಧಿಯಾಗಬೇಕಾದರೆ ಏನು ಮಾಡಬೇಕು ಎನ್ನುವುದು ಬಹಳ ಮುಖ್ಯ. ಗ್ರಾಮಾಭಿವೃದ್ಧಿ ಆಗತಕ್ಕಂಥ ಕೆಲಸಗಳೇನೂ ನಡೆದಿಲ್ಲ ಎಂದು ಹೇಳುತ್ತೇನೆ. ಇನ್ನು ಅಂತ್ಯೋದಯದ ಬಗ್ಗೆ ಹೇಳಿದ್ದಾರೆ. ಇದು ಪ್ರಾರಂಭವಾಗಿ ಒಂದು ತಿಂಗಳು ಆಗಿದೆ. ಇದರಲ್ಲಿ ಏನು ಕಾರ್ಯಕ್ರಮ ಇದೆ ಎಂದರೆ ತಿಂಗಳಿಗೆ ಒಂದು ನೂರು ರೂಪಾಯಿಗಿಂತಲೂ ಕಡಿಮೆ ವರಮಾನವಿರುವ ೫ ಜನರನ್ನು ಗ್ರಾಮದಲ್ಲಿ ಆಯ್ಕೆ ಮಾಡುವಂತಾದ್ದು ಇದೆ. ಇಂತಹ ಅಂತ್ಯೋದಯ ಸ್ಕೀಮು ಯಾರಿಗೆ ಬೇಕು ಎಂದು ಕೇಳುತ್ತೇನೆ. ಒಂದು ನೂರು ರೂಪಾಯಿ ವರಮಾನ ಅಂದರೆ ಇದೇನು ಸ್ವಾಮಿ ಇದು. ಸರ್ಕಾರದವರೇ ಕನಿಷ್ಟ ಕೂಲಿ ೯ ರೂಪಾಯಿ ೪೦ ಪೈಸೆ ಎಂದು ಗೊತ್ತು ಮಾಡಿರುವಾಗ, ೧೦೦ ರೂಪಾಯಿ ವರಮಾನ ಅಂದರೆ ಇದೇನಾಗುತ್ತದೆ ತಾವೇ ಯೋಚನೆ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಅಂತ್ಯೋದಯ ಯೋಜನೆ ೧೦೦ ರೂಪಾಯಿ ವರಮಾನದೊಳಗೆ ಇರುವವರಿಗೆ ಅಳವಡುತ್ತದೆ. ಅಂದರೆ ಓಲ್ಡ್ ಏಜ ಪೆನ್ಷನ್‌ಗೆ ಪಡೆಯುವವರಿಗೂ ಇದು ಅಳವಡಿಸುತ್ತದೆ.

ಶ್ರೀ ಬಿ. ಭೈರಪ್ಪಾಜಿ.—ಅತ್ಯಂತ ಕಡು ಬಡವರನ್ನು ಒಂದೊಂದು ಹಳ್ಳಿಯಲ್ಲಿ ೫–೫ ಕುಟುಂಬಗಳನ್ನು ಆರಿಸಿಕೊಳ್ಳಿ.

ಶ್ರೀ ಪಂಪಾಪತಿ.—ಅತ್ಯಂತ ಕಡು ಬಡವರಾದವರು ಹಳ್ಳಿಹಳ್ಳಿಯಲ್ಲೂ ಇದ್ದಾರೆ. ಬಡವರು ಎಷ್ಟು ಜನರಿರುತ್ತಾರೆ ಅವರೆಲ್ಲರಿಗೂ ಕೊಡಿ. ಆದರೆ ೧೦೦ ರೂಪಾಯಿ ವರಮಾನದ ಒಳಗಿರಬೇಕೆಂದು ತಾವು ನಿಗದಿ ಮಾಡಿದರೆ ನಿಮ್ಮ ಯೋಜನೆಗೆ ಯಾರೂ ಕೂಡ ಸಿಕ್ಕುವುದಿಲ್ಲ.

ಶ್ರೀ ಬಿ. ಭೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪಂಪಾಪತಿಯವರು ಹೇಳುತ್ತಿರುವುದು ಸತ್ಯ. ಬಡವರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ.

ಶ್ರೀ ಪಂಪಾಪತಿ.—ಬರೀ ಈ ವಿಧಿಯನ್ನು ನೀವು ವಿಧಿಸಲು ಹೋಗಬೇಡಿ. ಬಡವರನ್ನು ಹುಡುಕಿ ಅವರಿಗೆ ಕೊಡಿ. ೫ ಅಥವಾ ೧೦ ಕುಟುಂಬಗಳಿಗೆ ಕೊಡಿ. ಒಂದು ವೇಳೆ ಕೆಲವು ಹಳ್ಳಿಗಳಲ್ಲಿ ನೂರು ಜನ ಕಡು ಬಡವರಿದ್ದರೆ ಆ ನೂರು ಜನರಿಗೂ ಕೊಡಿ. ಅದರಲ್ಲಿ ಏನೂ ತಪ್ಪಿಲ್ಲ. ಗ್ರಾಮೀಣ ಅಭಿವೃದ್ಧಿ ಎಂದರೆ, ಏನು? ಗ್ರಾಮೀಣ ಪ್ರದೇಶದಲ್ಲಿ ಜನತಾ ಮನೆಗಳನ್ನು ಕೊಟ್ಟಿದ್ದೀರಿ, ಆದರೆ ಅವು ಯಾವ ಸ್ಥಿತಿಯಲ್ಲಿವೆ ನೋಡಿದ್ದೀರಾ? ನಮ್ಮ ಚಿತ್ರದುರ್ಗ ಜಿಲ್ಲಾ ಕಛೇರಿಯ ಮುಂದೆ ಜನರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅಲ್ಲಿ ಜನತಾ ಮನೆಗಳು ಬಿದ್ದು ಹೋಗುತ್ತಿವೆ. ೬೧ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಸ್ಥಳದಲ್ಲಿ ಕೇವಲ ೨೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ. ಇನ್ನೂ ೪೧ ಲಕ್ಷ ರೂಪಾಯಿಗಳನ್ನು ನೀವೇ ಇಟ್ಟುಕೊಂಡಿದ್ದೀರಿ. ಇವತ್ತು ಬೇಕಾದಷ್ಟು ಜನತಾ ಮನೆಗಳು ಬಿದ್ದು ಹೋಗುತ್ತಿವೆ. ಉದಾಹರಣೆಗೆ ಹೇಳುವುದಾದರೆ ಜಗಳೂರು ತಾಲ್ಲೂಕಿನಲ್ಲಿ ಮಹಾರಾಜ ಹಟ್ಟಿ ಎಂದು ಇದೆ. ಅಲ್ಲಿ ಒಂದು ಮನೆಯು ಭಾವಣಿ ಗಂಡ ಹೆಂಡತಿಯರ ಮೇಲೆ ಕುಸಿದು ಬಿದ್ದು ಅವರ ಸೊಂಟಗಳು ಮುರಿದು ಹೋದವು. ೨ ಮಕ್ಕಳು ಸತ್ತವು.

ಇಗೇ ನಿಮ್ಮ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಆ ಗ್ರಾಮದಲ್ಲಿರತಕ್ಕ ಜನರು ಊರನ್ನು ಬಿಟ್ಟು ಹೋದ ಮೇಲೆ ಅದನ್ನು ಅಭಿವೃದ್ಧಿ ಮಾಡೋಣವೆಂದು ಯೋಚನೆ ಮಾಡಿದ್ದೀರಾ? ನಿಮ್ಮ ಜನತಾ ಮನೆಗಳು ಇನ್ನೂ ಬೇಕಾದಷ್ಟು ಬೀಳುವ ಸ್ಥಿತಿಯಲ್ಲಿರುವುದರಿಂದ ಅವು ಬೀಳುವುದಕ್ಕೆ ಮುಂಚಿತ ವಾಗಿಯೇ ಬಾಕಿ ಇರತಕ್ಕ ಹಣವನ್ನು ಬಿಡುಗಡೆ ಮಾಡಿ ಆ ಜನರಿಗೆ ನೆರವಾಗಿ.

ಸ್ವಾಮಿ, ತಾವು ಇವತ್ತು ನೇಗಿಲ ಭಾಗ್ಯ ಯೋಜನೆಯ ಅಡಿಯಲ್ಲಿ ಬಡವರಿಗೆ ನೇಗಿಲನ್ನು ಕೊಡುತ್ತಿದ್ದೀರಿ. ನಾನೂ ಒಬ್ಬನಿಗೆ ಒಂದು ನೇಗಿಲನ್ನು ಕೊಟ್ಟೆ. ಆ ನೇಗಿಲನ್ನು ನೋಡಿ ಆ ರೈತ ಬೆಪ್ಪಾದ. ಅದನ್ನು ಏನು ಮಾಡಬೇಕೆಂದು ಅವನಿಗೆ ಗೊತ್ತಿಲ್ಲ. ಯಾರಿಗೆ ಯಾವುದನ್ನು ಕೊಡಬೇಕೋ ಅದನ್ನು ಕೊಡಿ. ಏನೋ ಒಂದನ್ನು ತೆಗೆದುಕೊಂಡು ಹೋಗಿ ಒಂದು ಕಡೆ ಇಟ್ಟಿರುತ್ತೀರಿ, ಯಾರೋ ಒಬ್ಬರನ್ನು ಕರೆದು ಅದನ್ನು ಕೊಡುತ್ತೀರಿ, ಇದಕ್ಕೆ ಬದಲು ನೇಗಿಲನ್ನು ಕೊಡಬೇಕಾದರೆ ಆ ರೈತನಿಗೆ ಜಮೀನು ಇದೆಯೆ, ಇಲ್ಲವೆ? ಎಂಬುದನ್ನು ನೋಡಿ ಕೊಡಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಕೊಟ್ಟ ನೇಗಿಲನ್ನು ಅವನು ತೆಗೆದು ಕೊಂಡು ಹೋಗಿ ಏನು ಮಾಡಬೇಕು, ಆದ್ದರಿಂದ ಅವನು ಅದನ್ನು ತೆಗೆದುಕೊಂಡು ಹೋಗುವು ದಕ್ಕೆ ಇಷ್ಟಪಡಲಿಲ್ಲ. ಆದರೂ ಬಿಟ್ಟೆ ಬಂದದ್ದನ್ನು ಏತಕ್ಕೆ ಬಿಡಬೇಕೆಂದು ತೆಗೆದುಕೊಂಡಹೋದ. ಸರ್ಕಾರದಿಂದ ನೇಗಿಲನ್ನು ಕೊಡುತ್ತೀರಿ. ಆದರೆ ಕೊಡುವಾಗ ಒಳ್ಳೆಯದನ್ನು ಕೊಡಿ.

ಸ್ವಾಮಿ, ಬರಗಾಲ ಪ್ರದೇಶವೆಂದು ಕೆಲವು ತಾಲ್ಲೂಕುಗಳನ್ನು ಕರಿದಿದ್ದೀರಿ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ, ಚಿತ್ರದುರ್ಗ, ಹೊಸದುರ್ಗ, ಜಗಳೂರು, ಮೊಳಕಾಲ್ಮೂರು ಹೊಳಲ್ಕೆರೆ ಎಂದು ಗೊತ್ತು ಮಾಡಿದೀರಿ. ಅಲ್ಲಿನ ಜನ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಮಳೆ ಇಲ್ಲದೆ ಬೆಳೆ ಇಲ್ಲ. ಈಗ ಅವರು ಸಾಲವನ್ನು ಮನ್ನಾ ಮಾಡುವುದಕ್ಕೆ ವ್ಯವಸ್ಥೆ ಮಾಡಿ ದ್ದೀರಾ? ಕಂದಾಯವನ್ನು ವಜಾ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ? ಹಾಗಾದರೆ ಅವರ ಗತಿ ಏನು? ಬಾಯಲ್ಲಿ ನೋಡಿದರೆ ನಾವು ಗ್ರಾಮೀಣ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ. ಬರಗಾಲ ಪ್ರದೇಶವೆಂದು ತಾವು ಏನು ಘೋಷಣೆ ಮಾಡಿದ್ದೀರಿ ಅಂಥ ಗ್ರಾಮಗಳಲ್ಲಿ ಅಂತ ತಾಲ್ಲೂಕುಗಳಲ್ಲಿ ರೈತರು ತೆಗೆದುಕೊಂಡಿರತಕ್ಕ ಸಾಲವನ್ನು ಮನ್ನಾ ಮಾಡಿ. ಕಂದಾಯವನ್ನು ಮಾಫಿ ಮಾಡಿ ಅವರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಬೇಸಾಯದ ಜಮೀನು ಇರುವುದು ತಮಗೆಲ್ಲಾ ಗೊತ್ತಿರುವಂತೆ ಹಳ್ಳಿಗಳಲ್ಲಿ. ಸರ್ಕಾರದವರು ವರಲಕ್ಷ್ಮಿಯೋ ಅಥವಾ ಬೇರೆ ಯಾವುದೇ ಒಂದು ಹತ್ತಿಬೀಜವನ್ನು ನಮ್ಮ ಕಡೆ ರೈತರಿಗೆ ಕೊಟ್ಟರು. ಆದರೆ ಆ ಬೀಜಗಳು ಹುಟ್ಟಲೇ ಇಲ್ಲ. ಮೊನ್ನೆ ಮಾನ್ಯ ಮಂತ್ರಿಗಳು ನಮ್ಮ ದಾವಣಗೆರೆಗೆ ಬಂದಿದ್ದಾಗ ನಮ್ಮ ರೈತರು ಮನವಿ ಗಳನ್ನು ಇವರಿಗೆ ಕೊಟ್ಟರು. ಸ್ವಾಮಿ, ಸರ್ಕಾರದವರು ಕೊಟ್ಟ ಹತ್ತಿಬೀಜವನ್ನು ತಂದು, ಅದಕ್ಕೆ ಸಾಲು ಮಾಡಿ ಗೊಬ್ಬರವನ್ನು ಹಾಕಿ ಜಮೀನನ್ನು ಉತ್ತು, ಬಿತ್ತಿ ಈ ಬೀಜವನ್ನು ಹಾಕಿದರೆ ಒಂದು ಬೀಜವೂ ಹುಟ್ಟಲಿಲ್ಲ. ಇದ್ದರಿಂದಾಗಿ ಆ ಜನರು ಸಾಲದಿಂದ ತತ್ತರಿಸಿ ಹೋಗಿದ್ದಾರೆ. ಈಗ ಅವರಿಗೆ ಏನು ಪರಿ ಹಾರವನ್ನು ಕೊಡುತ್ತೀರಿ? ಇನ್ನು ಮುಂದೆ ಇಂಥ ಕೆಲಸಕ್ಕೆ ಬಾರದ ಬಿತ್ತನೆ ಬೀಜಗಳನ್ನು ಮಾರಾಟ ಮಾಡುವುದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಒಂದು ಕಡೆ ಗ್ರಾಮೀಣ ಅಭಿವೃದ್ಧಿ ಎಂದು ಹೇಳುತ್ತಾ ಹಣವನ್ನು ಖರ್ಚು ಮಾಡುತ್ತಿದ್ದೀರಿ ಇನ್ನೊಂದು ಕಡೆ ಗ್ರಾಮಗಳನ್ನು ಈ ರೀತಿ ಹಾಳು ಮಾಡುತ್ತಿದ್ದೀರಿ, ಇನ್ನು ಮುಂದಾದರು ಈ ರೀತಿ ಅನ್ಯಾಯಗಳು ಗ್ರಾಮಗಳಿಗೆ ಆಗದಂತೆ ಕ್ರಮ ತೆಗೆದುಕೊಳ್ಳಬೇಕು.........

ಅಧ್ಯಕ್ಷರು.—ಸ್ವಾಮಿ, ಈ ಸದನದ ಮುಂದಿರತಕ್ಕ ೫೬, ೫೭, ೫೮ ಹಾಗೂ ೫೯ನೇ ಡಿಮ್ಯಾಂಡ್ ಗಳನ್ನು ಚೆನ್ನಾಗಿ ಓದಿಕೊಳ್ಳಿ. ಇದರಲ್ಲಿ ರೂರಲ್ ವಾಟರ್ ಸಪ್ಲೈ ಇದೆ, ಇಂಟಿಗ್ರೇಟ್ ರೂರಲ್ ಡೆವಲಪ್‌ಮೆಂಟ್ ಇದೆ. ಇದರ ಮೇಲೆ ತಾವು ಮಾತನಾಡಿ. ಇವತ್ತಿನ ಅಜೆಂಡಾ ಪಟ್ಟಿ ತಮ್ಮ ಹತ್ತಿರ ಇಲ್ಲವೆ ತಾವು ಸಮಗ್ರವಾಗಿ ಮಾತನಾಡಬೇಕು ಇನ್ನೊಂದು ಸಾರಿ ಮಾತನಾಡಿ.

ಶ್ರೀ ಪಂಪಾಪತಿ.— ಈ ರೀತಿ ರೈತರಿಗೆ ಆಗುತ್ತಿರುವ ಅನ್ಯಾಯಗಳನ್ನು ತಡೆಯಬೇಕು.

ಶ್ರೀ ವೈ. ರಾಮಕೃಷ್ಣ.— ಬಿತ್ತನೆ ಬೀಜಗಳನ್ನು ಕೊಡುವವರು ಗ್ರಾಮ ಸೇವಕರು.

(ಗೊಂದಲ)

ಶ್ರೀ ಅಬ್ದುಲ್ ನಜೀರ್‌ಸಾಬ್.— ಬೀಜ ಹಂಚುವುದು ವ್ಯವಸಾಯ ಇಲಾಖೆಗೆ ಸೇರುತ್ತದೆ. ತಾವು ವ್ಯವಸಾಯ ಖಾತೆ ಸಚಿವರಾಗಿದ್ದಾಗಲೇ ಇದು ವ್ಯವಸಾಯ ಇಲಾಖೆಗೆ ಸೇರಿದೆ.

(ಗೊಂದಲ)

ಶ್ರೀ ಪಂಪಾವತಿ.— ಸ್ವಾಮಿ, ಗ್ರಾಮಗಳು ಅಭಿವೃದ್ಧಿ ಆಗಬೇಕಾದರೆ ರಸ್ತೆಗಳು ಆಗಬೇಕು. ಅದು ನನಗೆ ಗೊತ್ತಿದೆ. ದಾವಣಗೆರೆ ಒಂದು ದೊಡ್ಡ ನಗರ. ಅದರಸುತ್ತಮುತ್ತ ಹಳ್ಳಿಗಳಿವೆ. ಅಲ್ಲಿ ತರಕಾರಿ, ಹಾಲು, ಮೊಸರು, ಮುಂತಾದುವನ್ನು ತಂದು ಪಟ್ಟಣದಲ್ಲಿ ಮಾರಾಟ ಮಾಡುತ್ತಾರೆ. ಆಗ ಗ್ರಾಮಗಳ ಅಭಿವೃದ್ಧಿಯಾಗುತ್ತದೆ. ಇದಾಗಬೇಕಾದರೆ ರಸ್ತೆಗಳ ಅವಶ್ಯಕತೆ ತುಂಬಾ ಇದೆ. ಟೊಮ್ಯಾಟೋ ಮುಂತಾದ್ದನ್ನು ಗಾಡಿಯಲ್ಲಿ ಇಟ್ಟುಕೊಂಡು ತಂದರೆ ಎಲ್ಲಾ ಒಡೆದು ಹೋಗುತ್ತದೆ. ಸೈಕಲ್ ಮೇಲೆ ಹಾಲು ತರುವುದಕ್ಕಾಗುವುದಿಲ್ಲ. ಅಂದರೆ ರಸ್ತೆಗಳು ಉತ್ತಮ ಸ್ಥಿತಿಯಲ್ಲಿಲ್ಲ. ಸ್ವಾಮಿ ಗ್ರಾಮಗಳು ಅಭಿವೃದ್ಧಿ ಆಗಬೇಕಾದರೆ ಶಾಲೆಗಳು ಹೆಚ್ಚು ಹೆಚ್ಚು ಇರಬೇಕು. ಇವತ್ತು ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡಲು ತಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಜನರು ವಿದ್ಯಾವಂತರಾದರೆ ವಿಚಾರಗಳನ್ನು ತಿಳಿದುಕೊಂಡು ತಮ್ಮ ತಮ್ಮ ಗ್ರಾಮಗಳನ್ನು ಅಭಿವೃದ್ಧಿ ಮಾಡಲು ಪ್ರಯತ್ನ ಮಾಡುತ್ತಾರೆ. ಇವತ್ತು ಅಂಥ ವ್ಯವಸ್ಥೆ ನಿಮ್ಮಲ್ಲಿಲ್ಲ.

ಇನ್ನು ಕೊಳವೆ ಬಾವಿಗಳ ವಿಚಾರದಲ್ಲಿ ಹೇಳುವುದಾದರೆ, ನಾನು ಹಳ್ಳಿಯಲ್ಲಿ ವಾಸ ಇಲ್ಲದಿರುವುದರಿಂದ ಹಳ್ಳಿಗಳ ವಿಚಾರ ನನಗೆ ಅಷ್ಟಾಗಿ ಗೊತ್ತಿಲ್ಲ. ಆದರೆ ಇಂದಿನ ಸರ್ಕಾರದವರು ಹಳ್ಳಿಗಳಲ್ಲಿ ಉತ್ತಮ ನೀರಿನ ಸೌಕರ್ಯವನ್ನು ಮಾಡಿರುವುದರಿಂದ ಇದರ ಬಗ್ಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಗ್ರಾಮಗಳಲ್ಲಿ ಜನರಿಗೆ ಕೇವಲ ನೀರನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಜನರು ಸರಿಯಾದ ಜೀವನ ಮಾಡಬೇಕಾದರೆ ಅಲ್ಲಿನ ಪರಿಸರ ಚೆನ್ನಾಗಿರಬೇಕುವಿದ್ಯಾಭ್ಯಾಸಕ್ಕೆ ಅನುಕೂಲವಿರಬೇಕೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ಅಂತ್ಯೋದಯದ ಬಗ್ಗೆ ಈಗಾಗಲೇ ನಾನು ಹೇಳಿರುವುದರಿಂದ ಮತ್ತೆ ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಭೂ ಅಭಿವೃದ್ಧಿ ಬ್ಯಾಂಕ್‌ನ ವಿಚಾರದಲ್ಲಿ ಹೇಳುವುದಾದರೆ ಬ್ಯಾಂಕ್‌ನವರು ನಿಮಗೆ ಸಾಲವನ್ನು ಕೊಡುತ್ತಾರೆಂದು ಸರ್ಕಾರದವರು ಹೇಳುತ್ತಾರೆ. ಬ್ಯಾಂಕ್‌ನವರನ್ನು ಕೇಳಿದರೆ, ನಿನಗೆ ಜಮೀನು ಇಲ್ಲ. ಮನೆ ಇಲ್ಲ, ಜಾಮೀನು ಕೊಡುವವರಿಲ್ಲ ಆದ್ದರಿಂದ ನಿಮಗೆ ಸಾಲ ಕೊಡುವುದಿಲ್ಲವೆಂದು ರೈತರನ್ನು ಸುಮ್ಮನೆ ತಿರುಗಾಡಿಸುತ್ತಾರೆ. ಇದನ್ನು ಸರ್ಕಾರ ಪರಿಶೀಲಿಸಿ ಸರಳವಾದ ರೀತಿಯಲ್ಲಿ ರೈತರಿಗೆ ಸಾಲ ಸಿಕ್ಕುವಂತೆ ಮಾಡಬೇಕು, ಸ್ವಾಮಿ, ರೈತರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ರೈತರ ಮನೆಯ ಬಾಗಿಲಿಗೆ ತಲುಪಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಎಷ್ಟು ಜನರಿಗೆ ಇದುವರೆಗೆ ಈ ರೀತಿ ಸೌಲಭ್ಯವನ್ನು ತಲುಪಿಸಿದ್ದೀರಿ ? ಎಂಬುದನ್ನು ಹೇಳುತ್ತೀರಾ ಸ್ವಾಮಿ ?

ತಾಲ್ಲೂಕ್ ಪಂಚಾಯಿತಿಗಳ ಮತ್ತು ಗ್ರಾಮ ಪಂಚಾಯಿತಿಗಳ ಬಡ್ಜೆಟ್‌ನಲ್ಲಿ ಶೇಕಡಾ ೧೮ರಷ್ಟು ಹಣವನ್ನು ಹರಿಜನರ ಕಲ್ಯಾಣಕ್ಕಾಗಿ ಮೀಸಲಾಗಿಟ್ಟಿದ್ದೀರಿ. ೧೯೮೨-೮೩ರಲ್ಲಿ ಮನೆಗಳನ್ನು ಕಟ್ಟಿಗೊಳ್ಳಲಿಕ್ಕಾಗಿ ಮೀಸಲಾಗಿ ಇಟ್ಟಿದ್ದು ೩೪೩ ಲಕ್ಷ ರೂಪಾಯಿಗಳು. ಇದರ ಪೈಕಿ ೧೯೮೩ ಮಾರ್ಚ್ ಕೊನೆಯ ವೇಳೆಗೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ೧೭೮.೫ ಲಕ್ಷ ರೂಪಾಯಿಗಳನ್ನು ಉಪಯೋಗಿಸಲಾಗಿದೆ. ಸ್ವಾಮಿ, ಹರಿಜನರ ಬಗ್ಗೆ ಮಾತನಾಡತಕ್ಕಂಥ ಜನ ಅವರ ಅಭಿವೃದ್ಧಿಯನ್ನು ಬಯಸತಕ್ಕಂಥ ಜನ ೩೪೩ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ ಅದರಲ್ಲಿ ಖರ್ಚು ಮಾಡಿರುವುದು ೧೭೮ ಲಕ್ಷ, ಇನ್ನು ಉಳಿದದ್ದು ೧೬೫ ಲಕ್ಷ ಅದನ್ನು ಹರಿಜನರಿಗೆ ಖರ್ಚುಮಾಡಲಿಕ್ಕೆ ಶಕ್ತಿ ಇರಲಿಲ್ಲವೇ ? ಹರಿಜನರು ಸಿಕ್ಕಲಿಲ್ಲವೇ ? ಅಥವಾ ಹರಿಜನರಿಗಾಗಿ ಖರ್ಚು ಮಾಡುವುದಕ್ಕೆ ನಿಮಗೆ ಮನಸ್ಸು ಇರಲಿಲ್ಲವೇ ಎಂದು ಪ್ರಶ್ನೆ ಮಾಡುತ್ತೇನೆ. ತಾವು ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ೧೬೫ ಲಕ್ಷ ರೂಪಾಯಿಗಳನ್ನು ಉಳಿಸಿದ್ದೀರಿ ಈ ರೀತಿ ಉಳಿಸಿರತಕ್ಕದ್ದು ಹಿಂದಿನತ್ತಿವರ್ಷದಲ್ಲಾಗಲಿ ಅಥವಾ ಯಾವವರ್ಷದಲ್ಲಾಗಲಿ ಅದು ಈಗ ನಿಮ್ಮ ಕಡೆ ಇದೆ. ಆದ್ದರಿಂದ ನಮಗೆ ಹೇಳುತ್ತಿದ್ದೇನೆ, ಯಾವುದೇ ಸರ್ಕಾರವಾದರೂ ಕೂಡ ಅದು ಮಾಡಿರತಕ್ಕದ್ದು ತಪ್ಪು. ೧೬೫ ಲಕ್ಷ ರೂಪಾಯಿ ಖರ್ಚುಮಾಡದಿದ್ದರೆ ಅವರಿಗೆ ಬರೀ

ಬಾಯಿ ಮಾತು ಹೇಳಿದಂತಾಗುತ್ತದೆ. ಆದ್ದರಿಂದ ಅವರಿಗಾಗಿ ಒದಗಿಸತಕ್ಕಂಥ ಹಣವನ್ನು ಪೂರ್ತಿಯಾಗಿ ಖರ್ಚುಮಾಡಿ ಎಂದು ಕೇಳಿಕೊಳ್ಳುತ್ತೇನೆ. ಒಂದು ಕೋಟಿ ೬೫ ಲಕ್ಷ ರೂಪಾಯಿಗಳನ್ನು ಈ ರೀತಿ ಖರ್ಚು ಮಾಡದೆ ಉಳಿಸಿರತಕ್ಕಂಥದ್ದು ತೀರ ವಿಷಾದಕರ.

ಇನ್ನೊಂದು ಸಲಹೆ ಏನೆಂದರೆ ಎಲ್ಲ ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ಗ್ರಾಮಾಂತರಗಳಲ್ಲಿರತಕ್ಕಂಥ ಜನರಿಗೆ ಉದ್ಯೋಗ ಒದಗಿಸಬೇಕು. ಅವರಿಗೆ ಹೆಚ್ಚಿನ ಸಹಾಯ ಮಾಡಿ, ಅವರು ಹಿಂದುಳಿದಿದ್ದರೆ ಅವರನ್ನು ಮುಂದಕ್ಕೆ ತರಲು ಉದ್ಯೋಗವನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಅವರ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಈವತ್ತಿನ ಪರಿಸ್ಥಿತಿಯಲ್ಲಿ ಉದ್ಯೋಗ ವಿದ್ಯಾಭ್ಯಾಸ ಇವೆರಡೂ ಇದ್ದರೆ ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾಗುತ್ತದೆಂದು ಗ್ರಾಮ ಪಂಚಾಯಿತಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಗರ ವಾಸಿಗಳಿಗೆ ರೇಷನಿಂಗ್ ಕಾರ್ಡುಗಳನ್ನು ಕೊಟ್ಟು ಆಹಾರ ಧಾನ್ಯಗಳನ್ನು ಒದಗಿಸಿಕೊಡತಕ್ಕಂಥ ಒಂದು ವ್ಯವಸ್ಥೆ ಇರುತ್ತದೆ. ಅದೇ ರೀತಿ ಗ್ರಾಮಾಂತರ ಪ್ರದೇಶಗಳಿಗೂ ಈ ವ್ಯವಸ್ಥೆಯಾಗಬೇಕು. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮೂರು ತಿಂಗಳಿಗೋ ನಾಲ್ಕು ತಿಂಗಳಿಗೋ ಮಳೆ ಬಂದರೆ ಮಾತ್ರ ಕೆಲಸ ಸಿಗುತ್ತದೆ. ಬೇರೆ ಕಾಲದಲ್ಲಿ ಅವರಿಗೆ ಕೆಲಸಗಳೇ ಇರುವುದಿಲ್ಲ. ಜೀವನ ಮಾಡುವುದಕ್ಕೆ ಬಹಳ ಕಷ್ಟ. ಇಂಥ ಸಂದರ್ಭದಲ್ಲಿ ಅವರಿಗೆ ಏನಾದೂ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತಂದು ಕಡಿಮೆ ಬೆಲೆಯಲ್ಲಿ ದವಸ ಧಾನ್ಯಗಳನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್‌ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಯೋಜನೆಯ ಬಗ್ಗೆ ಮಾನ್ಯ ನಜೀರ್‌ಸಾಬ್‌ರವರು ನಮ್ಮ ಮಂತ್ರಿಗಳಾಗಿ ಬೇಡಿಕೆಯನ್ನು ಇಟ್ಟಿದ್ದಾರೆ. ಹಲವಾರು ಶಾಸಕ ಮಿತ್ರರು ಪರವಾಗಿಯೂ ಮತ್ತು ವಿರೋಧವಾಗಿಯೂ ಈ ಬೇಡಿಕೆಯ ಬಗ್ಗೆ ಮಾತನಾಡಿದ್ದಾರೆ. ಪರವಾಗಿ ಮಾತನಾಡಿರತಕ್ಕಂಥವರನ್ನು ನೋಡಿದಾಗ ಅವರಿಗೆ ಹೆಚ್ಚಿನ ಅನುಕೂಲತೆಗಳು ದೊರತಿರಬೇಕೆಂದು ನಾನಾದರೂ ಭಾವಿಸುತ್ತೇನೆ. ಆ ಕಡೆ ಮಾತನಾಡಿದ ಸದಸ್ಯರಿಗೆ ಬಹಳ ತೊಂದರೆಯಾಗಿರಬಹುದೆಂದು ಭಾವಿಸುತ್ತೇನೆ. ಏತಕ್ಕೆಂದರೆ ನಾನೂ ಒಬ್ಬ ತೊಂದರೆಯಲ್ಲಿ ಇರತಕ್ಕಂಥವನಾಗಿದ್ದೇನೆ. ಇದನ್ನು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆಯೋ ಏನೋ ಗೊತ್ತಿಲ್ಲ. ನೀರಿನ ಹಂಚಿಕೆ, ನೀರಿನ ಕೊಳವೆಬಾವಿಗಳನ್ನು ಕೊಡುವ ಒಂದು ಕಾರ್ಯಕ್ರಮದಲ್ಲಿ ಸರ್ಕಾರ ಮತ್ತು ಅಧಿಕಾರಿಗಳು ತಪ್ಪುಮಾಡಿರುವುದರಿಂದ ಎಲ್ಲಿ ನೀರು ಬೇಕು ಅಲ್ಲಿಗೆ ಕೊಟ್ಟಿಲ್ಲ, ಎಲ್ಲಿ ನೀರು ಬೇಡವಾಗಿರುತ್ತದೆ ಅಲ್ಲಿಗೆ ಕೊಟ್ಟಿದ್ದಾರೆ. ಕೊಳವೆ ಬಾವಿಗಳನ್ನು ಹಾಕಿದ್ದಾರೆ. ಕೆಲವು ಕಡೆ ಒಂದು ಮನೆಗಳಿರುವಂಥ ಕಡೆ ಎರಡು ಬಾವಿಗಳು ಇದ್ದರೂ ಮೂರನೆಯ ಬಾವಿಯನ್ನು ಕೊಟ್ಟಿರುತ್ತಾರೆ. ಎಲ್ಲಿ ಹತ್ತಿರ ಹತ್ತಿರ ಮನೆಗಳು ಇವೆ ಅಲ್ಲಿ ಬಾವಿಗಳನ್ನು ಕೊಟ್ಟಿಲ್ಲ. ಅನೇಕ ಸಾರಿ ಅಧಿಕಾರಿಗಳನ್ನೂ ಕೂಡ ತರಾಟೆಗೆ ತೆಗೆದುಕೊಂಡಿರತಕ್ಕಂಥ ಸಂದರ್ಭಗಳು ಇರುತ್ತವೆ. ಅವರು ಹೇಳತಕ್ಕಂಥದ್ದು ಏನು ಎಂದರೆ ಕೆಲವು ಮಂತ್ರಿಗಳ ಹೆಸರುಗಳನ್ನು ಹೇಳುತ್ತಾರೆ. ಅವರು ಎಲ್ಲಿ ಹಾಕಬೇಕೆಂದು ಹೇಳುತ್ತಾರೋ ಅಲ್ಲಿ ಹಾಕುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ''ಇದು ಅಹುದಾದರೆ ಅಹುದೆನ್ನಿ, ಇಲ್ಲವಾದರೆ ಇಲ್ಲವೆನ್ನಿ'' ಇಂಥ ೧೦ ಬಾವಿಗಳನ್ನಾದರೂ ರುಜುವಾತು ಕೊಡುತ್ತೇನೆ. ತೀರ ಶ್ರೀಮಂತರು ನಾಲ್ಕು ಬಾವಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆಸಲು ಸಾಧ್ಯವಿರುವಂಥವರು ಅವರ ಮನೆಯ ಮುಂಭಾಗದಲ್ಲಿ ತೆಗೆಸಿಕೊಂಡಿರುತ್ತಾರೆ. ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟವರಿಗೆ ತಿಳುವಳಿಕೆ ಕೊಟ್ಟಿದ್ದರೂ ಕೂಡ ಅವರು ಏನೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಬಹುಶಃ ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಈ ಒಂದು ಪರಿಸ್ಥಿತಿ ನಡೆದಿದೆ. ಕೊಳವೆ ಬಾವಿಗಳನ್ನು ತೆಗೆಯುವರು ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ಪ್ರಕಾರ ಕೊಳವೆ ಬಾವಿಗಳನ್ನು ತೆಗೆಯುವಾಗ ಅನೇಕ ಬಾವಿಗಳು ಫೆಯಿಲ್ಯೂರ್ ಆಗಿವೆ ಎಂಬುದು ಬಂದಿದೆ. ಸ್ವಂತ ಖರ್ಚಿನಲ್ಲಿ ತೆಗೆದಿರತಕ್ಕಂಥ ಬಾವಿಗಳು ಸಾಕಷ್ಟು ಫಲಕಾರಿಯಾಗಿರುತ್ತದೆ. ಅದೇ ಸರ್ಕಾರದವರು ತೆಗೆಸಿರತಕ್ಕಂಥ ಬಾವಿಗಳಲ್ಲಿ ನೀರು ಬೀಳದಿರಲು ಕಾರಣವೇನೆಂಬುದಕ್ಕೆ ರುಜುವಾತು ಕೊಡಬೇಕು. ಇದು ಅಲ್ಲದೆ ೧೦ ಬಾವಿಗಳನ್ನು ತೋಡಿದ್ದರೆ ೫೦

ಬಾವಿಗಳನ್ನು ತೋಡಿರುವ ಲೆಕ್ಕವನ್ನು ಕೊಟ್ಟಿರುತ್ತಾರೆ. ೧೦೦ ಬಾವಿಗಳನ್ನು ತೋಡಿದ್ದರೆ ೧೫೦ ಭಾವಿಗಳ ಲೆಕ್ಕವನ್ನು ಕೊಟ್ಟಿರುವುದು ಉಂಟು, ಕೊನೆಗೆ ಪೂರ್ಣ ಪ್ರಮಾಣದಲ್ಲಿ ಕೊಳವೆಗಳನ್ನು ಜೋಡಿಸತಕ್ಕಂಥ ಕೆಲಸ ಮಾಡಿಲ್ಲ. ಕೆಲವು ಕಡೆ ಪಂಪುಗಳನ್ನು ಅಳವಡಿಸಿದ್ದರೂ ಅವುಗಳು ಕೆಟ್ಟು ರಿಪೇರಿಗೆ ಬಂದಾಗ ಅದರಲ್ಲಿರುವ ಪೈಪನ್ನು ಕೂಡ ವಾಪಸ್ ತೆಗೆದುಕೊಂಡು ಹೋಗಿರತಕ್ಕಂಥದ್ದು ಕೂಡ ಉಂಟು. ಇದನ್ನು ಯಾರು ಕೇಳಬೇಕು. ಯಾರಿಗೆ ಹೇಳಬೇಕು ಎನ್ನುವುದು ಒಂದೂ ಗೊತ್ತಿಲ್ಲ. ನಮ್ಮ ಶಿವಮೊಗ್ಗ ನಗರ ಇದೆ. ಅಲ್ಲಿಂದ ಇಬ್ಬರೂ ಮಂತ್ರಿಗಳಾಗಿದ್ದಾರೆ. ನಗರದ ಪಕ್ಕದಲ್ಲಿ ಒಂದು ಕಿಲೋ ಮೀಟರ್ ದೂರದಲ್ಲಿ ನವಿಲೇ ಎಂದು ಒಂದು ಹಳ್ಳ ಇದೆ. ಶಿವಮೊಗ್ಗ ಸುತ್ತಲೂ ಇರತಕ್ಕಂಥ ಜನರು, ದನಗಳು ಅಲ್ಲೇ ನೀರು ಕುಡಿಯುತ್ತಾರೆ. ಈ ನಾಲೆ ಚಾನಲ್ ನೀರು ಬಿಡುತ್ತಾರೆ. ಇದು ಎಲ್ಲಿಂದ ಬರುತ್ತದೆಂದರೆ ತುಂಗಾ ನದಿಯಿಂದ ಹರಿದು ಶಿವಮೊಗ್ಗ ನಗರಕ್ಕೆ ಬಳಸಿಕೊಂಡು ಬರುತ್ತದೆ. ಈ ಚಾನಲ್‌ಗೆ ಶಿವಮೊಗ್ಗ ಚರಂಡಿ ನೀರೆಲ್ಲ ಹೋಗುತ್ತದೆ. ಮತ್ತೆ ಶಿವಮೊಗ್ಗದಲ್ಲಿ ಹಾಕುವ ಕಸಕಡ್ಡಿ ಎಲ್ಲ ಅದಕ್ಕೆ ಹಾಕುತ್ತಾರೆ. ದನ ಎಮ್ಮೆ ಯಾವುದು ಸತ್ತಿದ್ದರೂ ಕೊನೆಗೆ ಮನುಷ್ಯ ಸತ್ತಿದ್ದರೂ ಕೂಡ ಅದನ್ನೆಲ್ಲ ಅದಕ್ಕೆ ಹಾಕುತ್ತಾರೆ. ನವಿಲೇಯಲ್ಲಿ ಹಾಲು ಮಾರುತ್ತಾರೆ. ಆ ಸಂತೆಯಲ್ಲಿ ಮಾರಾಟಕ್ಕಾಗಿ ಬರತಕ್ಕಂಥ ದನ ಎಮ್ಮೆ ಇವುಗಳ ಮೈಯನ್ನು ತೊಳೆದು ನೀರು ಕುಡಿಸುವುದು ಅಲ್ಲಿಯೇ. ಇಷ್ಟೇ ಅಲ್ಲದೆ ಶಿವಮೊಗ್ಗ ನಗರದಲ್ಲಿ ಹೊಸದಾಗಿ ಮಾಡಿದ Septic Tank ಕಕಸ್ಸಿನ ನೀರನ್ನು ಈ ಮೇಲ್ಕಂಡ ಚಾನಲ್ಲಿಗೆ ಬಿಡುತ್ತಾರೆ. ಅದೇ ಜಾಗದಲ್ಲಿನ ನೀರನ್ನು ಹಾಲಿಗೆ ಸೇರಿಸಿ ಶಿವಮೊಗ್ಗ ನಗರದಲ್ಲಿ ಮಾರುತ್ತಾರೆ. ಆ ಪ್ರದೇಶಕ್ಕೆ ಹೋಗಿದ್ದಂಥ ಎಲ್ಲ ಮಂತ್ರಿಗಳು ಶಾಸಕರು ಪ್ರಯಾಣಿಕರೆಲ್ಲರೂ ಕೂಡ ಅದೇ ನೀರನ್ನು ಕುಡಿದಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ,

೪-೦೦ ಪಿ. ಎಂ.

ಇದನ್ನು ನಾನು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಸಾಕಷ್ಟು ಬಾವಿಗಳನ್ನು ಕೊಡಲಿಲ್ಲ. ಏತಕ್ಕೆ ಕೊಡಲಿಲ್ಲ ಎಂದು ಗೊತ್ತಿಲ್ಲ. ನಾನು ಹಲವಾರು ಸಲ ಅರ್ಜಿಗಳನ್ನು ಕೊಟ್ಟಿದ್ದೇನೆ ಮತ್ತು ಡಿ.ಸಿ.ಸಿ. ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದರೂ ಸರ್ಕಾರ ಗಮನ ಕೊಡಲಿಲ್ಲ. ಇದಕ್ಕೆ ಯಾರು ಹೊಣೆ ? ಅಲ್ಲಿ ಹರಿಯುವ ನೀರನ್ನು ತಾವು ನೋಡಿದರೆ ತಾವು ಊಟ ಕೂಡ ಮಾಡುವುದಿಲ್ಲ. ಇಂತಹ ಸ್ಥಿತಿ ಇರುವಾಗ ಆ ಜನರು ಅದೇ ನೀರನ್ನು ಕುಡಿದರೆ ಮತ್ತು ಹಾಲನ್ನು ಕುಡಿದರೆ ಅವರ ಗತಿ ಏನಾಗಬೇಕು ? ಅದೇ ಬಾವಿಗಳನ್ನು ತೆಗೆದ ಕಂಪನಿಗಳವರಿಗೆ ಕೂಡಲೇ ಸರ್ಕಾರದ ಮಟ್ಟದಲ್ಲಿ ಹಣದ ಪಾವತಿಯಾಗುತ್ತದೆ. ಆದರೆ ಈ ಜನರ ಕಷ್ಟವನ್ನು ನೋಡುವವರಿಲ್ಲ. ಮಾನ್ಯ ಮಂತ್ರಿಗಳೇನೋ ಒಂದು ಸಾವಿರ ರಿಗ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ, ಎಲ್ಲ ಕಡೆ ಬಾವಿಗಳನ್ನು ತೋಡಿಸಿದ್ದೇವೆಂದು ಹೇಳಿ ಸಮಾಧಾನದಿಂದ ಕೂತರೆ ಏನೂ ಆಗುವುದಿಲ್ಲ. ಎಲ್ಲ ಕಡೆ ಸರಿಯಾಗಿ ಕೆಲಸ ಆಗಿದೆಯೇ ಎಂದು ತನಿಖೆ ಮಾಡಬೇಕು. ಸರಿಯಾಗಿ ಕೆಲಸ ನಡೆಯುವಂತೆ ಬಂದೋಬಸ್ತು ಮಾಡಬೇಕು. ಹಲವಾರು ಮಂತ್ರಿಗಳು ನಮ್ಮ ಭಾಗಕ್ಕೆ ಬಂದು ಹೋದರು. ಆ ಸಂದರ್ಭದಲ್ಲಿ ನಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳೋಣ ವೆಂದರೆ ಯಾವ ಮಂತ್ರಿಗಳೂ ನನ್ನನ್ನು ಕರೆಯಲಿಲ್ಲ. ಟೂರ್-ಪ್ರೋಗ್ರಾಮ್ ಕಳುಹಿಸಿಕೊಡುತ್ತಾರೆ. ಆದರೆ ಮಂತ್ರಿಗಳು ಅಲ್ಲಿ ಬಂದಾಗ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿದರೆ ನಾವು ಆ ಸಭೆಗೆ ಹೋಗು ವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮಲ್ಲಿಗೆ ಬಂದಾಗ ಅವರಲ್ಲಿ ಹೇಳಿಕೊಳ್ಳುವಂತಹ ಹಲವಾರು ಸಮಸ್ಯೆಗಳಿದ್ದವು. ವರಾಹಿ, ಚಕ್ರಾ ಯೋಜನೆಗಳಿಂದ ಮುಳುಗಡೆಯಾಗತಕ್ಕಂಥ ಪ್ರದೇಶ ಗಳ ಸಮಸ್ಯೆ, ಬಾವಿಗಳ ಸಮಸ್ಯೆ, ರಸ್ತೆಗಳ ಸಮಸ್ಯೆ, ಹೀಗೆ ಹಲವಾರು ಸಮಸ್ಯೆಗಳನ್ನು ಅವರ ಗಮನಕ್ಕೆ ತರಬೇಕಾಗಿತ್ತು. ಇದಕ್ಕಾಗಿ ನಾನು ಅವರು ಪ್ರವಾಸ ಹೋಗುವ ದಾರಿಯಲ್ಲಿ ಇದ್ದು ಅವರ ಕಿವಿಗೆ ಹಾಕೋಣವೆಂದಿದ್ದೆ. ಆದರೆ ಅವರು ಅಲ್ಲಿಗೆ ಬಂದಾಗ ನಮ್ಮ ಸಲಹೆ ಕೇಳದೆ ಅಧಿಕಾರಿಗಳ ಸಲಹೆ ಕೇಳಿದ್ದಾರೆ. ಅಧಿಕಾರಿಗಳು ದೇಶವೆಲ್ಲಾ ಸುಭಿಕ್ಷವಾಗಿದೆ ಎಂದು ಹೇಳಿದ್ದಾರೆ. ಹಾಗಿದ್ದರೆ ಸಂತೋಷ ವೆಂದು ಮುಖ್ಯ ಮಂತ್ರಿಗಳು ಹೇಳಿದರು. ನಂತರ ಈ ಬಗ್ಗೆ ನಾನು ಒಂದು ಪತ್ರಿಕಾ ಹೇಳಿಕೆಯನ್ನು ಸಹ ಕೊಟ್ಟಿದ್ದೇನೆ. ಮುಖ್ಯವಾಗಿ ಗ್ರಾಮಾಭಿವೃದ್ಧಿ ಕಾರ್ಯಕ್ರಮವನ್ನು ಕೇವಲ ಕಾಗದದ ಮೇಲೆ ತೋರಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಅದು ಕಾರ್ಯತಃ ನೆರವೇರಬೇಕು. ಇವೊತ್ತಿನ ದಿವಸ ಬಡಪರಿಗೆ ಎತ್ತು, ಹಸು, ಕುರಿ ಮುಂತಾದವು ಏನಾದರೂ ಮಂಜೂರಾದರೆ ಸಂಬಂಧಪಟ್ಟವರು ಅವುಗಳನ್ನು ಪಡೆಯಲು ಸಂತೆಗೆ ಹೋಗಬೇಕು. ಸಂತೆ ಕೂಡ ಹತ್ತಿರದಲ್ಲಿ ನಡೆಯುವುದಿಲ್ಲ, ನೂರು

ಇಲ್ಲವೇ ನೂರೈವತ್ತು ಮೈಲಿ ದೂರದಲ್ಲಿ ನಡೆಯುತ್ತದೆ. ಅಲ್ಲಿಗೆ ಪಶು ವೈದ್ಯರನ್ನು, ಬಿ.ಡಿ.ಓ. ಅವರನ್ನು ಮತ್ತು ಬ್ಯಾಂಕ್ ಮೇನೇಜರ್ ಅವರನ್ನು ಕಾರಿನಲ್ಲಿ ಕರೆದುಕೊಂಡು ಹೋಗಬೇಕು. ಇಷ್ಟೆಲ್ಲಾ ಕಷ್ಟವಾಗಿದೆ. ಇದರ ಜೊತೆಗೆ ಬ್ಯಾಂಕ್‌ನವರು ಕೇಳಿದವರಿಗೆಲ್ಲಾ ಸಾಲ ಕೊಡುವುದಿಲ್ಲ. ಮಂತ್ರಿಗಳು ಇಲ್ಲವೇ ಎಂ.ಎಲ್.ಎ.ಗಳು ಹೇಳಿದರೂ ಸಹ ಕೊಡುವುದಿಲ್ಲವೆಂದು ಉದ್ಧಟತನವನ್ನು ಬ್ಯಾಂಕ್‌ಗಳ ಮೇನೇಜರ್ ಅವರು ತೋರಿಸುತ್ತಾರೆ. ಅದೇ ಅವರ ಸಂಬಂಧಿಕರು ಏನಾದರೂ ಹೇಳಿದರೆ ಇಲ್ಲವೇ ಅವರನ್ನು ರಾತ್ರಿ ಕಾಲದಲ್ಲಿ ಭೇಟಿಯಾಗುವಂತಹ ಸ್ನೇಹಿತರು ಏನಾದರು ಹೇಳಿದರೆ ಸಾಲ ಕೊಡುತ್ತಾರೆಯೇ ಹೊರತು ಬೇರೆಯವರಿಗೆ ಕೊಡುವುದಿಲ್ಲ. ಇದನ್ನೆಲ್ಲಾ ಯಾರು ಹತೋಟಿಗೆ ತರಬೇಕು ? ನಾನು ಇದನ್ನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಆದರೂ ಕ್ರಮ ತೆಗೆದುಕೊಂಡಿಲ್ಲ. ಇಷ್ಟೆಲ್ಲಾ ನಡೆಯುತ್ತಿದ್ದರೂ ನಮ್ಮ ಸ್ನೇಹಿತರು ಕೆಲವರು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹಳ್ಳಿಯ ಜನತೆಗೆ ಎಲ್ಲ ಅನುಕೂಲವಾಗಿದೆ ಎಂದು ಹೇಳಿದರು. ಇವರು ಬೇಕಾದರೆ ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. ನಮ್ಮ ಹೊಸನಗರ ತಾಲ್ಲೂಕಿನ ಕೆಲವು ಭಾಗಗಳು ಮುಳುಗಡೆಯಾಗುತ್ತಿವೆ. ಇದು ಗ್ರಾಮಾಭಿವೃದ್ಧಿಯೂ ಹೌದು ಮತ್ತು ಸಮಗ್ರ ಅಭಿವೃದ್ಧಿಯೂ ಹೌದು ; ಆದರೆ ಮುಳುಗಡೆ ಪ್ರದೇಶದ ಜನರಿಗೆ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಡಬೇಕಾಗುತ್ತವೆ. ಇಂತಹ ಜನರ ಕಷ್ಟವನ್ನು ಸರ್ಕಾರದ ಮತ್ತು ಮಂತ್ರಿಗಳ ಗಮನಕ್ಕೆ ತರೋಣವೆಂದರೆ ನಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ಇವರು ಪ್ರವಾಸ ಬಂದಾಗ ನಮಗೆ ತಿಳಿಯುವುದೇ ಇಲ್ಲ ; ಆದರೆ ಇವರ ಪಾರ್ಟಿಯವರಿಗೆ ಮಾತ್ರ ಗೊತ್ತಾಗುತ್ತದೆ. ನಮ್ಮ ಡಿ.ಸಿ.ಸಿ. ಮೀಟಿಂಗ್‌ನಲ್ಲಿ ಕೆಲವು ಕೆಲಸಗಳು ಮಂಜೂರಾಗುತ್ತವೆ. ಆದರೆ ಬರುಬರುತ್ತಾ ಅವು ಬದಲಾವಣೆಯಾಗುತ್ತವೆ. ಇದಕ್ಕೆ ಕಾರಣ ಗೊತ್ತಿಲ್ಲ. ೫೦ ರೂಪಾಯಿ ಬೆಲೆ ಬಾಳುವ ನೇಗಿಲುಗಳನ್ನು ಕೊಟ್ಟರೆ ನೂರೈವತ್ತು ರೂಪಾಯಿಗಳೆಂದು ಪುಸ್ತಕದಲ್ಲಿ ಬೆಲೆ ಬರೆದಿರುತ್ತಾರೆ. ಬಡವರು ಸ್ವತಂತ್ರವಾಗಿ ಬಾಳಲಿ ಎಂದು ಎತ್ತುಗಳನ್ನು ಕೊಡುತ್ತಾರೆ. ಆದರೆ ನೇಗಿಲು ಮತ್ತು ಎತ್ತುಗಳನ್ನು ಮತ್ತೆ ಅವರಿಂದ ಶ್ರೀಮಂತರು ತೆಗೆದುಕೊಂಡು ಬಿಡುತ್ತಾರೆ. ಇದನ್ನು ತಪ್ಪಿಸುವಂತಹ ಕ್ರಮವನ್ನು ಅಧಿಕಾರಿಗಳು ತೆಗೆದುಕೊಂಡಿಲ್ಲ. ನಮ್ಮ ಸ್ನೇಹಿತರು ಹೇಳಿದಂತೆ ಗ್ರಾಮಾಭಿವೃದ್ಧಿ ಮಂತ್ರಿಗಳು ಎಂತಹ ಅಧಿಕಾರಿಗಳನ್ನು ಇಟ್ಟುಕೊಂಡಿದ್ದಾರೆಂದರೆ, ಎಲ್ಲ ಇಲಾಖೆಗಳಿಂದ ಆರಿಸಿ ಬಂದಂಥ ಅಧಿಕಾರಿಗಳು ಈ ಇಲಾಖೆಯಲ್ಲಿದ್ದಾರೆ. ಇದು ಚಾಳಿ ಇಲಾಖೆಯಾಗಿದೆ, ಇವರೇನಾದರೂ ತಪ್ಪು ಮಾಡಿದರೆ ಹಿಡಿಯುವುದಕ್ಕಾಗುವುದಿಲ್ಲ. ತಪ್ಪು ಮಾಡಿದವರು ತಮ್ಮ ಮಾತೃಸಂಸ್ಥೆಗೆ ಹೋಗಿಬಿಟ್ಟರೆ ಏನೂ ಮಾಡುವುದಕ್ಕಾಗುವುದಿಲ್ಲ. ಏಡಿಗಳು ಕೈಗೆ ಸಿಗದೆ ಬಿಲದಲ್ಲಿ ಸೇರಿಕೊಳ್ಳುವಂತೆ ತಪ್ಪು ಮಾಡಿದವರು ಸುಲಭವಾಗಿ ತಪ್ಪಿಸಿಕೊಂಡುಬಿಡುತ್ತಾರೆ. ನಮ್ಮ ಹೊಸನಗರದಲ್ಲಿಯೂ ಸಹ ೫೦ ಸಾವಿರ ರೂಪಾಯಿಗಳವರೆಗೆ ದುರುಪಯೋಗ ನಡೆದಿದೆ. ನಾನು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಬರೆದಿದ್ದರೂ ಸಹ ಅವರು ಸಂಬಂಧಪಟ್ಟವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇಂತಹವರಿಗೆ ಪ್ರಮೋಷನ್ ಕೊಡಲು ಸರ್ಕಾರದವರು ಕಾಯುತ್ತಿದ್ದಾರೋ ಏನೋ ಗೊತ್ತಿಲ್ಲ. ಇಂಥದ್ದನ್ನೆಲ್ಲಾ ಸರಿಪಡಿಸದಿದ್ದರೆ ನಿಮ್ಮ ಯೋಜನೆಗಳು ಉಳಿಯುವುದಿಲ್ಲ. ನಿಮ್ಮ ಕಾರ್ಯಕ್ರಮಗಳು ಉಳಿಯುವುದಿಲ್ಲ ಮತ್ತು ನಿಮ್ಮ ಸರ್ಕಾರ ಉಳಿಯುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಈ ಸಮಗ್ರ ಗ್ರಾಮೀಣ ಅಭಿವೃದ್ಧಿಯಲ್ಲಿ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳೆಲ್ಲಾ ನಿಂತುಹೋಗಿವೆ. ಕಳೆದ ೬–೭ ತಿಂಗಳುಗಳಲ್ಲಿ ಸರಿಯಾಗಿ ಕೆಲಸಗಳು ನಡೆದಿಲ್ಲ. ಯಾರಿಗೂ ಸಾಲಗಳನ್ನು ಕೊಡುತ್ತಿಲ್ಲ. ಇವರು ಜಾರಿಗೆ ತರುತ್ತಿರುವ ಅಂತ್ಯೋದಯ ಕಾರ್ಯಕ್ರಮವು ಕೂಡ ೨೦ ಅಂಶಗಳ ಕಾರ್ಯಕ್ರಮದ ರೀತಿಯಲ್ಲಿಯೇ ಇವೆ. ಆದರೆ ಸಾಲ ಮಾತ್ರ ಯಾರಿಗೂ ಸಿಗುತ್ತಿಲ್ಲ. ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ಸ್ವಲ್ಪ ಹೇಳಬೇಕು. ಈಗ ಪ್ರತಿ ಗ್ರಾಮದಲ್ಲಿಯೂ ನಿರುದ್ಯೋಗಿಗಳು ಜಾಸ್ತಿಯಾಗಿದ್ದಾರೆ. ಪ್ರತಿದಿನವೂ ನನ್ನ ಹತ್ತಿರ ೨೦–೩೦ ಮಂದಿ ಕೆಲಸ ಕೊಡಿಸಿ ಎಂದು ಬರುತ್ತಾರೆ ಇಂತಹವರಿಗೆ ಕೆಲಸ ಒದಗಿಸುವಂತಹ ಯಾವ ಯೋಜನೆಯನ್ನೂ ಸಹ ಇವರು ಹಾಕಿಕೊಂಡಿಲ್ಲ. ಶಾಲೆಗಳಲ್ಲಿ ಕಲಿತವರಿಗೂ ಕೆಲಸ ಸಿಗುತ್ತಿಲ್ಲ. ಶಾಲೆಯಲ್ಲಿ ಕಲಿತ ಕೆಲವರಿಗೆ ಕೆಲಸ ಕೊಡಿಸಲು ನಾನು ಬೆಳಗಾಂಗೆ ಕರೆದುಕೊಂಡು ಹೋಗಿ ಐದಾರು ಕಡೆಗಳಲ್ಲಿ ಪ್ರಯತ್ನ ಮಾಡಿದೆ. ಆದರೆ ಎಲ್ಲಿಯೂ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ನಮ್ಮ ತಾಲ್ಲೂಕ್‌ಗೆ ಸೇರಿದಂತೆ ೧೧೦ ಹಳ್ಳಿಗಳಿವೆ. ಪ್ರತಿ ಹಳ್ಳಿಯಲ್ಲಿಯೂ ಶಾಲೆಗಳಲ್ಲಿ

ಕಲಿತವರು ಇದ್ದಾರೆ. ಆದರೆ ಒಬ್ಬರಿಗೂ ಕೆಲಸ ಸಿಕ್ಕಿಲ್ಲ. ಸಮಗ್ರ ಗ್ರಾಮೀಣ ಯೋಜನೆಯಲ್ಲಿ ಶಿಕ್ಷಣ ಕಲಿತವರಿಗೂ ಕೆಲಸ ಒದಗಿಸಬೇಕು. ನಮಗೆ ಸ್ವಾತಂತ್ರ್ಯ ಬಂದು ೩೬ ವರ್ಷಗಳಾಯಿತು. ಅಲ್ಲಿಂದ ಇಲ್ಲಿಯವರೆಗೆ ಏನೇನು ಮಾಡಿದ್ದೀರಿ ಎಂದು ನನ್ನ ಸ್ನೇಹಿತರು ಕೇಳಿದರು. ಈ ಅವಧಿಯಲ್ಲಿ ಎಲ್ಲ ಕಡೆ ರಸ್ತೆಗಳಾಗಿವೆ, ಶಾಲೆಗಳು ಬಂದಿವೆ, ಕುಡಿಯುವ ನೀರಿನ ಬಾವಿಗಳು ಬಂದಿವೆ ಹಾಗೂ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ವಿಧಾನಸಭೆಗೆ ಆರಿಸಿ ಬರುತ್ತೇವೆಂದು ನಾವು ತಿಳಿದುಕೊಂಡಿರಲಿಲ್ಲ. ಈಗ ಎಲ್ಲರಿಗೂ ಜನರ ಸೇವೆ ಮಾಡಲು ಅವಕಾಶ ಸಿಕ್ಕಿದೆ. ನಾವೆಲ್ಲರೂ ಗಾಂಧೀಜಿ ಹಾಕಿಕೊಟ್ಟ ದಾರಿಯಲ್ಲಿ ನಡೆದಿರುವಾಗ ನಾವುಗಳು ಒಬ್ಬರಿಗೊಬ್ಬರು ಬಡಿದಾಡಬೇಕಾಗಿಲ್ಲ. ನಮ್ಮ ಸರ್ಕಾರವಿದ್ದಾಗಲೂ ಸಹ ಅಂದರೆ ಶ್ರೀ ಗುಂಡೂರಾವ್ ಅವರ ಕಾಲದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ಅದೇರೀತಿ ನೀವೂ ಸಹ ಚೆನ್ನಾಗಿ ಕೆಲಸ ಮಾಡಿ. ಇಲ್ಲಿ ಕಾಂಗ್ರೆಸ್ (ಐ) ಸದಸ್ಯರು, ಜನತಾ ಸದಸ್ಯರು ಎಂದು ನೋಡದೆ ನಾವೆಲ್ಲರೂ ಹೊಂದಾಣಿಕೆಯಿಂದ ಕೆಲಸ ಮಾಡಿದ್ದೇ ಆದರೆ ಗ್ರಾಮಾಭಿವೃದ್ಧಿಯಾಗುತ್ತದೆಯೇ ಹೊರತು ಒಬ್ಬರಿಗೊಬ್ಬರು ದೂರುತ್ತಾ ಹೊರಟರೆ ಯಾವ ಕೆಲಸವೂ ಆಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಸ್. ರಾಣೆ (ಕಾರವಾರ).— ಸನ್ಮಾನ್ಯ ಉಪಾಧ್ಯಕ್ಷರೆ, ಗ್ರಾಮಾಭಿವೃದ್ಧಿ ಇಲಾಖೆಯ ಬೇಡಿಕೆಯ ಬಗ್ಗೆ ನಾನು ಹೆಚ್ಚು ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ, ಸಮಯದ ಅಭಾವ ಇದೆ. ಮೊಟ್ಟಮೊದಲನೆಯದಾಗಿ ಮಾನ್ಯ ರಾಮಕೃಷ್ಣರವರು ಸಚಿವರಾಗಿದ್ದವರು, ಬಹಳ ಚೆನ್ನಾಗಿ ಹೇಳಿದ್ದಾರೆ. ನಿಜವಾಗಿಯೂ ಗ್ರಾಮಾಭಿವೃದ್ಧಿ ಆಗಬೇಕಾದರೆ ಗ್ರಾಮಾಭಿವೃದ್ಧಿ ಇಲಾಖೆಗೆ ಒಂದು ಸ್ವತಂತ್ರವಾದ ಡೈರೆಕ್ಟರೇಟ್ ಅವಶ್ಯಕತೆ ಇದೆ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ಗ್ರಾಮಾಭಿವೃದ್ಧಿಯ ಕಾರ್ಯವನ್ನು ಕೈಗೊಳ್ಳುವಂತಹ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಕೇವಲ ರೆವಿನ್ಯೂ ಅಧಿಕಾರಿಗಳ ಕೈಗೊಂಬೆಯಾಗಿದ್ದಾರೆ ಮತ್ತು ಅವರ ಕಪಿಮುಷ್ಠಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ರೆವಿನ್ಯೂ ಅಧಿಕಾರಿಗಳ ಅವಶ್ಯಕತೆಯನ್ನು ಪೂರೈಸುವಂತಹದ್ದು ಇದೆ. ಅವರಿಗೆ ಯಾವಾಗ ಜೀಪು ಬೇಕೋ, ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಜೀಪು ಪೂರೈಸುವುದು, ಬಂಗಲೆಗಳಿಗೆ ಮಂತ್ರಿಗಳು ಬಂದರೆ, ಹಿರಿಯ ಅಧಿಕಾರಿಗಳು ಬಂದರೆ ಅವರಿಗೆ ವ್ಯವಸ್ಥೆ ಮಾಡುವುದು ಇಂತಹದ್ದೆಲ್ಲಾ ಜವಾಬ್ದಾರಿ ಇವರ ಮೇಲಿದೆ. ಇದು ಹೆಚ್ಚಾಗಿದೆ ಇದನ್ನೆಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಾಡಬೇಕಾಗುತ್ತದೆ. ರೆವಿನ್ಯೂ ಅಧಿಕಾರಿಗಳ ಹಿಡಿತದಿಂದ ತಪ್ಪಿಸಬೇಕಾದರೆ ನಿಜವಾಗಿಯೂ ಗ್ರಾಮಾಭಿವೃದ್ಧಿಯ ಬಗ್ಗೆ ಮನಸ್ಸು ನಿಮ್ಮ ಸರ್ಕಾರಕ್ಕೆ ಇದ್ದರೆ, ತಾವೊಂದು ಸ್ವತಂತ್ರವಾದ ಡೈರೆಕ್ಟರೇಟ್ ಮಾಡುವಂತಹದ್ದು ಅವಶ್ಯಕ ಇದೆ. ಇದನ್ನು ಮಾನ್ಯ ಮಂತ್ರಿಗಳು ಗಂಭೀರವಾಗಿ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಭಿವೃದ್ಧಿ ವಿಷಯದಲ್ಲಿ ನಮ್ಮ ಜಿಲ್ಲೆಯಲ್ಲಿ ನಡೆದಂತಹ ವಿಷಯಗಳ ಬಗ್ಗೆ ಹೇಳಬಯಸುತ್ತೇನೆ. ಗ್ರಾಮಾ... ಪ್ರದೇಶಗಳಲ್ಲಿ ಕೆರೆ ಕಟ್ಟುವ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಒಂದು ಪ್ರತ್ಯೇಕ ಡಿವಿಜನ್ ಮಾ... ತಾವು ಮಾಡಿದಂತಹ ಉದ್ದೇಶ ಸಫಲವಾಗುತ್ತಿಲ್ಲ. ತಾವು ಅಲ್ಲಿಗೆ ಕೊಟ್ಟಂತಹ ಜನರು ... ಇದ್ದರೂ ಕೆಲಸ ಮಾಡಲಿಕ್ಕೆ ಮನಸ್ಸಿದ್ದರೂ ಅವರನ್ನು ರಿಟೈರ್ಡ್ ಆಗುವ ಸಮಯದಲ್ಲಿ... ಮಾಡುತ್ತಾರೆ. ಕೆಲವರು ಪೋಸ್ಟ್ ಮಾಡಿದರೂ ಉತ್ತರ ಕನ್ನಡ ಜಿಲ್ಲೆಗೆ ಬರ... ವುದಿಲ್ಲ. ಆದ್ದರಿಂದ ಅವರು ಏನು ಒಳ್ಳೆಯ ಉದ್ದೇಶವಿಟ್ಟು ಕೊಂಡು ಡಿವಿಜ... ನಿಮ್ಮ ಉದ್ದೇಶ ಸಫಲವಾಗಬೇಕಾದರೆ ಕಾರ್ಯ ದಕ್ಷತೆಯುಳ್ಳ ಒಳ್ಳೆಯ ಅಧಿಕಾ... ಮಾಡಬೇಕು. ಕುಡಿಯುವ ನೀರಿನ ವಿಷಯದಲ್ಲಿ ಸಾಮಾನ್ಯವಾಗಿ ಉತ್ತರ ಕ... ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಾವವಿರುವುದಿಲ್ಲ ಎನ್ನುವ ಭಾವನೆ ಬಂದಿದೆ. ... ನಮ್ಮ ಜಿಲ್ಲೆಗಳಲ್ಲೂ ಕುಡಿಯುವ ನೀರಿಗೆ ತೊಂದರೆ ಇಲ್ಲ ಎನ್ನತಕ್ಕ ಭಾವನೆ ತ... ೧೨೫ ಸೆಂಟಿ ಮೀಟರ್ ಮಳೆಯಾದರೂ ಬೇಸಿಗೆಯಲ್ಲಿ ತೀವ್ರತರವಾದ ಕುಡಿಯ... ವನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಸಮುದ್ರ ದಂಡೆ... ಬಹಳ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಸಾಮಾನ್ಯವಾಗಿ ನಮ್ಮ... ವಿಭಾಗ ಮಾಡಬಹುದು, ಒಂದು ಕರಾವಳಿ ಮತ್ತೊಂದು ಘಟ್ಟದ ಪ್ರದೇಶ...

ತಾಲ್ಲೂಕುಗಳ ಸಮಸ್ಯೆಗಳೇ ಬೇರೆ. ಕರಾವಳಿ ಪ್ರದೇಶದ ತಾಲ್ಲೂಕುಗಳ ಸಮಸ್ಯೆಗಳೇ ಬೇರೆ. ನಮ್ಮ ತಾಲ್ಲೂಕಿನಲ್ಲಿ ನೀರು ಕೊಡಲಿಕ್ಕೆ ಕೊಳವೆ ಬಾವಿ ತೋಡಲು 2 ರಿಗ್‌ಗಳನ್ನು ಪೂರೈಸಿದರು. ಆದರೆ ದುರ್ದೈವ ಏನಾಯಿತಂ ಅಂದರೆ 'ಗೋಕರ್ಣದಲ್ಲಿ ಆತ್ಮಲಿಂಗಅಷ್ಟಬಂಧ ಉತ್ಸವ' ಇದೇ ಸಮಯದಲ್ಲಿ ಏರ್ಪಾಟು ಮಾಡಿದ್ದರಿಂದ ನಮ್ಮ ಜಿಲ್ಲೆಯ ಕಾರ್ಯ ಸ್ಥಗಿತವಾಯಿತು. ಎಲ್ಲಾ ಅಧಿಕಾರಿಗಳು ಗೋಕರ್ಣದ ಅಷ್ಟಬಂಧ ಉತ್ಸವಕ್ಕೆ ಗಮನ ಕೊಟ್ಟರು. ಲಕ್ಷಾಂತರ ರೂಪಾಯಿ ಹಣ ಕೇಂದ್ರ ಸರ್ಕಾರದ್ದು ಎಲ್ಲಾ ಅಲ್ಲಿಗೆ ಖರ್ಚಾಯಿತು. ಅದು ಕುಡಿಯುವ ನೀರಿನ ಅಭಾವ ಇರುವಾಗ ಆದದ್ದು. ಮಹಾಬಲೇಶ್ವರ ಆತ್ಮಲಿಂಗ ಎಲ್ಲರಿಗೂ ವರ ಕೊಡುತ್ತಾನೆಂದು ಕೇಳಿದ್ದೇನೆ, ಆದರೆ ನಮ್ಮ ಜಿಲ್ಲೆಗೆ ಅಷ್ಟಬಂಧ ಉತ್ಸವ ಕಾಲದಲ್ಲಿ ಶಾಪ ಕೊಡಲಾಗಿದೆ ಅಂದರೆ ಅತಿಶಯೋಕ್ತಿ ಆಗಲಾರದು. ನನ್ನ ಕ್ಷೇತ್ರವಾದ ಸೂಪದಲ್ಲಿ ಮತ್ತಿತರ ಗ್ರಾಮಗಳಲ್ಲಿ ಕಾಳಿ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯಿಂದ ಅನೇಕ ಗ್ರಾಮಗಳು ಮುಳುಗಡೆಯಾಗಿ ಅಲ್ಲಿದ್ದ ಜನಗಳಿಗೆ ಪುನರ್ ನಿರ್ಮಾಣವಾದಂತಹ ಎರಡು ಟೌನ್‌ಶಿಪ್‌ಗಳಿವೆ. ಅಲ್ಲಿ ಕುಡಿಯುವ ನೀರಿಗೆ ತೊಂದರೆಯುಂಟು ಹೆಸರಿಗೆ ಮಾತ್ರ, ಟೌನ್‌ಶಿಪ್ ಟೌನ್‌ಶಿಪ ಗೆ ಸಂಬಂಧ ಪಟ್ಟಹಾಗೆ ಏನೇನು ಅನುಕೂಲಗಳಿರಬೇಕೋ ಆ ಅವಶ್ಯಕತೆಗಳು ಇಲ್ಲ. ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಪಂಪ್‌ಗಳನ್ನು ಜೋಡಿಸಿ ಹಳ್ಳಿಯ ಜನರಿಗ ನೀರು ಪೂರೈಸಬೇಕೆಂದು ನಿಮಗೆ ಮನಸ್ಸು ಇದ್ದರೆ ಬೇಗ ಮಾಡಿ. ನಮ್ಮ ಜಿಲ್ಲೆಗೆ ಕೊಟ್ಟಂತಹ ಎರಡು ರಿಗ್‌ಗಳು ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ನಾನು ರಾಜಕೀಯವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಇದ್ದ ಸಂಗತಿಯನ್ನು ಹೇಳಬೇಕಾಗುತ್ತದೆ. ಈ ವಿಷಯವನ್ನು ಮಾನ್ಯ ಜೆ.ಎಚ್. ಪಟೇಲ್‌ರವರ ಗಮನಕ್ಕೆ ತಂದಿದ್ದೇನೆ. ಅವರು ಇದನ್ನು ಸರಿಪಡಿಸುತ್ತೇನೆಂದು ಹೇಳಿದ್ದರು, ಆದರೆ ಇದುವರೆಗೆ ಏನೂ ಆಗಿಲ್ಲ. ನಮ್ಮ ಜಿಲ್ಲೆಯಲ್ಲಿ ಆರು ವಿಧಾನಸಭಾ ಕ್ಷೇತ್ರಗಳಿವೆ. ಕೇವಲ ಆಡಳಿತ ಪಕ್ಷದ ವಿಧಾನಸಭಾ ಕ್ಷೇತ್ರದಲ್ಲಿ ಎರಡು ರಿಗ್‌ಗಳನ್ನು ಇಟ್ಟು ಉಳಿದ ಎಲ್ಲಾ ವಿಧಾನಸಭಾ ಕ್ಷೇತ್ರಗಳನ್ನು ನಿರ್ಲಕ್ಷಿಸಿದ್ದಾರೆ. ನಾನು ಹೇಳುವುದೇನೆಂದರೆ ಈ ರೀತಿಯ ಪಕ್ಷಪಾತ ಬೇಡ. ಏಕೆಂದರೆ ಸೂಪ ಕ್ಷೇತ್ರದ ಜನ ನಮ್ಮ ರಾಜ್ಯಕ್ಕೆ ಅತಿ ದೊಡ್ಡದಾದ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದಂತಹ ಜನ. ಇಂತಹವರಿಗೆ ಬಹುಮಾನ ಕೊಡುವ ರೀತಿಯಲ್ಲಿ ವರ್ತಿಸಬೇಕು. ತ್ಯಾಗ ಮಾಡಿದಂತಹ ಜನಗಳಿಗೆ ಪ್ರತಿಫಲ ಕೊಡುವುದರ ಕಡೆಗೆಗಮನ ಕೊಡಬೇಕು.

ಇನ್ನು ಎನ್. ಆರ್. ಇ. ಪಿ. ಕೆಳಗೆ ಒದಗಿಸಿದಂತಹ ಹಣ ಗ್ರಾಮೀಣ ಜನರಿಗೆ ಉದ್ಯೋಗ ಕೊಡುವಂತಹ ಯೋಜನೆ ಕೆಳಗೆ ನಮ್ಮ ಜಿಲ್ಲೆಗೆ ನಿಗದಿಪಡಿಸಿದಂತಹ ಸುಮಾರು 10 ಲಕ್ಷ ರೂಪಾಯಿ ಹಣವನ್ನು ನಮ್ಮ ಅಧಿಕಾರಿಗಳು ಏನು ಮಾಡಿದರು ಅಂದರೆ 'ಮಹಾಬಲೇಶ್ವರ ಆತ್ಮಲಿಂಗ ...ಬಂಧ' ಉತ್ಸವಕ್ಕೆ ವೆಚ್ಚ ಮಾಡಿದರು. ಪ್ರತಿಯೊಂದು ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳಿ... ಇಟ್ಟಂತಹ ಹಣವನ್ನು ಗೋಕರ್ಣದ ಅಷ್ಟಬಂಧ ಉತ್ಸವಕ್ಕೆ ಖರ್ಚು ಮಾಡಿದ್ದಾರೆ, ಯಾರ ...ನ್ನು ಹೆಚ್ಚು ಮಾಡಲಿಕ್ಕೆ ಹಣ ಖರ್ಚು ಮಾಡಿದರೋ ಗೊತ್ತಿಲ್ಲ. ಆದ್ದರಿಂದ ಇನ್ನು ... ಅಭಿವೃದ್ಧಿ ಕಾರ್ಯಗಳಿಗ ಮೀಸಲಿಟ್ಟ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೋಸ್ಕರ ...ಬೇಕು. ಇಲ್ಲಿ ಸರ್ಕಾರ ವಿಫಲವಾಗಿದೆ. ನಿಮ್ಮ ಆಡಳಿತ ಪಕ್ಷದ ಸದಸ್ಯರು ...ಗ್ರಾಮಾಂತರ ಪ್ರದೇಶಗಳ ವಿಷಯದಲ್ಲಿ ಹಿಂದಿನ ಸರ್ಕಾರಕ್ಕಿಂತ ನಾವು ಹೆಚ್ಚು ...ವೆಂದು ಹೇಳಿದರು. ನೀವು ಮಾಡಿದಂತಹ ಹೊಸ ಸಾಧನೆಗಳು ... ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ ಹಿಂದಿನ ಸರ್ಕಾರದ ...ಳನ್ನು ಕೈಬಿಡುವುದಿಲ್ಲವೆಂದು ಹೇಳಿದ್ದೀರಿ. ಹಿಂದಿನ ಸರ್ಕಾರ ... ಒಳ್ಳೆಯ ಕಾರ್ಯಕ್ರಮಗಳನ್ನು ಕೈಬಿಟ್ಟಿದ್ದು ನಮಗೆ ಕಂಡು ...ಣೆಗೆ ಹೇಳುವುದಾದರೆ 'ಆಶಾಕಿರಣ ಯೋಜನೆ' ಮತ್ತು ...'ನೆಗಳು ಎಷ್ಟು ಉಪಯುಕ್ತವಾಗಿವೆ. ಆಶಾಕಿರಣ ಯೋಜನೆ ...ರಿಗೆ ಎಲ್ಲಾ ಸೌಲಭ್ಯಗಳು ಸಿಗುವಂತಹ ಯೋಜನೆ ಇತ್ತು. ಅದೇ ...ಯಿಂದ ಬಡ ಮೀನುಗಾರರಿಗೆ ಸಾಲ ಸೌಲಭ್ಯ ಸಿಗುವಂತಹ ...ತನ್ನು ಈ ವರದಿಯಲ್ಲಿ ಉಲ್ಲೇಖಿಸಿಲ್ಲ ಎನ್ನುವ ಮಾತನ್ನು ...ರ್ಯಕ್ರಮಗಳಿಂದ ಕಾರ್ಮಿಕರಿಗೆ ಮತ್ತು ಬಡ ಮೀನುಗಾರರಿಗೆ

ತಾವು ಈ ಎರಡು ಕಾರ್ಯಕ್ರಮಗಳ ಬಗ್ಗೆ ಇಲ್ಲಿ ಉಲ್ಲೇಖ ಮಾಡದಿರುವುದರಿಂದ ತಮ್ಮ ಸರ್ಕಾರ ಜನರ ಹಿತರಕ್ಷಣೆಯನ್ನು ಮಾಡುವುದರಲ್ಲಿ ಆಸಕ್ತಿ ಹೊಂದಿಲ್ಲದೆಂತು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತೆ ನಾನು ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದು ಏನೆಂದರೆ ಸ್ವಯಂ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಗ್ರಾಮಾಂತರ ಪ್ರದೇಶದ ಯುವಕರಿಗೆ ತರಬೇತಿ ಯನ್ನು ಕೊಡುವಂಥ ಕೆಲಸವನ್ನು ತಾವು ಮಾಡಿಲ್ಲ.

ಉಪಾಧ್ಯಕ್ಷರು.— ತಾವು ಸುಮಾರು ೧೦–೧೫ ನಿಮಿಷಗಳನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಪಿ. ಎಸ್. ರಾಣಿ.— ಗ್ರಾಮಾಂತರ ಪ್ರದೇಶದ ಯುವಕರಿಗೆ ತರಬೇತಿ ಕೊಡುವುದಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ತರಬೇತಿ ಕೇಂದ್ರಗಳನ್ನು ತೆರೆಯಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂಥ ಹೊಲಿಗೆ ಯಂತ್ರಗವನ್ನು ಕಂತುಗಳ ರೂಪದಲ್ಲಿ ಕೊಡುವಂಥ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಇದರಿಂದ ಕೂಡ ಹೆಣ್ಣು ಮಕ್ಕಳು ತಮ್ಮ ಸ್ವಂತ ಮನೆಯಲ್ಲಿ ಉದ್ಯೋಗ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ಒಂದು ಯೋಜನೆಯನ್ನು ತಮ್ಮ ಸರ್ಕಾರದವರು ಮಾಡುತ್ತಿಲ್ಲ ಆ ಒಂದು ಯೋಜನೆಯನ್ನು ತಮ್ಮ ಸರ್ಕಾರದವರು ಮಾಡಿದರೆ ಆಗ ತಾವು ಹಾಕಿಕೊಂಡಿರತಕ್ಕಂಥ ಯೋಜನೆ ನಿಜವಾಗಿ ಸಫಲವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟಿದ್ದಕ್ಕಾಗಿ ನಾನು ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸನ್ಮಾನ್ಯ ಅಧ್ಯಕ್ಷರೇ ಇದುವರೆಗೂ ಸುಮಾರು ೨೮ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ...

ಶ್ರೀ ನಾಯಕ್ ಎನ್. ಜಿ. — ಮಾನ್ಯ ಅಧ್ಯಕ್ಷರೇ, ನಾನು ಕೂಡ ಮಾತನಾಡಬೇಕು.

ಉಪಾಧ್ಯಕ್ಷರು.— ತಾವು ಮಾತನಾಡಬೇಕೆಂದು ನನಗೆ ಮೊದಲೇ ಹೆಸರು ಕೊಟ್ಟಿಲ್ಲ. ಮತ್ತು ತಮ್ಮ ಪಕ್ಷದ ನಾಯಕರು ಕೂಡ ಹೆಸರು ಕೊಟ್ಟಿಲ್ಲ.

ಶ್ರೀ ಗೋವಿಂದ ಪಿ. ಒಡೆಯುರಾಜ್.— ಮಾನ್ಯ ಅಧ್ಯಕ್ಷರೇ, ಅವರು ಹಿರಿಯ ಸದಸ್ಯರು ಅವರು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಒಳ್ಳೆಯದು. ಅವರಿಗೆ ತಾವೆ ಟೈಮ್ ನಿಗದಿ ಮಾಡಿ ಕೊಡಿ, ಅಷ್ಟರಲ್ಲಿ ಅವರು ಮಾತನಾಡಿ ಮುಗಿಸುತ್ತಾರೆ.

ಉಪಾಧ್ಯಕ್ಷರು.— ಸುಮಾರು ೨೮ ಜನ ಮಾನ್ಯಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ತಾವು ಮುಂದಿನ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ತಾವು ಈ ರೀತಿ ಮಾತನಾಡಿದರೆ ಹೇಗೆ? ತಾವು ದಯ ಮಾಡಿ ಕುಳಿತುಕೊಳ್ಳಿ.

(ಗೊಂದಲ)

ಆಳುವ ಪಕ್ಷದವರು ತಮ್ಮ ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಕೂಡ ತಮ್ಮ ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೆ. ಮತ್ತೆ ಬಿ.ಜೆ.ಪಿ.ಯವರೂ ಕೂಡ ಕೊಟ್ಟಿದ್ದಾರೆ. ಮತ್ತು ಸಿ.ಪಿ.ಐ. ಮತ್ತು ಸಿ.ಪಿ.ಎಂ ಸದಸ್ಯರು ಕೂಡ ಹೆಸರುಗಳನ್ನು ಕೊಟ್ಟಿದ್ದಾರೆ. ಮತ್ತು ಸ್ವತಂತ್ರ ಪಕ್ಷದ ಸದಸ್ಯರು ಮಾತನಾಡಬೇಕೆಂದು ತಮ್ಮ ತಮ್ಮ ಹೆಸರುಗಳನ್ನು ಕೊಟ್ಟಿದ್ದರು. ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಲು ಎದ್ದು ನಿಂತಿದ್ದಾರೆ. ಈಗ ಅವರು ಉತ್ತರವನ್ನು ಕೊಟ್ಟು ಮುಗಿಸಲಿ. ಆ ನಂತರ ಬೇಕಾದರೆ ತಮಗೆ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಅಬ್ದುಲ್ ನಜೀರ್ ಸಾಬ್(ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಇದುವರೆಗೂ ಸುಮಾರು ೨೮ ಜನ ಮಾನ್ಯ ಸದಸ್ಯರು ಗ್ರಾಮಾಭಿವೃದ್ಧಿ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ಕೆಲವು ಜನ ಮಾನ್ಯ ಸದಸ್ಯರು ಬಹಳ ಉಪಯುಕ್ತ

ವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವು ಜನ ಮಾನ್ಯ ಸದಸ್ಯರು ಸರ್ಕಾರದ ಕೆಲಸ ಕಾರ್ಯಗಳನ್ನು ಮೆಚ್ಚಿದ್ದಾರೆ, ಆದರೆ ಕೆಲವು ಜನ ಮಾನ್ಯ ಸದಸ್ಯರು ಅರೆ ಮನಸ್ಸಿನಿಂದ ಮೆಚ್ಚಿದ್ದಾರೆ. ಮತ್ತು ಕೆಲವು ಜನ ಮಾನ್ಯ ಸದಸ್ಯರು ತಾರತಮ್ಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಜನ ಮಾನ್ಯ ಸದಸ್ಯರು ಮಾತನಾಡುವಾಗ ಸರ್ಕಾರವನ್ನು ಚುಚ್ಚಿದ್ದಾರೆ. ಆ ಎಲ್ಲಾ ಮಾನ್ಯ ಸದಸ್ಯರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಪ್ರತಿಯೊಬ್ಬ ಮಾನ್ಯ ಸದಸ್ಯರು ಪ್ರತ್ಯೇಕವಾದಂಥ ಹೆಸರುಗಳನ್ನು ಸೂಚಿಸಿ ಅವರ ಸಲಹೆಗಳಿಗೆ ನಾನು ಉತ್ತರ ಕೊಡಲು ಈಗ ಸಮಯ ಇಲ್ಲ. ಆದ್ದರಿಂದ ಮೂಲಭೂತವಾಗಿ ಯಾವ ಯಾವ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಯಾವ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಎನ್ನುವ ಬಗ್ಗೆ ಏಕ ಪ್ರಕಾರವಾಗಿ ನಾನು ಸಂಗ್ರಹಣೆ ಮಾಡಿದ್ದೇನೆ. ಆ ಎಲ್ಲಾ ಸಲಹೆಗಳಿಗೂ ನಾನು ಉತ್ತರ ಕೊಡುತ್ತೇನೆ. ಮೊಟ್ಟಮೊದಲನೆಯದಾಗಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಕೆಲವು ಜನ ಮೆಚ್ಚಿದ್ದಾರೆ ಕೆಲವು ಜನ ತಾರತಮ್ಯವನ್ನು ವ್ಯಕ್ತಪಡಿಸಿದ್ದಾರೆ. ಮೊಟ್ಟಮೊದಲನೆಯದಾಗಿ ಮಾತನಾಡಿದಂಥ ಶ್ರೀಮಾನ್ ಸೋಮಪ್ಪನವರು ಮಾತನಾಡುತ್ತಾ ಹೇಳಿದರು. ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ತಾರತಮ್ಯವನ್ನು ಮಾಡಿದ್ದಾರೆಂದರು. ಆದರೆ ಅವರು ಆ ಮಾತನ್ನು ಹೇಳುವುದಕ್ಕೆ ಅವರಿಗೆ ಹಕ್ಕು ಇದೆ. ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ರಾಜ್ಯದ ಎಲ್ಲಾ ಕಡೆಗಳಲ್ಲ ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ಕಂಡುಬಂತು. ಆಗ ನಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾದರೆ ನಮ್ಮಲ್ಲಿ ಯಾವ ರೀತಿಯ ವ್ಯವಸ್ಥೆ ಕೂಡ ಇರಲಿಲ್ಲ. ಆಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾನು ಒಂದು ಆಜ್ಞೆಯನ್ನು ಹೊರಡಿಸಿದೆ. ಅದು ಏನೆಂದರೆ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಇದೆ. ಆ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಆ ಜಿಲ್ಲೆಯ ಶಾಸಕರು ಮತ್ತು ಅಸಿಸ್ಟೆಂಟ್ ಕಮಿಷನರ್ಸ್ ಇಡೀ ಜಿಲ್ಲೆ ಮತ್ತು ತಾಲೂಕಿನಲ್ಲಿ ಸಂಚಾರ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಡಬೇಕು. ಮೊದಲು ತಾಲ್ಲೂಕು ಮಟ್ಟದಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕಾಗಿದೆ ಎನ್ನುವ ಪಟ್ಟಿಯನ್ನು ತಯಾರು ಮಾಡಿಸಿ ನಂತರ ಆ ಪಟ್ಟಿಗೆ ಜಿಲ್ಲಾ ಮಟ್ಟದ ಸಮಿತಿ ಮಂಜೂರಾತಿ ನೀಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ನಾವು ತೀರ್ಮಾನ ಮಾಡಿ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಆ ಆಜ್ಞೆಯಲ್ಲಿ ಸಂಬಂಧಪಟ್ಟ ಶಾಸಕರನ್ನು ಕೇಳಿ ಪಟ್ಟಿ ತಯಾರಿಸಬೇಕೆಂದು ಸಹ ತಿಳಿಸಿದ್ದೇವೆ. ಆ ನಂತರ ನಮಗೆ ಸುಮಾರು ಮೂರು ಹಂತಗಳಲ್ಲಿ ಪಟ್ಟಿ ತಯಾರಾಗಿ ಬಂದವು. ಮೊದಲನೆಯ ಹಂತದಲ್ಲಿ ಸುಮಾರು ೨೦೦೦ ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ತಿಳಿದು ಬಂತು. ಎರಡನೇ ಹಂತದಲ್ಲಿ ಸುಮಾರು ೬೦೦೦ ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ಮತ್ತೆ ಮೂರನೇ ಹಂತದಲ್ಲಿ ಸುಮಾರು ೧೧ ಸಾವಿರ ಕೊಳವೆ ಬಾವಿಗಳ ಅವಶ್ಯಕತೆ ಇದೆಯೆಂದು ತಿಳಿದು ಬಂತು. ಈ ಕೊಳವೆ ಬಾವಿಗಳನ್ನು ತೋಡಿಸಲು ಕ್ರಮವನ್ನು ಸಹ ತೆಗೆದುಕೊಂಡಿದ್ದು ನಂತರ ಮತ್ತೆ ನಾಲ್ಕನೆ ಪಟ್ಟಿಯಲ್ಲಿ ಸುಮಾರು ೬೫೦೦ ಕೊಳವೆ ಬಾವಿಗಳ ಅವಶ್ಯಕತೆ ಕಂಡುಬಂದಿದೆ ಆ ಬಗ್ಗೆ ಸರ್ಕಾರ ಇನ್ನೂ ಯಾವ ಕ್ರಮವನ್ನು ಸಹ ಕೈಗೊಂಡಿಲ್ಲ. ಅದಕ್ಕೆ ಸರ್ಕಾರದ ಮಂಜೂರಾತಿ ಕೂಡ ಕೊಟ್ಟಿಲ್ಲ. ನಾವು ಫೆಬ್ರವರಿ, ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ವ್ಯಾಪಕವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸವನ್ನು ಮಾಡಿದ್ದೇವೆ. ಇದರಲ್ಲಿ ಯಾವ ತಾರತಮ್ಯವನ್ನು ಕೂಡ ನಾವು ಮಾಡಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಗ್ರಾಮಾಭಿವೃದ್ಧಿ ವಿಷಯದಲ್ಲಿ ಸರ್ಕಾರ ತಾರತಮ್ಯ ಮಾಡತಕ್ಕಂಥದ್ದು ಎಲ್ಲಿಂದ ಬರುತ್ತದೆ? ಆದರೆ ಗುಲ್ಬರ್ಗ ಮತ್ತು ರಾಯಚೂರು ಇಂಥ ಕೆಲವೊಂದು ಜಿಲ್ಲೆಗಳಲ್ಲಿ ನಾವು ರಿಗ್ಸ್ ತೆಗೆದುಕೊಂಡು ಹೋಗಿ ಸುಮಾರು ೧೮೦ ಅಡಿ ೨೦೦ ಅಡಿ ೩೦೦ ಅಡಿಗಳ ಆಳ ಮಾಡಿದರೂ ಸಹ ಅಲ್ಲಿ ನೀರು ಸಿಗುವುದಿಲ್ಲ. ಇದರಿಂದ ಅಲ್ಲಿಗೆ ಪ್ರೈವೇಟ್ ರಿಗ್ಸ್‌ನವರು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಕಾರಣವೇನೆಂದರೆ ಅವರಿಗೆ ನಾವು ಕೊಡುವ ಹಣ ಬಹಳ ಕಡಿಮೆ. ಇದರಿಂದ ಅವರು ಇಷ್ಟಪಡುವುದಿಲ್ಲ. ಮತ್ತೆ ಶಿವಮೊಗ್ಗದಲ್ಲಿ ಸುಮಾರು ೨೦ ಬಾವಿಗಳನ್ನು ಮಾಡಿದ್ದೇವೆ. ಅಲ್ಲಿನ ಭೂಮಿ ಕೂಡ ಹದವಾಗಿರುವುದಿಲ್ಲ. ಈ ದೃಷ್ಟಿಯಿಂದ ಅಲ್ಲಿ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಆಗುವುದಿಲ್ಲ. ಇದರಿಂದ ಅಲ್ಲಿನ ಅಂಕಿಅಂಶಗಳು ಬಹಳ ಕಡಿಮೆ. ನಾನು ಈ ರಾಜ್ಯದ ೧೯ ಜಿಲ್ಲೆಗಳಿಗೂ ಕೂಡ ಭೇಟಿ ಕೊಟ್ಟು ನೋಡಿಕೊಂಡು ಬಂದಿದ್ದೇನೆ. ಆ ತಾಲ್ಲೂಕಿನ ಶಾಸಕರನ್ನು ಸಹ ಕರೆದು

ಮಾತನಾಡಿದ್ದೇನೆ. ಆದ್ದರಿಂದ ಇದರಲ್ಲಿ ತಾರತಮ್ಯ ಎಲ್ಲಿಂದ ಬರುತ್ತದೆ? ನಮ್ಮ ರಾಜ್ಯದಲ್ಲಿ ರಿಗ್ಸ್ ಕಡಿಮೆ ಎಂದು ಹೇಳಿ ನಾವು ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದ ಕೂಡ ರಿಗ್ ಯಂತ್ರಗಳನ್ನು ತರಿಸಿದ್ದೇವೆ. ಕೆಲವೊಂದು ಕಡೆಗಳಲ್ಲಿ ತಾಂತ್ರಿಕ ವ್ಯತ್ಯಾಸಗಳಿಂದ ನಾವು ತಪ್ಪು ಮಾಡಿರಬಹುದು. ಆದರೆ ಉದ್ದೇಶ ಪೂರ್ವಕವಾಗಿ ಯಾರೂ ಕೂಡ ತಪ್ಪು ಮಾಡುವುದಿಲ್ಲ. ಶ್ರೀಮಾನ್ ಸೋಮಪ್ಪನವರು ಮಾತನಾಡುತ್ತಾ ತಮ್ಮ ಕ್ಷೇತ್ರದ ಉದಾಹರಣೆಯನ್ನು ಕೊಟ್ಟಿದ್ದಾರೆ. ಹಾಗೆ ಅವರು ಮಾತನಾಡುತ್ತಾ ಕೇಳಿದರು. ನರಗುಂದ ಮತ್ತು ನವಲಗುಂದ ಪ್ರದೇಶಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದೀರಿ ಮತ್ತೆ ಕನಕಪುರದಲ್ಲಿ ಎಷ್ಟು ಕೊಳವೇ ಬಾವಿಗಳನ್ನು ತೋಡಿಸಿದ್ದೀರಿ ಎನ್ನುವ ಪ್ರಶ್ನೆಯನ್ನು ಸಹ ಕೇಳಿದ್ದಾರೆ. ಕೆಲವೊಂದು ಪ್ರದೇಶಗಳಲ್ಲಿ ಕೊಳವೇ ಬಾವಿಗಳನ್ನು ತೋಡುವುದಕ್ಕೆ ಆಗುವುದಿಲ್ಲ. ಮತ್ತೆ ಕೆಲವೊಂದು ಪ್ರದೇಶಗಳಲ್ಲಿ ಓಪನ್ಸ್ ವೆಲ್ಸ್ ಮಾಡಬೇಕಾಗುತ್ತದೆ ಮತ್ತೆ ಕೆಲವು ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದ್ದರೂ ಕೂಡ ಅಲ್ಲಿ ಕುಡಿಯುವ ನೀರು ಸಿಗುವುದಿಲ್ಲ. ಅಲ್ಲಿನ ನೀರಿನ ಲವಣಾಂಶಗಳು ವ್ಯತ್ಯಾಸ ಇರುತ್ತದೆ. ಮತ್ತು ಉಪ್ಪು ನೀರು ಇರುತ್ತದೆ. ಇದರಿಂದ ಆ ನೀರು ಕುಡಿಯಲು ಆಗುವುದಿಲ್ಲ. ಇನ್ನು ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಾವಗಲ್‌ರವರು ಮಾತನಾಡುತ್ತಾ ಹೇಳಿದರು, ಸುಮಾರು ೨ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೀರಿ. ಆ ಯೋಜನೆಯ ಮುಖಾಂತರ ಸುಮಾರು ೪೦ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕು ಎನ್ನುವ ಮಾತನ್ನು ಹೇಳಿದರು. ಆದರೆ ಈ ಬಗ್ಗೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅಲ್ಲಿಂದ ಬಂದ ತಕ್ಷಣ ನಾವು ಆ ಕೆಲಸವನ್ನು ಮಾಡಿಕೊಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ದಿವಸ ಈ ಸದನದಲ್ಲಿ ಕೊಡಬಯಸುತ್ತೇನೆ.

೪.೩೦ ಪಿ.ಎಂ

ಮತ್ತೆ ಕುಡಿಯುವ ನೀರಿನ ಬಗ್ಗೆ ಇನ್ನೂ ಕೂಡ ಕೆಲವು ಕಡೆ ಸಮಸ್ಯೆಗಳಿವೆ. ಮಾನ್ಯ ಸದಸ್ಯರಾದ ಶ್ರೀ ಸ್ವಾಮಿರಾವ್ ಇಲ್ಲಿಲ್ಲ. ಅವರು ನವಿಲೆ ಎನ್ನುವ ಗ್ರಾಮದಲ್ಲಿ ಏನು ಕೆಲಸ ಆಗಿಲ್ಲವೆಂದು ಹೇಳಿದರು. ಆ ಗ್ರಾಮದಲ್ಲಿ ಹತ್ತು ಕೊಳವೆ ಬಾವಿಗಳನ್ನು ಮಾಡಿದ್ದರೂ ಕೂಡ ಅವುಗಳೆಲ್ಲವೂ ವಿಫಲವಾಗಿವೆ. ಹತ್ತು ಕೊಳವೆ ಬಾವಿಗಳೂ ಅಲ್ಲಿ ವಿಫಲವಾಗಿದ್ದರಿಂದ ಅಲ್ಲಿ ತೋಡುಬಾವಿಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ಇದರಲ್ಲಿ ಯಾವ ತಾರತಮ್ಯವೂ ಇಲ್ಲ. ಆ ಬಗ್ಗೆ ಯಾವುದೇ ಸಂಶಯ ಮಾನ್ಯ ಸದಸ್ಯರುಗಳ ಗಮನಲ್ಲಿದ್ದರೆ ಅದನ್ನು ಮೊದಲು ಕಿತ್ತೊಗೆಯಬೇಕೆಂದು ನಾನು ಹೇಳುತ್ತೇನೆ. ನಾವು ಯಾವುದೇ ತಾರತಮ್ಯ ಮಾಡುವುದಿಲ್ಲವೆಂದು ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರಿಗೆ ಗೊತ್ತು. ಮುಂಚಿನ ಸರ್ಕಾರ ೧೩ ಕೋಟಿ ರೂಪಾಯಿ ಅಂದಾಜು ಮಾಡಿತ್ತು, ಆದರೆ ನಾವು ೨೬ ಕೋಟಿಗಿಂತಲೂ ಹೆಚ್ಚು ಕೆಲಸ ಮಾಡಿದ್ದೇವೆ. ಇದು ಹೇಗೆ ಆಗಿದೆ ಎಂಬುದು ಅವರಿಗೆ ಗೊತ್ತಿದೆ. ತ್ವರಿತ ಗತಿಯಲ್ಲಿ ಈ ಕೆಲಸ ಕಾರ್ಯಗಳನ್ನು ಎನ್ ಆರ್ ಇ ಪಿ ಯಲ್ಲಿ ಯಾವುದೇ ರೀತಿಯ ತಾರತಮ್ಯ ಇಲ್ಲದೇ ಮಾಡಿ ಮುಗಿಸಿದ್ದೇವೆ. ಇದು ಈ ಸಮಾಜಕ್ಕೆ ಜನಕ್ಕೆ ಅನುಕೂಲ ಆಗುವ ಕೆಲಸವಾಗಿದೆ.

ಎರಡನೆಯದು, ಮಾನ್ಯ ಸದಸ್ಯರಾದ ಶ್ರೀ ಅಡವಿಯಪ್ಪನವರು ಕೆಲವು ಕಡೆ ಬಾವಿ ತೋಡುವಾಗ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿದರು. ಅವರು ನೀಡಿದ ಮತ್ತೊಂದು ಸಲಹೆಯಾದ ವಿಫಲವಾದ ಬಾವಿಗಳಿಂದ ಪೈಪುಗಳನ್ನು ತೆಗೆಯುವ ಬಗ್ಗೆ ನಾವು ಈಗಾಗಲೇ ವಿಚಾರ ಮಾಡಿದ್ದೇವೆ. ಅವರು ಹೇಳಿದ ತಕ್ಷಣ ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟು ಪ್ರಯತ್ನಿಸಿ ನೋಡಿದೆವು. ಆದರೆ ತೋಡು ಬಾವಿಗಳಲ್ಲಿ ಬಹಳ ಒತ್ತಡ ಇರುತ್ತದೆ ಮತ್ತು ಪೈಪುಗಳು ತುಂಬಾ ಒಳಗಡೆ ಹೋಗಿರುತ್ತವೆ. ೧೦..೧೨ ಅಡಿ ಆಳದಷ್ಟು ಇರುವ ಪೈಪ್‌ನ್ನು ತೆಗೆಯಬಹುದೇ ಹೊರತು, ಇನ್ನೂ ಕೆಳಗಡೆ ಇರುವ ಪೈಪ್‌ನ್ನು ತೆಗೆಯಬೇಕಾದರೆ ಪವರ್ ಇಂಜಿನ್ ಉಪಯೋಗಿಸಿ ಲಿಫ್ಟ್ ಮಾಡಬೇಕಾಗುತ್ತದೆ. ಹಾಗೆ ಅವುಗಳನ್ನು ಎತ್ತುವಾಗ ಪೈಪು ಸೊಟ್ಟು ಪಟ್ಟೆಯಾಗಿ ಮೇಲಕ್ಕೆ ಬರುತ್ತದೆ. ಹೀಗೆ ಪ್ರಯಾಸದಿಂದ ಪೈಪುಗಳನ್ನು ಹೊರ ತೆಗೆಯುವ ಖರ್ಚನ್ನು ಲೆಕ್ಕ ಹಾಕಿದರೆ, ಅದನ್ನು ಹಾಗೆಯೇ ಬಿಡುವುದೇ ಸೂಕ್ತವೆನಿಸುತ್ತದೆ. ಏಕೆಂದರೆ ಹೀಗೆ ತೆಗೆದ ಪೈಪುಗಳನ್ನು ಯಾವ ಉಪಯೋಗಕ್ಕೂ ಬಳಸಿಕೊಳ್ಳಲಾಗದೆ ಗುಜರಿಗೆ ಹಾಕಬೇಕಾಗುತ್ತದೆ, ಈ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಕೆಲವರು ಬಾವಿಗಳನ್ನು ತೋಡುವಾಗ ೧೫–೨೦ ಅಡಿ ಮಾತ್ರ ತೊಡುತ್ತಾರೆ ಎಂದು ಆಪಾದನೆ ಮಾಡಿದ್ದಾರೆ. ನಾವು ಈಗ ಹೊಸದಾಗಿ ಆದೇಶವನ್ನು ಕೊಟ್ಟಿದ್ದೇವೆ; ಮತ್ತು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದೇವೆ ಮತ್ತು ನನ್ನ ಸನ್ಮಾನ್ಯ ಶಾಸಕ ಮಿತ್ರರಿಗೂ ಹೇಳಿದ್ದೇನೆ. ಅದೇನೆಂದರೆ ಕೊಳವೆ ಬಾವಿಗಳನ್ನು ತೋಡುವ ಹಂತದಲ್ಲಿ ಆಯಾಯ ಗ್ರಾಮದ ಪ್ರಮುಖರ ಮುಂದೆ ಕೊಳವೆ ಬಾವಿಗಳನ್ನು ಹಾಕಬೇಕು, ಅವರ ಎದುರಿಗೆ ಬಾವಿಯನ್ನು ತೊಡುವಾಗ ಎಷ್ಟು ಆಳ ಆಗಿದೆ, ಎಷ್ಟು ಪೈಪ್ ಹಾಕಿದೆ ಅಂತ ಮಹಜರು ಮಾಡಬೇಕು ಎಂದು. ಹೀಗಿದ್ದರೂ ಕೂಡ ಕೆಲವು ಕಡೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಡೆದಿರಬಹುದು, ಅಂತಹ ಯಾವುದಾದರೂ ಪ್ರಕರಣವನ್ನು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ನಾನು ಕೂಡಲೇ ಆಜ್ಞೆ ಮಾಡುತ್ತೇನೆ ಮತ್ತು ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ನೀಡಲು ಹಿಂದು ಮುಂದೆ ನೋಡುವುದಿಲ್ಲ ಎಂದು ಹೇಳಲು ಇಚ್ಛೆ ಪಡುತ್ತೇನೆ. ಶ್ರೀಮಾನ್ ಬಿ. ಎಸ್. ಎಡಿಯೂರಪ್ಪನವರು ಶಿಕಾರಿಪುರ ಮತ್ತು ಆನೇಕಲ್‌ನಲ್ಲಿ ನಡೆದ ದುರ್ವ್ಯವಹಾರಗಳ ಬಗ್ಗೆ ಹೇಳಿದ್ದಾರೆ. ಶಿಕಾರಿಪುರದ ಬಗ್ಗೆ ಮೇಲ್ನೋಟಕ್ಕೆ ಸಾಬೀತಾಗಿ ನನ್ನ ಮುಂದೆ ಬಂತು. ಇದಕ್ಕೆ ಉತ್ತರವಾಗಿ ಸಂಬಂಧಪಟ್ಟ ಮೂರು ಮಂದಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ ಮತ್ತು ಮುಂದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಜಾಗೃತ ಆಯೋಗದವರಿಗೆ ಕಳಿಸಿದ್ದೇವೆ, ಆನೇಕಲ್ ವಿಷಯದಲ್ಲಿ ಯಾವ ರೀತಿಯಲ್ಲೂ ದುರ್ವ್ಯವಹಾರ ಸಾಬೀತಾದ ವರದಿ ಬಂದಿಲ್ಲ, ಎಲ್ಲಾ ಆರೋಪಗಳೂ ಸಾಬೀತೂ ಆಗಿಲ್ಲವಾದ ಕಾರಣ ಏನೂ ಮಾಡಲೂ ಸಾಧ್ಯವಿಲ್ಲ. ಮತ್ತೆ ಸಾರ್ವಜನಿಕರು ಇದರಲ್ಲಿ ಸೇರಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ನಾನು ಹೇಳಿದ್ದು ತಾಲ್ಲೂಕು ಬೋರ್ಡ್ ಸದಸ್ಯರು,

ಶ್ರೀ ಅಬ್ದುಲ್ ನಜೀರ್ ಸಾಬ್.—ಅವರು ಖಾಸಗಿ ವ್ಯಕ್ತಿಗಳು, ನನಗೆ ಬಂದ ವರದಿಯಲ್ಲಿ ಅವರ ಬಗ್ಗೆ ಯಾವ ರೀತಿಯ ಸಾಕ್ಷ್ಯಾಧಾರಗಳು ಇಲ್ಲದಿದ್ದರೆ, ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಅಸಾಧ್ಯವಾಗಿದೆ,

ಶ್ರೀ ಬಿ. ಎಸ್. ಎಡಿಯೂರಪ್ಪ.—ತಾಲ್ಲೂಕು ಬೋರ್ಡ್ ಸದಸ್ಯರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆಂದು ಸಿ.ಒ.ಡಿ. ವರದಿ ಹೇಳುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದು ಮೇಲ್ನೋಟಕ್ಕೆ ಸಾಬೀತಾಗಿದೆ. ಪೂರ್ಣ ವಿಚಾರಣೆಗೆ ಹಾಕಿದ್ದೇವೆ. ಖಾಸಗಿ ವ್ಯಕ್ತಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಬರುವುದಿಲ್ಲ. ನಾನು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬಹುದು. ಜಾಗೃತ ಆಯೋಗದ ತನಿಖೆಯಿಂದ ಖಾಸಗಿ ವ್ಯಕ್ತಿಗಳಿಂದ ದುರುಪಯೋಗ ಆಗಿದೆಯೆಂದು ಸಾಬೀತಾದರೆ ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಈ ಸಭೆಯಲ್ಲಿ ನಾನು ಭರವಸೆ ಕೊಡುತ್ತೇನೆ. ಇದೇ ಸಮಯದಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ ಸಾಧಾರಣವಾದ ಆಪಾದನೆಗಳನ್ನು ಯಾರೂ ಮಾಡುವುದು ಬೇಡ. ನಿರ್ದಿಷ್ಟವಾದ ಆಪಾದನೆಗಳನ್ನು ಮಾಡೋಣ, ನಾನು ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ ಕೊಳವೆ ಬಾವಿಗಳು ಆಗುತ್ತವೆ ಅಲ್ಲಿ ಸಾರ್ವಜನಿಕರ ಎದುರಿಗೇ ಪ್ರತಿಯೊಂದರ ಅಳತೆ ಆಗಬೇಕು. ಈ ಬಗ್ಗೆ ತಾವು ಶಾಸಕರು ಕೂಡ ಸಹಕರಿಸಬೇಕು ಮತ್ತು ಸಾರ್ವಜನಿಕರಲ್ಲಿ ಈ ಬಗ್ಗೆ ಅಭಿಪ್ರಾಯವನು ರೂಢಿಸಬೇಕು.

ಇನ್ನು, ಈ ಕೊಳವೆ ಬಾವಿಗಳ ವೈಫಲ್ಯದ ಬಗ್ಗೆ ಮಾತನಾಡುವುದಾದರೆ ಒಂದು ವಿಷಯವನ್ನು ನಾನು ಸಂತೋಷದಿಂದಲೇ ಹೇಳಬೇಕಾಗುತ್ತದೆ. ೧೯೮೧–೮೨ರಲ್ಲಿ ನೂರಕ್ಕೆ ಇಪ್ಪತ್ತಕ್ಕೂ ಹೆಚ್ಚು ಬಾವಿಗಳು ವೈಫಲ್ಯವಾಗುತ್ತಿದ್ದವು. ಆದರೆ ಇವತ್ತು ಈ ಸಂಖ್ಯೆಯನ್ನು ೧೭ಕ್ಕೆ ಇಳಿಸಿದ್ದೇವೆ. ಇದೇನೂ ಮಾಯಮಂತ್ರದಿಂದ ಮಾಡಿಲ್ಲ. ಕೆನಡಾದಿಂದ ಬಂದಿರುವ ಮೂರು ಯಂತ್ರಗಳು ನಮ್ಮ ಮುಂದೆ ಇವೆ. ಅವುಗಳನ್ನು ಎಲ್ಲೆಲ್ಲಿ ಉಪಯೋಗಿಸುತ್ತೇವೋ, ಅಲ್ಲಿ ನೂರಕ್ಕೆ ತೊಂಬತ್ತೆಂಟರಷ್ಟು ವೈಫಲ್ಯದ ಪ್ರಮಾಣ ಇಳಿದಿದೆ. ಈ ಯಂತ್ರಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕು, ಅದಕ್ಕೆ ತಾಂತ್ರಿಕ ಜ್ಞಾನ ಹೆಚ್ಚಾಗಬೇಕು. ಈ ಯಂತ್ರಗಳನ್ನು ಕೊಟ್ಟನಂತರ ಅವುಗಳ ಬಗ್ಗೆ ಟ್ರೈನಿಂಗ್ ಕೊಡುವುದಕ್ಕೆ ಮೂರು ಜನರು ಮಾತ್ರ ಇದ್ದಾರೆ. ಈ ತಂತ್ರಜ್ಞರ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಈ ವೈಫಲ್ಯವನ್ನು ಗಮನಿಸುವುದಾದರೆ ಶಿವಮೊಗ್ಗದಲ್ಲಿ ಶೇಕಡಾ ನಾಲ್ಕರಷ್ಟು ವೈಫಲ್ಯವನ್ನು ನೋಡಿ

ದರೆ, ಬೀದರ್ ಗುಲ್ಬರ್ಗಾದಲ್ಲಿ ಇದು ಶೇಕಡಾ ಇಪ್ಪತ್ತು-ಮೂವತ್ತರಷ್ಟು ಇರುವುದನ್ನು ನೋಡು ತ್ತೇವೆ. ಆದರೆ ಈಗ ಈ ವೈಫಲ್ಯದ ಪ್ರಮಾಣ ಸರಾಸರಿ ೧೭ಕ್ಕೆ ಇಳಿದಿದೆ. ಈ ವೈಫಲ್ಯಕ್ಕೆ ಕೆಲವೊಂದು ಕಾರಣಗಳಿವೆ. ನಮ್ಮಲ್ಲಿರತಕ್ಕಂಥ ತಂತ್ರಜ್ಞಾನ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಬರತಕ್ಕಂಥವರು ಎರಡು ಜಿಲ್ಲೆಗೆ, ಮೂರು ಜಿಲ್ಲೆಗೆ ಒಬ್ಬರಂತೆ ಸಿಗುವ ವ್ಯವಸ್ಥೆಯೂ ಇಲ್ಲ. ಈ ದೃಷ್ಟಿಯಿಂದ ಈ ಇಲಾಖೆಯ ಬಗ್ಗೆ ಮುಕ್ತ ಮನಸ್ಸಿನಿಂದ ಜನತೆಯನ್ನು ಎಚ್ಚರಗೊಳಿ ಸುವ ಪ್ರಯತ್ನ ಮಾಡುವ ಸಹಕಾರವನ್ನು ಕೊಡುವುದಾದರೆ ಅಲ್ಲಿ ಇಲ್ಲಿ ನಡೆಯತಕ್ಕಂಥ ಅಲ್ಪಸ್ವಲ್ಪ ದುರುಪಯೋಗವನ್ನು ಖಂಡಿತವಾಗಿಯೂ ತಡೆಗಟ್ಟಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಯೋಜನೆಯ ಅನುಷ್ಠಾನ ಎರಡು ವಲಯಗಳಲ್ಲಿ ಆಗುತ್ತದೆ. ಒಂದು ರಾಜ್ಯ ವಲಯ ಇನ್ನೊಂದು ಕೇಂದ್ರ ವಲಯ. ರಾಜ್ಯ ವಲಯದಲ್ಲಿ ರಾಜ್ಯದ ಹಣವನ್ನು ಹಾಕಿ ಖರ್ಚು ಮಾಡುತ್ತೇವೆ. ಕೇಂದ್ರ ವಲಯದಲ್ಲಿ ಕೇಂದ್ರದಿಂದ ಬರತಕ್ಕ ಹಣವನ್ನು ಹಾಕಿ ಅದರ ಜೊತೆಗೆ ನಮ್ಮ ಸಹಾಯವನ್ನೂ ಕೂಡಿಸಿ ಯೋಜನಾ ಬದ್ಧವಾಗಿ ಇದನ್ನು ಮಾಡಲಾಗುತ್ತದೆ. ಈ ಯೋಜನೆಗಳನ್ನು ಮಾಡುವಾಗ ಇವುಗಳನ್ನು ಬಿಟ್ಟು ಬೇರೆ ಯೋಜನೆಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲ, ಹೊಸದಾಗಿ ಯೋಜನೆಗಳನ್ನು ಮಾಡುವಾಗ ಹೆಚ್ಚು ಹಣವನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜಿನ ಸಮಸ್ಯೆಗಾಗಿ ಒದಗಿಸಬೇಕು ಅಂತ ಇದೆ, ಇದನ್ನು ನಾವು ಮಾಡುತ್ತೇವೆ. ಇದರಲ್ಲಿ ಎರಡು ಕೆಲಸಗಳಿವೆ. ಒಂದು ರಾಜ್ಯ ವಲಯ, ಇನ್ನೊಂದು ಸಹಕಾರ ವಲಯ ಈ ಎರಡು ಕಾರ್ಯಗಳನ್ನು ಈ ಕಾರ್ಯ ಕ್ರಮದಲ್ಲಿ ಸೇರಿಸಲಾಗಿದೆ. ಎನ್ ಆರ್ ಇ ಪಿ ಯಲ್ಲಿ ಈ ಕಾರ್ಯವನ್ನು ಸೇರಿಸಬಾರದೇ ಎನ್ನುವ ಪ್ರಶ್ನೆ ಇದೆ. ಬಹುಶಃ ಈ ಕಾರ್ಯಕ್ರಮದಲ್ಲೇ ಸ್ವಲ್ಪ ಸಹಾಯ ಪಡೆದು, ಈಗೇನು ೪೦-೬೦ರಷ್ಟು ರೇಷಿಯೋ ಇದೆ, ಅದನ್ನು ಉಳಿಸಿಕೊಂಡು ಒಂದು ಟ್ಯಾಂಕ್‌ನ್ನು ಕಟ್ಟಿಸಬಹುದು. ಇಡೀ ಜಿಲ್ಲೆಗೆ ಈ ರೇಷಿಯೋ ೪೦-೬೦ ಇರುವುದರಿಂದ ನಮಗೆ ಏನೂ ತೊಂದರೆ ಬರುವುದಿಲ್ಲ. ಈ ದೃಷ್ಟಿಯಿಂದ ಇದರ ಉಪಯೋಗವನ್ನು ಪಡೆಯಬೇಕು. ಆಮೇಲೆ ಸಬ್‌ಪ್ಲಾನ್‌ಗೆ ಪ್ರತಿ ಜಿಲ್ಲೆಗೆ ೪೦-೫೦ ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದೇವೆ. ನಾನು ಎಲ್ಲೆಲ್ಲಿ ಹೋಗುತ್ತೇನೋ ಅಲ್ಲೆಲ್ಲಾ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. ಸಬ್‌ಪ್ಲಾನ್‌ನಲ್ಲಿ ಬರತಕ್ಕಂಥ ಹಣವನ್ನು ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಉಪಯೋಗಿಸಿ ಎಂದು ಹೇಳಿದ್ದೇನೆ. ಒಂದು ಸಾವಿರ ಪಂಪುಸೆಟ್ಟ್‌ಗಳು ಇರುವ ಹಳ್ಳಿಗಳು ಇದ್ದರೆ, ಅಲ್ಲಿ ಪಂಪು ಹಾಕಿ ಹತ್ತಾರು ನಲ್ಲಿಗಳನ್ನು ಹಾಕಿ ಒಂದು ಮಿನಿ ಟ್ಯಾಂಕ್‌ನ್ನು ಕಟ್ಟಿಸಿ ಕೊಡಬಹುದು. ಇದನ್ನು ಸಬ್‌ಪ್ಲಾನ್‌ನಲ್ಲಿ ಮಾಡಿ ಎಂದು ಅವರಿಗೆ ನಾನು ಆದೇಶವನ್ನು ಕೊಟ್ಟಿದ್ದೇನೆ.

ಈಗ ಏನಾಗಿದೆ ಎಂದರೆ ಈ ಸಬ್ ಪ್ಲಾನ್‌ಗಾಗಿ ಇಬ್ಬರೂ ಏನು ಇದೆ ಆದರ ಬಗ್ಗೆ ಹೇಳಬೇಕಾದರೆ ಅದನ್ನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗೆ ಡಿಸ್ಕ್ರಿಷನರಿ ಅಮೌಂಟ್ ಅಂತ ಕೊಟ್ಟಿದ್ದೇವೆ. ಅದನ್ನು ಹೇಗೆ ಉಪಯೋಗಿಸಬೇಕು ಎನುವುದು ತಮಗೆ ಬಿಟ್ಟದ್ದು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ತಾವು ಇಲ್ಲಿ ಅವರಿಗೆ ಈ ರೀತಿಯಾಗಿ ಡೈರಕ್ಷನ್ ಕೊಟ್ಟಿ ದ್ದೇನೆ ಅಂತ ಹೇಳುತ್ತೀರಿ. ಅವರು ಕೇಳಿದರೆ ಏನು ಹೇಳುತ್ತಾರೆ ಎಂದರೆ ಯಾವ ಬಜೆಟೆಡ್ ವರ್ಕ್ಸ್ ಆಗಲಿ ಅಥವಾ ಯೂಷುಯಲ್ ವರ್ಕ್ಸ್ ಆಗಲಿ ಈ ಪ್ಲಾನ್‌ನಲ್ಲಿ ತೆಗೆದುಕೊಳ್ಳಬಾರದು, ನಾನ್ ಪ್ಲಾನ್ ವರ್ಕ್ಸ್ ಏನು ಇದೆ ಅದನ್ನು ಮಾತ್ರ ಇಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಆದುದರಿಂದ ನಾನ್ ಪ್ಲಾನ್‌ಗೆ ಕೊಡತಕ್ಕಂಥಾ ಹಣವನ್ನು ಯಾವ್ಯಾವ ಕೆಲಸಕ್ಕೆ ಉಪಯೋಗಿಸಬೇಕೂ ವನ್ನುವುದರ ಬಗ್ಗೆ ಏನಾದರೂ ಆದೇಶ ಕೊಟ್ಟಿದ್ದೀರಾ ? ಈ ಮಿನಿ ವಾಟರ್ ಸಪ್ಲೈ ಕೆಲಸ ನಾನ್ ಪ್ಲಾನಿಗೆ ಸೇರಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಒಂದು ರೀತಿಯಲ್ಲಿ ಮಿನಿ ವಾಟರ್ ಸಪ್ಲೈ ಅನ್ನುವುದು ನಾನ್ ಪ್ಲಾನ್‌ಗೆ ಸೇರಿದರೂ ಕೂಡ ಇದನ್ನು ಆ ಯೋಜನೆಗೆ ಸೇರಿಸಿಲ್ಲ. ಇದನ್ನು ಕೆಲವು ಜಿಲ್ಲೆ ಯವರು ತೆಗೆದುಕೊಂಡು ಕೆಲಸ ಮಾಡಿಸಿದ್ದಾರೆ, ಕೋಲಾರ ಜಿಲ್ಲೆಯವರು ಮತ್ತು ಚಿತ್ರದುರ್ಗ ಜಿಲ್ಲೆಯವರು ಈ ಹಣವನ್ನು ತೆಗೆದುಕೊಂಡು ಕೆಲಸ ಮಾಡಿಸಿದ್ದಾರೆ, ಇದರ ಬಗ್ಗೆ ಈಗಾಗಲೇ ಕೆಲಸ ನಡೆಯುತ್ತಾ ಇದೆ, ಎಲ್ಲಿ ಜನಗಳು ಇದನ್ನು ಉಪಯೋಗಿಸಿಕೊಂಡಿಲ್ಲವೋ ಅಲ್ಲಿ ಈ ಕೆಲಸವಾಗಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ ಗ್ರಾಮಾಂತರ ಪ್ರದೇಶಕ್ಕೆ ಈ ಯೋಜನೆಯಿಂದ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಂಡು ಆಯಾಯ ಕ್ಷೇತ್ರದ ಅಭಿವೃದ್ಧಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ, ಈ ವರ್ಷ ಈ ಯೋಜನೆ ಕೆಲಸ ಮುಗಿದು ಹೋಗಿದೆ ಮುಂದಿನ

ವರ್ಷಕ್ಕಾದರೂ ಕೂಡ ಈ ಸಬ್ ಪ್ಲಾನ್‌ನಲ್ಲಿ ಬರುವ ಹಣವನ್ನು ಹೆಚ್ಚಾಗಿ ನೀರಾವರಿಗೆ ಉಪಯೋಗ ಮಾಡುವ ಹಾಗೆ ಒಂದು ವ್ಯವಸ್ಥೆ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ. ಈ ಬಗ್ಗೆ ಎನ್. ಆರ್. ಇ. ಪಿ. ಯೋಜನೆಯೂ ಸಹ ಇದೆ. ಜೊತೆಗೆ ಈ ಮಿನಿ ವಾಟರ್ ಸಪ್ಲೈ ಸ್ಕೀಂ ಏನು ಇದೆ ಇದನ್ನೂ ಕೂಡ ಸಬ್ ಪ್ಲಾನ್‌ಗೆ ಸೇರಿಸಿ ಆಯಾಯ ತಾಲ್ಲೂಕಿನಲ್ಲಿರುವ ಅಭಿವೃದ್ಧಿ ಯೋಜನೆಗಳು ಏನು ಇದೆ ಇದುವರೆಗೆ ಆಗದೇ ಇರತಕ್ಕಂಥಾ ಕೆಲಸಗಳು ಏನು ಇವೆ ಅವನ್ನೂ ಸಹ ಮಾಡಿಸುವುದಕ್ಕೆ ಈ ಹಣವನ್ನು ಉಪಯೋಗಿಸಿ ಕೊಳ್ಳುವ ಹಾಗೆ ಮಾಡಿದರೆ ಅನುಕೂಲವಾಗುತ್ತದೆ ಅಲ್ಲದೆ ಬಹಳ ದಿವಸದಿಂದ ಆಗದೇ ಇರತಕ್ಕಂಥಾ ಕೆಲಸಗಳೂ ಸಹ ಆಗುತ್ತವೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ಅಭಿಪ್ರಾಯ ಏನು ಇದೆ ಅದನ್ನು ತಾಲ್ಲೂಕು ಮಟ್ಟದಲ್ಲಿ ಯೋಚನೆ ಮಾಡುವುದಕ್ಕೆ ಸಾಧ್ಯ ಇದೆ. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ಒಟ್ಟು ೨೨೧೫ ಕೆಲಸಗಳು ಇವೆ. ೧೯೮೦-೮೧ ಹಾಗೂ ೧೯೮೧-೮೨ರಲ್ಲಿ ಮುಗಿಸದೇ ಇರತಕ್ಕಂಥಾ ಕೆಲಸಗಳೂ ಇವೆ. ನಮಗೆ ಅದರ ಬಗ್ಗೆ ೭ ಕೋಟಿ ರೂಪಾಯಿ ಮಾತ್ರ ಲೆಕ್ಕಕ್ಕೆ ಸಿಕ್ಕುತ್ತದೆ. ಆದರೆ ನಮಗೆ ಬೇಕಾಗಿರತಕ್ಕಂಥಾ ೪೮ ಕೋಟಿ ರೂಪಾಯಿ. ಹೀಗೆ ಅನೇಕ ಕೆಲಸಗಳು ಈವೊತ್ತಿನ ದಿವಸ ಆಗಬೇಕಾಗಿದೆ. ಆದರೆ ಯಾವುದಕ್ಕೆ ಮೊದಲು ಆದ್ಯತೆ ಕೊಡಬೇಕೋ ಅದಕ್ಕೆ ಆದ್ಯತೆ ಕೊಟ್ಟು ಕೆಲಸ ಮಾಡಬೇಕು. ಈಗ ಕುಡಿಯುವ ನೀರಿನ ಯೋಜನೆ ಇದೆ ಕೆಲವೊಂದು ಕಡೆ ಜಿಲ್ಲಾ ಸಮಿತಿಗಳನ್ನು ಮಾಡಿದೆ ಇನ್ನು ಕೆಲವು ಕಡೆ ಜಿಲ್ಲಾ ಸಮಿತಿಗಳನ್ನು ಮಾಡಿಲ್ಲ. ಎಲ್ಲಿ ಜಿಲ್ಲಾ ಸಮಿತಿಗಳನ್ನು ಮಾಡಿದೆ ಅಲ್ಲಿ ಅವರು ಸರ್ಕಾರದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಆ ಕಾರ್ಯಕ್ರಮ ಇನ್ನೂ ಮುಟ್ಟಿಲ್ಲ. ಆದುದರಿಂದ ನಾನು ಮತ್ತೊಮ್ಮೆ ತಮಗೆ ಹೇಳಬಯಸುತ್ತೇನೆ. ಮುಂದಿನ ವರ್ಷವಾದರೂ ಕೂಡ ಸಬ್‌ಪ್ಲಾನ್‌ನಲ್ಲಿ ಇಟ್ಟಿರುವ ಹಣವನ್ನು ಮಿನಿವಾಟರ್ ಸಪ್ಲೈ ಸ್ಕೀಂಗೆ ಉಪಯೋಗಿಸಿಕೊಂಡರೆ ಈವೊತ್ತು ೫೦ ಆಗುವ ಬದಲು ಮುಂದಿನ ವರ್ಷ ೨ ಸಾವಿರ ಆಗುವುದಕ್ಕೆ ಸಾಧ್ಯತೆ ಇದೆ ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು, ಹೇಗೆ ಮಾಡಬೇಕು ಎನ್ನುವ ವಿಷಯ ತಮಗೆ ಬಿಟ್ಟಿದ್ದು. ಜಿಲ್ಲೆಯಲ್ಲಿ ಈ ನೀರಿಗೆ ಆದ್ಯತೆ ಕೊಡುವುದು ಬೇಡ ಬೇರೆ ಬಾಬಿಗೆ ಉಪಯೋಗಿಸೋಣ ಎಂದರೆ ಅದು ತಮಗೆ ಬಿಟ್ಟದ್ದು. ಇದರ ಮಧ್ಯೆ ನಾವು ಪ್ರವೇಶ ಮಾಡುವುದು ಬೇಡ, ನಾನು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಯಡಿಯೂರಪ್ಪ.—ಸ್ವಾಮಿ, ಫೆಯಿಲ್ಯೂರ್ ಬೋರ್‌ವೆಲ್‌ನಲ್ಲಿರುವ ಪೈಪ್‌ಗಳು ಏನು ಇವೆ ಅವು ತುಕ್ಕು ಹಿಡಿಯುತ್ತವೆಯಲ್ಲ ಅದನ್ನು ಎತ್ತಿದರೆ ಉಪಯೋಗ ಮಾಡಿಕೊಳ್ಳಬಹುದಲ್ಲಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಬಗ್ಗೆ ನನ್ನ ಇಲಾಖೆಗೆ ಒಂದು ಸಾರಿ ಇದನ್ನು ವಿಚಾರ ಮಾಡಿ ಎಂದು ಆದೇಶ ಕೊಟ್ಟೆ. ಇದಕ್ಕೆ ಉಪಯೋಗಿಸುವ ಕಾಂಪ್ರೆಸ್ಡ್ ಪೈಪ್ ಏನು ಇದೆ ಅದನ್ನು ೧೨ ಅಡಿ ಎತ್ತರದವರೆಗೆ ಎತ್ತಬಹುದು. ಅದಕ್ಕಿಂತಲೂ ಮೇಲುಗಡೆ ಎತ್ತಬೇಕಾದರೆ ೨೦ ಹಾರ್ಸ್ ಪವರ್‌ನಲ್ಲಿ ಪ್ರೆಷರ್ ಹಾಕಿ ಎತ್ತಬೇಕಾಗುತ್ತದೆ. ಹಾಗೆ ಒಂದು ವೇಳೆ ಎತ್ತಿದರೂ ಕೂಡ ಅದು ಮೇಲಕ್ಕೆ ಬಂದ ಮೇಲೆ ಉಂಡೆಯಾಗಿ ಬರುತ್ತದೆಯೋ ಹೊರತು ಅದು ನಂತರದ ಉಪಯೋಗಕ್ಕೂ ಬರುವುದಿಲ್ಲ. ಅಲ್ಲದೇ ಅದಕ್ಕೆ ಹೆಚ್ಚು ಹಣವೂ ಖರ್ಚಾಗುತ್ತದೆ.

ಶ್ರೀ ಯಡಿಯೂರಪ್ಪ.—ಇದಕ್ಕೆ ಬೇರೆ ಟೆಕ್ನಿಷಿಯನ್ಸ್ ಇದ್ದಾರೆ. ಅವರನ್ನು ಕರೆಸಿ ಎತ್ತಿಸಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಕಲಾಸಿಪಾಳ್ಯದಲ್ಲಿ ಒಬ್ಬ ಮೆಕ್ಯಾನಿಕ್ ಇದ್ದಾರೆ. ಇದನ್ನೇನಾದರೂ ಸುಲಭವಾಗಿ ತೆಗೆಯುವುದಕ್ಕಾದರೆ ಈ ಕೆಲಸ ಮಾಡಿಸಿ ಎಂದು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟೆ. ೧೦-೧೧ ರೂಪಾಯಿ ಆದರೂ ಪರವಾಗಿಲ್ಲ ಪರೀಕ್ಷೆ ಮಾಡಿಸಿ ನೋಡಿ ಎಂದು ಹೇಳಿದೆ. ಅದರಿಂದ ಏನೂ ಪ್ರಯೋಜನವಾಗಲಿಲ್ಲ.

ಇನ್ನು ಎರಡನೆಯದು ಏನೆಂದರೆ ಬಹಳ ಪ್ರಮುಖವಾಗಿರತಕ್ಕಂಥಾದ್ದು ಗ್ರಾಮೀಣ ಉದ್ಯೋಗದ ಯೋಜನೆ. ಇದರ ಬಗ್ಗೆ ತಾವು ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ದುರುಪಯೋಗವಾಗಿದೆ ಅಂತ ಹೇಳಿದ್ದೀರಿ. ಈ ಬಗ್ಗೆ ದೂರುಗಳೂ ಸಹ ಬಂದಿವೆ. ಇದರ ಬಗ್ಗೆ ಬಂದಿರುವ

ಪತ್ರಗಳನ್ನೂ ಸಹ ಓದಿದ್ದೇನೆ. ಆ ದೂರನ್ನು ವಿಚಾರಣೆ ಮಾಡಬೇಕೆಂದು ನಾನು ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಇದರಲ್ಲಿ ಏನಾಗಿದೆ ಎಂದರೆ ಹೋದವರ್ಷ ೧೦೦ಕ್ಕೆ ೬೦ರಷ್ಟು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡದ ಬಗ್ಗೆ ಕೆಲಸ ನಡೆಯಲಿಲ್ಲ ಅಲ್ಲಿಯ ಗ್ರಾಮಾಂತರ ಜನರು ತಮ್ಮ ಒಂದು ಭಾಗದ ಹಣವನ್ನು ಕೊಡದೇ ಇರುವುದರಿಂದ ಆ ಕಟ್ಟಡ ಪೂರ್ಣವಾಗಿರುವುದಿಲ್ಲ. ಅದು ದುರುಪಯೋಗವಾದಂತೆ ಆಗುವುದಿಲ್ಲ. ಒಂದು ರಸ್ತೆ ಕೆಲಸವಾಗಲಿ, ಒಂದು ಆಸ್ಪತ್ರೆ ಕೆಲಸವೇ ಆಗಲಿ ಕೆಲಸ ಮಾಡಬೇಕಾದರೆ ಗ್ರಾಮಾಂತರ ಜನರ ಸಹಕಾರ ಬೇಕು. ರಾಯಚೂರಿನಲ್ಲಿ ಯಾವುದೋ ಒಂದು ಕೆಲಸದಲ್ಲಿ ದುರುಪಯೋಗವಾಗಿದೆ ಅಂತ ಹೇಳಿದಿರಿ, ಅದು ವಿಚಾರಣೆ ಮಾಡಿದೆ ಅದರ ಬಗ್ಗೆ ಸಾಬೀತಾಗಿದೆ. ಶ್ರೀ ಬಂಗೇರಾ ಅವರು ಮಾತನಾಡುವಾಗ ಯಾವ ಒಂದು ಕೆಲಸದಲ್ಲಿ ದುರುಪಯೋಗವಾಗಿದೆ ಎಂದು ಹೇಳಿದ ಮೇಲೆ ಅದನ್ನು ಪರಿಶೀಲನೆ ಮಾಡುವುದಕ್ಕೆ ನಾನು ಆದೇಶ ಕೊಟ್ಟಿದ್ದೇನೆ. ಈ ಸದನ ಮುಗಿಯುವುದರೊಳಗೆ ತಿಳಿಸಬೇಕು ಎಂದು ಆದೇಶ ಕೊಟ್ಟಿದ್ದೇವೆ. ಬಡ್ಜೆಟೆಡ್ ಪ್ರಾವಿಷನ್ ಹೋದ ವರ್ಷ ೧೩ ಕೋಟಿ ರೂಪಾಯಿ ಎಂದು ಒಂದು ಅಂದಾಜು ಮಾಡಿತ್ತು, ಅದು ಈಗ ೨೧ ಕೋಟಿ ರೂಪಾಯಿಗೂ ಮೀರಿದೆ. ಇನ್ನೊಂದು ವಿಷಯ ಏನೆಂದರೆ ಎನ್.ಆರ್.ಇ.ಪಿ. ನಲ್ಲಿ ಕೆಲಸ ಮಾಡಬೇಕಾದರೆ ತಾಲ್ಲೂಕು ಲೆವಲ್‌ನಲ್ಲಿ ಕೆಲಸ ಮಾಡಬೇಕಾದರೆ ಇದಕ್ಕೆ ಹಣವನ್ನು ಕೊಡತಕ್ಕಂಥಾವರು ಕೇಂದ್ರ ಸರ್ಕಾರದವರು. ಆದುದರಿಂದ ಇದಕ್ಕೆ ಪ್ಲಾನ್ ಮಾಡಬೇಕಾದರೆ ಮೊದಲು ತಾಲ್ಲೂಕು ಲೆವಲ್ ನಲ್ಲಿ ಪ್ಲಾನ್ ಆಗಿ ಜಿಲ್ಲಾ ಲೆವಲ್‌ಗೆ ಬರಬೇಕು, ಆನಂತರ ಜಿಲ್ಲಾ ಮಟ್ಟದಿಂದ ಸ್ಕ್ರೀನ್ ಮಾಡಿ ಸ್ಟೇಟ್ ಮಟ್ಟಕ್ಕೆ ಬರುತ್ತದೆ. ಆವಾಗ ರಾಜ್ಯಮಟ್ಟದಲ್ಲಿ ಇದನ್ನ ಸ್ಕ್ರೀನ್ ಮಾಡಬೇಕಾದರೆ, ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕಾದರೆ ಇದಕ್ಕೆ ಸಂಬಂಧಪಟ್ಟ ಕೇಂದ್ರದ ಅಧಿಕಾರಿಗಳೂ ಇರುತ್ತಾರೆ ಆವಾಗ ನಾವು ಅವರೂ ಕೂತುಕೊಂಡು ಅಪ್ರೂವ್ ಮಾಡಬೇಕಾಗುತ್ತದೆ. ಅನಂತರ ಅಲ್ಲಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಪ್ರಕಾರವಾಗಿ ಈ ವರ್ಷ ಒಟ್ಟು ೧೯ ಕೋಟಿ ರೂಪಾಯಿಗಳ ಯೋಜನೆ ಹಾಕಿಕೊಂಡಿದ್ದೇವೆ, ಆದರ ಬಗ್ಗೆ ಕೆಲಸ ಮಾಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ.

ಇನ್ನೊಂದು ಹೊಸ ಸಂಗತಿ ಏನೆಂದರೆ ಈ ಕೆರೆಗಳ ಹೂಳು ತೆಗೆಸುವ ಕಾರ್ಯವನ್ನೂ ಕೂಡ ಎನ್. ಆರ್.ಇ.ಪಿ. ಯೋಜನೆಯಲ್ಲಿ ತೆಗೆದುಕೊಳ್ಳುವ ಹಾಗೆ ನಾವು ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಅದನ್ನು ಮಾಡಿಸತಕ್ಕಂಥಾದ್ದು ಆದರ ಬಗ್ಗೆ ಯಾವ್ಯಾವ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನತಕ್ಕಂಥಾದ್ದು ತಮಗೆ ಬಿಟ್ಟಿದ್ದೇನೆ. ಕೆಲವು ಕಡೆಗಳಲ್ಲಿ ಕೆಲಸ ನಿಧಾನವಾಗಿದೆ ಅದಕ್ಕೆ ಕಾರಣ ಏನು ಎಂದರೆ ಒಂದು ಸ್ಕೂಲ್ ಬಿಲ್ಡಿಂಗ್ ಕಟ್ಟಬೇಕಾದರೆ ಅದಕ್ಕೆ ನಮ್ಮ ಪಾಲಿನ ಹಣ ೧೨ ಸಾವಿರ ರೂಪಾಯಿ ಏನು ಇದೆ ಅದನ್ನು ನಾವು ಕೊಟ್ಟಿದ್ದೇವೆ ಆದರೆ ನಾಲ್ಕನೇ ಒಂದು ಭಾಗ ಹಣ ಗ್ರಾಮಾಂತರ ಪ್ರದೇಶದ ಜನರು ಏನು ಕೊಡಬೇಕೋ ಅದನ್ನು ಕೊಡದೇ ಇರುವುದರಿಂದ ಆ ಕೆಲಸ ಪೂರ್ಣವಾಗಿಲ್ಲ. ಇನ್ನೊಂದು ಕಡೆ ಏನಾಗಿದೆ ಎಂದರೆ ತಾಲ್ಲೂಕು ಬೋರ್ಡ್ ರಸ್ತೆಗಳನ್ನು ಮಾಡಬೇಕಾಗಿದ್ದರೆ, ಅದಕ್ಕೆ ಬೇಕಾದ ಜಲ್ಲಿ ಒದಗಿಸಿಕೊಟ್ಟಿದ್ದೇವೆ, ಆದರೆ ಅದನ್ನು ಕನ್ಸಾಲಿಡೇಷನ್ ಮಾಡಲು ಇನ್ನೂ ಆಗಿಲ್ಲ ಕಾರಣ ಏನು ಎಂದರೆ ನಮ್ಮ ಇಲಾಖೆಯಲ್ಲಿ ರೋಲರ್ ಇಲ್ಲ, ಪಿ.ಡಬ್ಲ್ಯು.ಡಿ. ಯವರು ಕೊಡಬೇಕಾಗಿದೆ. ಅವರು ಕೊಟ್ಟಾಗ ನಾವು ಆ ರಸ್ತೆ ಕೆಲಸ ಪೂರ್ಣಗೊಳಿಸಬೇಕು. ಆದರಿಂದ ಅಂತಹ ಕೆಲಸಗಳು ಸ್ಥಗಿತವಾಗಿದೆ. ಈ ಸಂದರ್ಭದಲ್ಲಿ ತಮಗೆ ಒಂದು ವಿಷಯವನ್ನು ತಿಳಿಸಬಯಸುತ್ತೇನೆ. ಅದೇನೆಂದರೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಒಂದು ಆದೇಶವನ್ನು ಕೊಟ್ಟಿದ್ದೇನೆ. ಅದೇನೆಂದರೆ ಈ ವರ್ಷದ ಕೆಲಸಗಳು ಯಾವ್ಯಾವುದು ಆಗಬೇಕು ಅದನ್ನು ವರ್ಷವೇ ಮುಗಿಸಬೇಕು, ಮುಂದಿನ ವರ್ಷ ಎಂದು ತಳ್ಳಿ ಹಾಕುವುದು ಬೇಡ ಎಂದು.

ಇನ್ನು ಶ್ರೀಮಾನ್ ಪುಟ್ಟಸ್ವಾಮಿಯವರು ಒಂದು ಮಾತು ಹೇಳಿದರು. ಅದೇನೆಂದರೆ ಸಂಬಂಧಪಟ್ಟ ಇಲಾಖೆಯವರು ಯಾವುದಾದರೂ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಆ ಕೆಲಸಕ್ಕೆ ಸ್ಯಾಂಕ್ಷನ್ ಆಗಿದ್ದರೂ ಕೂಡ ನಮಗೆ ಸ್ಟೇಟ್‌ಮಟ್ಟದಿಂದ ಇನ್ನೂ ಬಂದಿಲ್ಲಾ, ಅವರು ನಮಗೆ ಇನ್ನೂ ಅನುಮತಿ ಕೊಟ್ಟಿಲ್ಲ ಎಂದು ಹೇಳಿ ತಡಮಾಡುತ್ತಿದ್ದಾರೆ ಎಂದು. ಈ ಬಗ್ಗೆ ಹೇಳಬೇಕಾದರೆ ಇಲ್ಲಿ ನಾವು ಏನು ಸ್ಯಾಂಕ್ಷನ್ ಮಾಡಿದ್ದೇವೋ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವ ಹಾಗೆ ಅವರಿಗೆ ಫೋನ್ ಮುಖಾಂತರ ಆದೇಶ ಕೊಟ್ಟಿದ್ದೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಬಹಳ ಜನ ಮಿತ್ರರು ಹೇಳಿದಹಾಗೆ ಕಟ್ಟಡಗಳು ಬೇಕು ಎನ್ನುವಂಥ ಒತ್ತಾಯ ಇದ್ದುದರಿಂದ ಕಟ್ಟಡಗಳನ್ನು ನಿರ್ಮಾಣ ಮಾಡಿ ತೊಂದರೆಗೊಳಗಾಗಿರುವುದು ನಿಜ. ದೇಶದಲ್ಲಿ ಅಭಾವ ಪರಿಸ್ಥಿತಿ ಇದ್ದುದರಿಂದ ಇಂಥ ಒಂದು ಆಜ್ಞೆಯನ್ನು ನಾವು ಹೊರಡಿಸಿದ್ದೇವೆ. ಉದ್ಯೋಗಗಳನ್ನು ಕೊಡತಕ್ಕ ಕಾರ್ಯಕ್ರಮಗಲೀ. ಕಟ್ಟಡಗಳನ್ನು ಕಟ್ಟತಕ್ಕ ಕಾರ್ಯವಾಗಲೀ, ಹೂಳು ತೆಗೆಯತಕ್ಕ ಕಾರ್ಯವಾಗಲೀ ಇಂಥ ಕಾರ್ಯಗಳನ್ನು ನಾವು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಮಳೆಯ ಅಭಾವ ಕಡಿಮೆ ಇರತಕ್ಕ ಪ್ರದೇಶಗಳಲ್ಲಿ, ಆಯಾ ಜಿಲ್ಲೆಯಲ್ಲಿ ೪೦ : ೬೦ ರೇಷಿಯೋ ವನ್ನು ಉಳಿಸಿ ಕೊಂಡು ಕೆಲಸ ಮಾಡಬೇಕು ಎನ್ನುವಂಥ ಆದೇಶವನ್ನು ನಾನು ಶೀಘ್ರದಲ್ಲಿಯೇ ಕೊಡುತ್ತೇನೆ ಎಂದು ಸಭೆಯಲ್ಲಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸ ಬಯಸುತ್ತೇನೆ,

ಮತ್ತೆ ಐ.ಆರ್.ಡಿ.ಪಿ. ಯೋಜನೆ ಏನಿದೆ ಇದು ಸಮಗ್ರ ಗ್ರಾಮೀಣ ಯೋಜನೆ. ಇದು ದೇಶದಲ್ಲಿರುವ ಬಡವರನ್ನು ಮೇಲೆತ್ತತಕ್ಕ ಕಾರ್ಯಕ್ರಮ ದೇಶದಲ್ಲಿರುವ ಬಡವರನ್ನೆಲ್ಲಾ ಅವರ ಜೀವನವನ್ನು ಸಹಾ ಮಾಡತಕ್ಕ ಕಾರ್ಯಕ್ರಮ ಇದೆಂದು ನಾನು ಹೇಳುವುದಿಲ್ಲ. ೧೯೭೮ ರಲ್ಲಿ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಈ ಒಂದು ಯೋಜನೆ ಯನ್ನು ಜಾರಿಗೆ ತಂದರು. ಈ ಯೋಜನೆಯಡಿಯಲ್ಲಿ ಒಂದು ಬ್ಲಾಕನ್ನು ಆಧಾರವಾಗಿಟ್ಟುಕೊಂಡು ಅದರಲ್ಲಿ ಸುಮಾರು ೧೫ ಸಾವಿರ ಸಂಸಾರಗಳಿಗೆ ಈ ಯೋಜನೆಯ ಫಲವನ್ನು ಕೊಡಬೇಕು ಎಂದು ಇದನ್ನು ಪ್ರಾರಂಭ ಮಾಡಿದರು. ಈ ಬಾಕ್‌ನಲ್ಲಿ ಯಾರು ಬಡತನದ ರೇಖೆಯ ಕೆಳಗೆ ಇದ್ದರೂ ಅಂಥವರನ್ನು ಗುರುತಿಸಿ ಮೇಲೆತ್ತತಕ್ಕ ದೃಷ್ಟಿಯಿಂದ ಇದನ್ನು ಪ್ರಾರಂಭ ಮಾಡಿದರು. ನಂತರ ೧೯೮೦ ರಲ್ಲಿ ಅಂದಿನ ಸರ್ಕಾರ ಮೂರು ಸಾವಿರ ಸಂಸಾರಗಳಿಗೆ ಈ ಯೋಜನೆಯ ಫಲವನ್ನು ಕೊಡಬೇಕೆಂದು ಹೇಳಿ ಇದ್ದ ಸಾವಿರ ಸಂಖ್ಯೆಯನ್ನು ೬೦೦ ಕ್ಕೆ ಇಳಿಸಿದರು. ಈ ರೀತಿಯಲ್ಲಿ ಕೆಲಸ ಮಾಡುವುದಾದರೆ ಬಡವರನ್ನು ಮೇಲೆತ್ತತಕ್ಕ ಕಾರ್ಯಕ್ರಮವನ್ನು ಇನ್ನೂ ೧೫-೨೦ ವರ್ಷಗಳವರೆಗೂ ಮುಂದುವರಿಸಬೇಕಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರ ಈ ಯೋಜನೆಯಡಿಯಲ್ಲಿ ಮೂರು ಸಾವಿರ ಜನರನ್ನು ಒಂದು ವರ್ಷದಲ್ಲಿ ಅಳವಡಿಸಿ ಬಡತನದ ರೇಖೆಯಿಂದ ಮೇಲೆತ್ತಬೇಕು. ಹಿಂದಿನ ಸರ್ಕಾರದವರು ಇಳಿಸಿದ ಸಂಖ್ಯೆಯನ್ನು ಮೂರು ಸಾವಿರಕ್ಕೇರಿಸಬೇಕು ಎಂದು ಕೇಂದ್ರವನ್ನು ಒತ್ತಾಯ ಮಾಡುತ್ತೇವೆ. ಕೇದ್ರದವರು ಇದಕ್ಕೆ ಒಪ್ಪಿ ನಮಗೆ ಹಣವನ್ನು ಕೊಡುವುದಾದರೆ ಮೂರು ಸಾವಿರ ಜನರನ್ನು ಒಂದು ವರ್ಷದಲ್ಲಿ ಮೇಲತ್ತತಕ್ಕ ಕೆಲಸ ವನ್ನು ನಾವು ಮಾಡಬಹುದಾಗಿದೆ. ಇದಕ್ಕೆ ಪೂರಕವಾಗಿ ಕೆಲವು ದುರುಪಯೋಗಗಳು ಇಲ್ಲಿ ನಡೆದಿವೆ. ಅನೇಕ ಕಡೆ ಇಂಥ ಕೆಲಸ ಆಗಿದೆ. ವೈಯಕ್ತಿಕವಾಗಿ ನಾನು ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳನ್ನು, ಸಾರ್ವಜನಿಕರನ್ನು ಕೇಳಿದ ಅಭಿಪ್ರಾಯದಲ್ಲಿ, ಉದಾಹರಣೆಗೆ 'ಎಮ್ಮೆ ಕೊಡತಕ್ಕ ಕಾರ್ಯಕ್ರಮ, ಆಕಳು ಕೊಡತಕ್ಕ ಕಾರ್ಯಕ್ರಮ,' ಇದು ಬೆಂಗಳೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಬಹಳ ಚೆನ್ನಾಗಿ ನಡೆದಿದೆ. ಬಹಳ ಫಲಪ್ರದವಾಗಿ ನಡೆದಿದೆ. ಮೈಸೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಇದು ಅಷ್ಟು ಫಲಕಾರಿಯಾಗಿಲ್ಲ. ಕಾರಣ ಎಂದರೆ, ಒಬ್ಬ ಬಡವನಿಗೆ ಸುಧಾರಿತ ಆಕಳಾಗಲೀ ಎಮ್ಮೆ ಯನ್ನಾಗಲೀ ಕೊಟ್ಟರೆ ಅದು ೬-೮ ಲೀಟರ್ ಹಾಲನ್ನು ಕೊಡುತ್ತದೆ. ಇದರಿಂದ ಅವನು ತನ್ನ ಜೀವನವನ್ನು ಸಾಗಿಸಿಕೊಂಡು ಹೋಗಬಹುದು. ಸುಧಾರಿತ ಆಕಳನ್ನಾಗಲೀ ಎಮ್ಮೆಯನ್ನಾಗಲೀ ನಾವು ಅವನಿಗೆ ಕೊಡದಿದ್ದರೆ, ಅದು ಕೇವಲ ಒಂದೆರಡು ಲೀಟರ್ ಹಾಲನ್ನು ಕೊಟ್ಟರೆ ಅವನು ತನ್ನ ದಿನವಿಡೀ ಶ್ರಮವನ್ನು ಉಪಯೋಗ ಮಾಡಿದಾಗ ಯಾವ ರೀತಿಯಲ್ಲಿ ತನ್ನ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬಹುದು ಎನ್ನುವುದು ಪ್ರಶ್ನೆಯಾಗಿರುತ್ತದೆ. ಈ ರೀತಿಯಾದರೆ ತಾನು ತೆಗೆದುಕೊಂಡ ಸಾಲವನ್ನು ಅವನು ವಾಪಾಸ್ ಕೊಡುವುದು ಕಷ್ಟವಾಗುತ್ತದೆ. ಹೀಗಾಗಿ ಅವನು ಭೂಗತ ವಾಗಬೇಕಾಗುತ್ತದೆ. ಎಲ್ಲಿ ನೂರಕ್ಕೆ ೯೦ ರಷ್ಟು ಉತ್ತಮ ರಾಸುಗಳನ್ನು ಕೊಟ್ಟಿದ್ದಾರೆ ಅಲ್ಲಿ ಇದು ಪೂರ್ಣಫಲಪ್ರದವಾಗಿದೆ, ಮತ್ತು ನಮ್ಮ ಯೋಜನೆ ೧೦೦ ಕ್ಕೆ ೬೦ ರಷ್ಟು ಪ್ರಯೋಜನವಾಗಿದೆ. ಈ ದೃಷ್ಟಿಯಿಂದ ಈ ಯೋಜನೆಯನ್ನು ಸಮೃದ್ಧಿ ಮಾಡಬೇಕಾದರೆ ನಮ್ಮ ಯೋಜನೆಗನುಗುಣವಾಗಿ ಆಕಳ ತಳಿಗಳನ್ನು ಅಭಿವೃದ್ಧಿ ಮಾಡತಕ್ಕ ಒಂದೊಂದು ಸಂಸ್ಥೆಯನ್ನು ಏಕೆ ಪ್ರಾರಂಭ ಮಾಡಬಾರದು ? ಮೈಸೂರು ಜಿಲ್ಲೆ ಕೋಲಾರ ಜಿಲ್ಲೆ ಯಲ್ಲಿ ಬಹಳ ಉತ್ತಮವಾದ ಪಶುಸಂಗೋಪನೆಗೆ ಅವಕಾಶವಿದೆ, ಇಂಥ ಯೋಜನೆಯನ್ನು ಅಲ್ಲಿ ಮಾಡಲಿಕ್ಕೆ ನಮ್ಮ ಪ್ರಯತ್ನ ಇದೆ. ತಮಿಳುನಾಡಿನಲ್ಲಿ ಇಂಥ ಯೋಜನೆ ಇದ್ದು ಅಲ್ಲಿ ಹೆಚ್ಚು ಹಾಲು ಕೊಡತಕ್ಕ ಜರ್ಸಿ ಆಕಳನ್ನು ಎರಡು ಸಾವಿರ ರೂಪಾಯಿಗಳಿಗೆ ಕೊಡುತ್ತಿದ್ದಾರೆ. ಇಂಥ ಒಂದು ಯೋಜನೆಯನ್ನು ನಮ್ಮ ರಾಜ್ಯದಲ್ಲಿಯೂ ಅಳವಡಿಸಿ ಮೊದಲು ಇದನ್ನು ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕು ಎಂದು ಮಾಡಿದ್ದೇವೆ.

ಆ ಮೇಲೆ ಗಾಡಿಗಳನ್ನು ಕೊಡುವ ವಿಚಾರದಲ್ಲಿ ನಮಗೆ ಅನೇಕ ಸಮಸ್ಯೆ ಗಳು ಇವೆ. ಈ ಗಾಡಿಗಳನ್ನು ಮೊದಲು ಯಾರು ತಯಾರು ಮಾಡಬೇಕು ? ಒಂದೊಂದು ಜಿಲ್ಲೆಗೆ ನನಗೆ ತಿಳಿದ ಪ್ರಕಾರ ಸುಮಾರು ೫೦೦ ಗಾಡಿಗಳು ಬೇಕು. ಗಾಡಿಯ ತಂತ್ರಜ್ಞಾನ ಬಲ್ಲ ಬಡಗಿಗೆ ಒಂದು ಹೆಡ್ ಹಾಕಿಸಿ,ಗಾಡಿಗೆ ಬೇಕಾದ ಸಾಮಾನುಗಳನ್ನು ಸರ್ಕಾರದವರೇ ಕೊಡಿಸಿ ಗಾಡಿಗಳನ್ನು ತಯಾರು ಮಾಡಿಸಿದರೆ ಬಡವರ ಜೀವನಕ್ಕೆ ಒಂದು ಹೊಸ ಬೆಳಕು ಬಂದೀತು ಮತ್ತು ನಮಗೂ ಈ ಕಾರ್ಯಕ್ರಮದಿಂದ ಒಳ್ಳೆಯ ಫಲ ಸಿಕ್ಕಿದಂತಾಗುತ್ತದೆ.

ಶ್ರೀ ಎಂ. ನಾಣಯ್ಯ.—ನಮ್ಮ ಕೊಡಗು ಜಿಲ್ಲೆಯಲ್ಲಿ ತಾವು ಹೇಳುವಂಥ ಗಾಡಿಗಳು ಬೇಕಾಗಿಲ್ಲ, ನಮಗೆ ಬೇಕಾದ ಗಾಡಿಗಳಿಗೆ ಬ್ರೇಕ್ ಇರಬೇಕು. ನಮಗೆ ಬ್ರೇಕ್ ಇಲ್ಲದ ಗಾಡಿ ಬೇಡ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಮಗೆ ಬೇಕಾಗಿರುವಂಥ ಗಾಡಿಗಳು ಎತ್ತಿನ ಗಾಡಿಗಳು, ಬ್ರೇಕ್ ಇರುವ ಗಾಡಿಗಳು ನಮಗೆ ಬೇಕಾಗಿಲ್ಲ, ಎತ್ತುಗಳೇ ನಮ್ಮ ಬ್ರೇಕ್.

ಶ್ರೀ ಎಸ್. ಬಂಗಾರಪ್ಪ.—ತಾವು ಸರಿಯಾಗಿ ಗಾಡಿ ಬಿಡುವುದನ್ನು ಕಲಿಯಿರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮತ್ತೆ ಐ. ಆರ್. ಡಿ ಪಿ. ಕಾರ್ಯಕ್ರಮಗಳು ಕೆಲವು ಕಡೆ ದುರುಪಯೋಗವಾಗಿವೆ. ಇದರ ಬಗ್ಗೆ ನನ್ನ ಹತ್ತಿರ ಅಂಕಿ ಸಂಖ್ಯೆಗಳೂ ಇವೆ. ದುರುಪಯೋಗವಾಗಿರತಕ್ಕ ಕಡೆ ನಾವು ಜಿಲ್ಲಾಧಿಕಾರಿಗಳಿಗೆ ಮತ್ತು ವಿಭಾಗಾಧಿಕಾರಿಗಳಿಗೆ ಪೂರ್ಣ ರೀತಿಯಾದ ತನಿಖೆಯನ್ನು ಮಾಡಬೇಕು, ಇನ್ಸ್‌ಪೆಕ್ಷನ್‌ಗಳನ್ನು ಮಾಡಬೇಕು, ರ್‍ಯಾಂಡಂ ಆಗಿಯಾಗಿ ಇನ್ಸ್‌ಪೆಕ್ಷನ್ ಮಾಡಬೇಕು ಎಂದು ತಿಳಿಸಿದ್ದೇವೆ. ನಮಗೆ ಬಂದಿರತಕ್ಕ ವರದಿಯ ಪ್ರಕಾರ ಸುಮಾರು ೮೦೦ ಪ್ರಕರಣಗಳಲ್ಲಿ ದುರುಪಯೋಗ ನಡೆದಿದೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಕೆಲವು ಪ್ರಕರಣಗಳನ್ನು ಹೇಳಿದ್ದಾರೆ, ಅವರು ಹೇಳಿದ ವಿಷಯದಲ್ಲಿ ನಾವು ಈಗಾಗಲೇ ಪೋಲೀಸ್ ಕೇಸನ್ನು ಹಾಕಿದ್ದೇವೆ. ಹಿಂದೆ ಏನು ದುರುಪಯೋಗದ ಪ್ರಕರಣಗಳು ನಡೆದಿವೆ, ಅವು ಮುಂದೆ ನಡೆಯದ ರೀತಿಯಲ್ಲಿ ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹೋದ ವರ್ಷ ೪೧ ಕೋಟಿ ರೂಪಾಯಿಗಳನ್ನು ನಾವು ಇದಕ್ಕಾಗಿ ಕೊಟ್ಟಿದ್ದೇವೆ. ಐ.ಆರ್.ಡಿ ಪಿ. ಕಾರ್ಯಕ್ರಮದಲ್ಲಿ ಮೂರು ಸಾವಿರ ರೂಪಾಯಿಗಳನ್ನು ಪಡೆಯತಕ್ಕವರನ್ನು ನಾವು ಸೆಲೆಕ್ಟ್‌ಮಾಡಿ ಕಳುಹಿಸಿದಾಗ ಬ್ಯಾಂಕ್‌ನವರು ಅದರಲ್ಲಿ ಕೆಲವರಿಗೆ ಮಾತ್ರ ಸಹಾಯ ಮಾಡಿದ್ದಾರೆ. ಅವರು ಸಾಲವನ್ನು ಯಾರಿಗೆ ವಾಪಸ್ ಕೊಡುವ ಶಕ್ತಿ ಇದೆ ಅಂಥವರಿಗೆ ಮಾತ್ರ ಸಹಾಯ ಮಾಡಿದ್ದಾರೆ. ಮತ್ತೆ ಯಾವ ಗ್ರಾಮದಲ್ಲಿ ಹೋದ ಸಾರಿ ಕೊಟ್ಟ ಹಣ ವಸೂಲಾಗಿಲ್ಲ ಅಂಥ ಗ್ರಾಮದವರಿಗೆ ಮತ್ತೆ ಸಹಾಯ ಮಾಡಿಲ್ಲ ಎನ್ನುವಂಥ ಅಂಶವೂ ಇದೆ. ಈ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ಬ್ಯಾಂಕ್‌ನವರನ್ನು ಕರೆಯಿಸಿಕೊಂಡು ಚರ್ಚೆ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ನಾವು ಸರ್ಕಾರದ ಕಡೆಯಿಂದ ೪೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವಾಗ ಇದರಲ್ಲಿ ಕೆಲವು ದುರುಪಯೋಗಗಳು ನಡೆದಿವೆ. ಆದರೂ ಸಹ ನಾವು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಸಂಬಂಧಪಟ್ಟವರಿಗೆ ಆದೇಶ ಕೊಟ್ಟಿದ್ದೇವೆ. ಇದರ ಜೊತೆಗೆ ಅಂತ್ಯೋದಯ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಇಡೀ ರಾಜ್ಯದಲ್ಲಿ ಮೊದಲು ೪೫ ತಾಲ್ಲೂಕುಗಳನ್ನು ಚುನಾಯಿಸಿಕೊಂಡು ಅದನ್ನು ಜಾರಿಗೆ ಕೊಟ್ಟಿದ್ದೇವೆ, ಈ ಯೋಜನೆಯಡಿಯಲ್ಲಿ ಈ ತರಹ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ನಾವು ಅಧಿಕಾರಿಗಳಿಗೆ ಆಗಲೇ ಹೇಳಿದ್ದೇವೆ. ಯಾವ ಗ್ರಾಮದಲ್ಲಿ ಯಾರಿಗೆ ೦೦೦ ರೂಪಾಯಿಗಳ ಆದಾಯ ಕೂಡ ಇಲ್ಲ ಅಂಥ ಸಂಸಾರಗಳನ್ನು ಚುನಾಯಿಸಿಕೊಂಡು ಅವರಿಗೆ ಆದ್ಯತೆಕೊಟ್ಟು ಅವರ ಜೀವನವನ್ನು ಸುಧಾರಣೆ ಮಾಡತಕ್ಕ ಕೆಲಸ ನಡೆಯಬೇಕಾಗಿದೆ ಇದು ನಮ್ಮ ಯೋಜನೆ. ಈ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ನಾವು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಸಮಗ್ರ ಗ್ರಾಮೀಣ ಅಭಿವೃದ್ಧಿಯ ಯೋಜನೆಯಲ್ಲಿ ೩೦ ಸಾವಿರ ಸಂಸಾರಗಳನ್ನು ಗುರುತಿಸಿ ಅವರಿಗೆ ವಿದ್ಯಾಭ್ಯಾಸ ಮತ್ತಿತರ ಸೌಲಭ್ಯಗಳನ್ನು ಕೊಟ್ಟು ಅವರ ಜೀವನ್ನು ಸುಧಾರಿಸುವುದು ಇದರ ಉದ್ದೇಶ. ಈ ಪ್ರಕಾರ ನಾವು ಆದೇಶವನ್ನೂ ಸಹ ಕೊಟ್ಟಿದ್ದೇವೆ,

೫-೦೦ ಪಿ.ಎಂ.

ಮಾನ್ಯ ಅಧ್ಯಕ್ಷರೆ, ಬಹಳ ಮಟ್ಟಿಗೆ ನಾನು ಹೋದ ಕಡೆಯಲ್ಲೆಲ್ಲ ಹೇಳುತ್ತಿದ್ದೇನೆ ಮತ್ತು ನಮ್ಮ ಸರ್ಕಾರದ ಉದ್ದೇಶವೂ ಇಷ್ಟೆ. ಏನೆಂದರೆ, ಎಲ್ಲೇ ಆಗಲಿ ಗ್ರಾಮ ಸಭೆಯನ್ನು ಕಡ್ಡಾಯವಾಗಿ ನಡೆಸಬೇಕು ಎಂದು. ಗ್ರಾಮದ ಮುಖಂಡರನ್ನು, ತಿಮ್ಮ, ಬೊಮ್ಮ ಸಿಂಹರನ್ನು ಕೂಡಿಸಿಕೊಂಡು,

ಅಧಿಕಾರಿಗಳು ಕೂಡಿಕೊಂಡು ಗ್ರಾಮಸಭೆ ಮಾಡುವುದಲ್ಲ, ಅಧಿಕಾರಿಗಳು ಗ್ರಾಮಕ್ಕೆ ಹೋಗುವುದಕ್ಕೆ ಮುಂಚೆ ಒಂದು ಯೋಜನೆ ತಯಾರು ಮಾಡಬೇಕು, ಆ ಬಗ್ಗೆ ಇಲಾಖೆಯಲ್ಲಿ ಮ್ಯಾನ್ಯುಯಲ್ ಮಾಡಿ ಎಂದು ಹೇಳಿದ್ದೇನೆ. ಈ ದಿಸೆಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅಂತ್ಯೋದಯ ಕಾರ್ಯಕ್ರಮದಲ್ಲಿ ಸುಮಾರು ೩೦ ಸಾವಿರ ಜನರನ್ನು ಕವರ್ ಮಾಡುತ್ತೇವೆಂದು ಹೇಳಿದರು. ಈಗ ಐ.ಆರ್.ಡಿ.ಪಿ.ಕಾರ್ಯಕ್ರಮದಲ್ಲಿ ಕವರಾಗಿ ಯಾರು ಬೆನಿಫಿಷರೀಸ್ ಎಂದು ಐಡೆಂಟಿಫೈಯಾಗಿದೆ, ಈಗ ಯಾರನ್ನು ತಾವು ಅಂತ್ಯೋದಯ ಕಾರ್ಯಕ್ರಮದಲ್ಲಿ ಸೇರಿಸಬೇಕು ಎಂದು ಇಚ್ಛೆಪಡುತ್ತೀರೋ ಅವರು ಐಡೆಂಟಿಫೈ ಆದ ಜನರೇ ಅಥವಾ ಪ್ರತ್ಯೇಕವಾಗಿರತಕ್ಕ ಜನರೇ. ಐಡೆಂಟಿಫೈ ಆದ ಜನರಲ್ಲಿ ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಮಾತ್ರವಲ್ಲ ಭೂರಹಿತ ಕಾರ್ಮಿಕರು ವೀಕರ್ ಸೆಕ್ಷನ್ಸ್, ಆರ್ಟಿಸಾನ್ಸ್.ಎಲ್ಲಾ ಸೇರಿರುತ್ತಾರೆ. ಹಾಗಾದರೆ ಐ. ಆರ್. ಡಿ ಪಿ. ಕಾರ್ಯಕ್ರಮದಲ್ಲಿ ಐಡೆಂಟಿಫೈ ಮಾಡಿದ್ದು ಹೇಗೆ ಬಿಟ್ಟು ಹೋಯಿತು. ಈ ವರ್ಷ ಯಾರು ಐಡೆಂಟಿಫೈ ಆಗಿದ್ದರು ಅವರು ಕವರೇಜ್ ಆಗಿರುತ್ತಾರೆ. ತಾವು ಕವರೇಜ್ ಮಾಡಿರಬಹುದು. ಹಾಗಿದ್ದರೆ ಈ ಅಂತ್ಯೋದಯ ಕಾರ್ಯಕ್ರಮದ ಬೆನಿಫಿಷರೀಸ್ ಯಾರು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಹಾಗಲ್ಲ, ತಮಗೆ ಗೊತ್ತಿರುವಹಾಗೆ, ೬೦೦ ಜನರನ್ನು ತೆಗೆದು ಕೊಳ್ಳುತ್ತೇವೆ. ಸೆಲೆಕ್ಟೆಡ್ ವಿಲೇಜಸ್ ಅಂದರೆ, ಒಂದು ಗ್ರಾಮಕ್ಕೆ ೧೦ ಜನರಂತೆ ಕ್ಲಸ್ಟರ್ ೬೦೦ ಜನರನ್ನು ತೆಗೆದುಕೊಳ್ಳುತ್ತೇವೆ. ಉಳಿದ ಗ್ರಾಮಗಳಲ್ಲಿ ಎಲ್ಲಿ ಕ್ಲಸ್ಟರ್ ಇರುವುದಿಲ್ಲವೋ ಆ ಗ್ರಾಮ ಗಳಲ್ಲಿ ಫಲಾನುಭವಿಗಳನ್ನು ಚುನಾವಣೆ ಮಾಡಬೇಕು ಎನ್ನುವುದು ಒಂದು ಎರಡನೆಯದು, ಯಾವ ಗ್ರಾಮದಲ್ಲಿ ಸಮಸ್ಯೆಗಳಿವೆ ಆ ಗ್ರಾಮದಲ್ಲೂ ಇದನ್ನು ಉಪಯೋಗಿಸಬೇಕೇ ಎನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ ಎಲ್ಲಿ ಕ್ಲಸ್ಟರ್ ಪ್ರೋಗ್ರಾಂ ಇಲ್ಲವೋ ಅಲ್ಲಿ ಚುಣಾವಣೆ ಮಾಡಬೇಕು, ಅಂತಹ ೩೦ ಸಾವಿರ ಜನರನ್ನು ಚುನಾವಣೆ ಮಾಡಿಕೊಳ್ಳಬೇಕು ಎನ್ನುವುದನ್ನು ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇದು ಒಳ್ಳೆಯ ಕಾರ್ಯಕ್ರಮ. ಇದು ಬಹಳ ಚಿಕ್ಕ ಪ್ರಮಾಣದಲ್ಲಿದೆ. ಇದು ಈ ದೇಶದ ಸಮಸ್ಯೆಯನ್ನು ಒಂದೇ ಸಲ ಬಗೆಹರಿಸುತ್ತದೆ ಎಂದು ಭಾವಿಸಿಲ್ಲ. ಬಡವನ ಬಾಳನ್ನು ಸಹ್ಯ ಮಾಡತಕ್ಕ ಪ್ರಶ್ನೆಯೇ ಹೊರತು, ಇದರಿಂದ ಬಡತನವನ್ನು ತೊಲಗಿಸುತ್ತೇನೆ, ಸಮತಾವಾದ ಸಮಾಜವನ್ನು ನಿರ್ಮಾಣಮಾಡುತ್ತೇನೆ ಎಂಬ ಕಲ್ಪನೆಯೂ ಇಲ್ಲ, ಆಸೆಯೂ ಇಲ್ಲ. ಎಲ್ಲಿಯವರೆಗೆ ಆಸ್ತಿಯ ಹಕ್ಕು ಸಮಾಜದಲ್ಲಿ ಬದುಕಿರುತ್ತದೋ ಅಲ್ಲಿಯವರೆಗೆ ಸಮಾಜವಾದ ಕನಸಾಗಿ ಉಳಿಯುತ್ತದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಇದು ಅನೇಕ ರೀತಿಯ ದುರುಪಯೋಗವಾಗುತ್ತಿದೆ. ಇವತ್ತು ಇರತಕ್ಕ ಯಾವುದೇ ಸಮಾಜದ ರಚನೆಯಲ್ಲಿ ಎಲ್ಲಾ ಫಲವನ್ನು ಮೇಲ್ವರ್ಗದ ಜನ ಉಪಯೋಗಿಸುತ್ತಿದ್ದಾರೆ ಎನ್ನುವುದು ಪರಿಣಿತರ ಅಭಿಪ್ರಾಯವಾಗಿದೆ. ಇದಕ್ಕೆ ಕಾರಣವೇನು, ಇದನ್ನು ಹೇಗೆ ತೊಲಗಿಸಬೇಕು ? ಈ ಫಲವನ್ನು ನಿಜವಾದ ಬಡವನಿಗೆ ತಲು ಪಿಸಬೇಕಾದರೆ ಅವರಲ್ಲಿ ಸಂಘಟನೆಯಾಗಬೇಕು. ಇದರಲ್ಲಿ ನೀವಾಗಲೀ ನಾವಾಗಲೀ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಸೈದ್ಧಾಂತಿಕವಾಗಿ ಸಂಘಟನೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಅನಿಷ್ಟ ಗಳು ಮುಂದುವರಿಯುತ್ತವೆ. ಈ ಅನಿಷ್ಟಗಳನ್ನು ಗುರಿಯಾಗಿಟ್ಟುಕೊಂಡು ಗ್ರಾಮೀಣ ಸ್ವರಾಜ್ಯದ ಸಿದ್ಧಾಂತದ ಮಸೂದೆಯನ್ನು ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮುಂದೆ ನಾಲ್ಕಾರು ವರ್ಷ ತೊಂದರೆಯಾದರೂ ಕೂಡ ಜನ ಎಚ್ಚೆತ್ತುಕೊಂಡಾರು, ಸಂಘಟನೆಯಾಗಿ ಯಾರು' ತಮ್ಮ ಹಕ್ಕುಗಳನ್ನು ಮತ್ತು ತಮಗೆ ಬರಬೇಕಾದ ಉಪಯೋಗಗಳನ್ನು ತಾವೇ ಉಪಯೋಗಿಸಿಕೊಂಡಾರು, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಲು ಈ ಮಸೂದೆ ತರಬೇಕು ಎಂದು ಅಪೇಕ್ಷೆ ಪಟ್ಟಿದ್ದೇನೆ. ಇನ್ನು ತಮ್ಮಲ್ಲಿ ಪ್ರಾರ್ಥನೆ ಏನೆಂದರೆ, ಈ ಪ್ರಶ್ನೆಯನ್ನು ನಾನು ಪಕ್ಷಪಾತ ದೃಷ್ಟಿಯಿಂದ ನೋಡುವುದಿಲ್ಲ, ನಮ್ಮ ಸರ್ಕಾರಕ್ಕೂ ಆ ಉದ್ದೇಶವಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಬಡವನಿಗೆ ಸಹ್ಯವಾಗತಕ್ಕ ಯಾವುದೇ ಕಾರ್ಯಕ್ರಮವಾಗಲಿ ನಾವು ಪಕ್ಷಾತೀತವಾಗಿ ನೋಡೋಣ, ನಾವು ಪಕ್ಷದ ಸಂಕೋಲೆಗಳಿಂದ ಹೊರಗಡೆ ಬಂದು ಜನರ ಸಂಕಷ್ಟದ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗೋಣ ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಡಿ. ಪಿ ಎ. ಪಿ ಕಾರ್ಯಕ್ರಮದ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿ ದ್ದಾರೆ. ಮತ್ತು ಈ ಡಿ. ಪಿ. ಎ. ಪಿ. ಕಾರ್ಯಕ್ರಮದಲ್ಲಿ ಹೇಗೆ ಸೆಲೆಕ್ಟ್ ಮಾಡುತ್ತೀರಿ ಎಂದು ಹೇಳಿದರು. ಇದಕ್ಕೆ ಕೇಂದ್ರದ ಗೈಡ್‌ಲೈನ್ಸ್ ಇದೆ. ಇಲ್ಲಿ ಸೆಲೆಕ್ಟ್ ಮಾಡುತ್ತಾ ಇಲ್ಲ. ಕೇಂದ್ರದಿಂದ

ಸೆಲೆಕ್ಟ್ ಮಾಡುತ್ತಾ ಇದ್ದಾರೆ. ಹೋದವರ್ಷ ಇಡೀ ದೇಶದಲ್ಲಿ ೩೦—೪೦ ಹೊಸ ಬ್ಲಾಕುಗಳನ್ನು ಮಾಡಿದಾಗ ೨೬ ಬ್ಲಾಕುಗಳನ್ನು ಕರ್ನಾಟಕಕ್ಕೇ ಕೊಟ್ಟಿದ್ದಾರೆ ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ವಂದಿಸಬೇಕು, ಅದನ್ನು ನಾವು ಒಪ್ಪಬೇಕು. ಇದರಲ್ಲಿ ಎರಡು ವಲಯಗಳಿವೆ. ಒಂದು ಕೇಂದ್ರದ ವಲಯ. ಸುಮಾರು ೭೦ ಬ್ಲಾಕುಗಳು ಕೇಂದ್ರದ ವಲಯಕ್ಕೆ ಬರುತ್ತವೆ. ೨೬ ಬ್ಲಾಕುಗಳು ರಾಜ್ಯದ ವಲಯದಲ್ಲಿದೆ. ಕೇಂದ್ರದ ವಲಯಕ್ಕೆ ೧೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡತಕ್ಕಂಥಾದ್ದಿದೆ. ರಾಜ್ಯದ ವಲಯಕ್ಕೆ ಏಳೂವರೆ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಈಗ ನಾವು ಏನು ಯೋಚನೆ ಮಾಡುತ್ತಿದ್ದೇವೆಂದರೆ, ರಾಜ್ಯದ ವಲಯಕ್ಕೆ ಕೇಂದ್ರದ ಕೇಂದ್ರದ ವಲಯದಷ್ಟೇ ವೆಚ್ಚ ಮಾಡತಕ್ಕ ಒಂದು ವ್ಯವಸ್ಥೆ ಮಾಡಬೇಕೆಂಬ ವಿಚಾರವನ್ನೂ ಕೂಡ ಯೋಚನೆ ಮಾಡುತ್ತಿದ್ದೇವೆ. ಡಿ. ಪಿ. ಎ. ಪಿ ಕಾರ್ಯಕ್ರಮದಲ್ಲಿ ಏನು ಮಾಡಬೇಕು ಎಂದು ಹೇಳಿದ್ದೇನೆ. ನಾನು ಒಂದು ಕಡೆ ಹೋದಾಗ ನನಗೆ ಆಶ್ಚರ್ಯವಾಯಿತು. ಒಬ್ಬರ ಜಮೀನಿನಲ್ಲಿ ನೀರು ಕೊರೆದುಕೊಂಡು ಹೋಗುತ್ತಿದೆ. ಯಾರೋ ಒಬ್ಬರು ಬಲಿಷ್ಠರು ಇರಬಹುದು, ಸುಮಾರು ೫ ಲಕ್ಷ ರೂಪಾಯಿ ಖರ್ಚು ಮಾಡಿ ಅಡ್ಡವಾಗಿ ಒಂದು ಗೋಡೆ ಕಟ್ಟಿಬಿಟ್ಟಿದ್ದಾರೆ. ಈಗ ಪಕ್ಕದ ಬಡವನ ಜಮೀನಿನಲ್ಲಿ ನೀರು ಕೊಚ್ಚಿಕೊಂಡು ಹೋಗುತ್ತಿದೆ. ಆದ್ದರಿಂದ ಇಂತಹ ವೆಚ್ಚವನ್ನು ಮಾಡಕೂಡದು ಎಂದು ಆದೇಶ ಕೊಡಲಾಗಿದೆ. ಈ ಕಾರ್ಯಕ್ರಮವನ್ನು ಬೇರೆ ರೀತಿಯಿಂದ ಮಾಡಬೇಕು. ಅದಕ್ಕಾಗಿ ಹೊಸದಾಗಿ, ಪ್ರಾಯೋಗಿಕವಾಗಿ ಎಲ್ಲೆಲ್ಲಿ ಡಿ. ಪಿ. ಎ. ಪಿ. ತಾಲ್ಲೂಕುಗಳಿವೆ ಅಲ್ಲೆಲ್ಲಾ ಒಂದು ತಾಲ್ಲೂಕಿಗೆ ೫ ರಷ್ಟು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಲೆಕ್ಕ ಹಾಕಿದೆ. ಆದರೆ ಅಷ್ಟು ಹಣ ಇಲ್ಲದೇ ಇರುವುದರಿಂದ ಸುಮಾರು ಒಂದು ಕೋಟಿ ೭೫ ಲಕ್ಷ ರೂಪಾಯಿಯಲ್ಲಿ ಸ್ಪ್ರಿಂಕ್ಲರ್ ಇರಿಗೇಷನ್ ತೆಗೆದುಕೊಳ್ಳಬೇಕು. ಸಾಧಾರಣವಾಗಿ ಬಡವರು ಸಂಘಟನೆಯಾಗಿ, ಅವರ ತಾಕುಗಳನ್ನು ನಿರ್ಮಾಣ ಮಾಡಿ ಈ ಸ್ಪ್ರಿಂಕ್ಲರ್ ಇರಿಗೇಷನ್ ಕೊಡಬೇಕು, ಈ ಒಂದು ಹೊಸದಾದ ಯೋಜನೆಯನ್ನು ಎಲ್ಲಾ ಡಿ. ಪಿ. ಎ. ಪಿ ತಾಲ್ಲೂಕುಗಳಿಗೆ ಹಬ್ಬಿಸಬೇಕು ಎನ್ನತಕ್ಕಂಥ ಆದೇಶ ಕೊಟ್ಟು ಕಾರ್ಯೋನ್ಮುಖರಾಗಿದ್ದೇವೆ. ಮತ್ತೆ ಡಿ. ಪಿ. ಎ. ಪಿ. ಯಲ್ಲಿ ವಿಕಾಸಪತ್ರ ಪ್ರತಿಯೊಬ್ಬ ಫಲಾನುಭವಿಗೆ ತಲುಪಬೇಕು ಎಂಬ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಪ್ರತಿಯೊಬ್ಬ ಫಲಾನುಭವಿಗೂ ಕೂಡ ಅವನಿಗೆ ಏನು ಹಕ್ಕು ಮತ್ತು ಸೌಲಭ್ಯವನ್ನು ಕೊಟ್ಟಿದ್ದೇವೆ ಅದು ದಾಖಲೆಯಲ್ಲಿ ಇರಬೇಕು ಎಂಬ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಈ ವಿಚಾರದ ಬಗ್ಗೆ ನಾನು ಗಂಭೀರವಾಗಿ ಯೋಚನೆ ಮಾಡುತ್ತಿದ್ದೇನೆ. ಏನೆಂದರೆ, ನಮ್ಮ ಅಧಿಕಾರಿಗಳಿಂದಾಗಲೀ ಅಥವಾ ಬೇರೆಯವರಿಂದಾಗಲೀ ಇದರಿಂದ ಎಷ್ಟು ಅಭಿವೃದ್ಧಿಯಾಯಿತು ಎಂದು ಸಮೀಕ್ಷೆ ಮಾಡುವುದಕ್ಕೆ ನನಗೆ ಒಪ್ಪಿಗೆ ಇಲ್ಲ. ಸ್ವತಂತ್ರರಾದ ವಿಶ್ವವಿದ್ಯಾನಿಲಯದ ಪರಿಣಿತರು ಸಮೀಕ್ಷೆ ಮಾಡಿ ಇದರಿಂದ ಎಷ್ಟರಮಟ್ಟಿಗೆ ಫಲಪ್ರದಂಟಾಗಿದೆ ಎಷ್ಟರಮಟ್ಟಿಗೆ ಸೋತಿದೆ ಎನ್ನುವುದರ ಬಗ್ಗೆ ಆಗಾಗ ವಿಮರ್ಶೆ ಮಾಡತಕ್ಕಂಥ ಒಂದು ಯೋಜನೆಯನ್ನು ಜಾರಿಗೆ ತರಬೇಕು ಎಂಬ ಸದುದ್ದೇಶ ಸರ್ಕಾರಕ್ಕಿದೆ. ಈ ಎಲ್ಲಾ ಕಾರ್ಯಕ್ರಮಗಳು ನೇರವಾಗಿ ಬಡವರಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು. ಆದ್ದರಿಂದ ಬಡವರನ್ನು ಸಂಘಟನೆ ಮಾಡುವುದರಲ್ಲಿ, ಅವರನ್ನು ಜಾಗೃತಗೊಳಿಸುವಲ್ಲಿ ನಾವೂ ನೀವೂ ಎಲ್ಲರೂ ಸಹಕಾರಿಯಾಗಿ ಪಕ್ಷಾತೀತವಾಗಿ ಕೆಲಸ ಮಾಡೋಣ. ತಾವು ಈ ಬಗ್ಗೆ ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅವುಗಳನ್ನು ಸ್ವಾಗತಿಸುತ್ತೇನೆ. ಇನ್ನು ಸ್ಥಳೀಯವಾಗಿ ಕೆಲವು ಸಮಸ್ಯೆಗಳನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನೆಲ್ಲಾ ನಾನು ಬರೆದುಕೊಂಡಿದ್ದೇನೆ. ಅದರ ಬಗ್ಗೆ ಸಾಕಷ್ಟು ಗಮನ ಕೊಟ್ಟು ಆ ಸಮಸ್ಯೆಗಳನ್ನು ಪರಿಹರಿಸಲು ಸಾಕಷ್ಟು ಪ್ರಯತ್ನ ಮಾಡುತ್ತೇನೆ. ಕೊನೆಯದಾಗಿ, ನನಗೆ ಸಂಬಂಧಪಟ್ಟದ್ದು ಇಲ್ಲದೇ ಇದ್ದರೂ ಕೂಡ ಪರಿಹಾರದ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಜನತಾ ಮನೆಗಳ ಬಗ್ಗೆ ಮಾತನಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಉತ್ತರ ಹೇಳುತ್ತಾರೆ. ಮತ್ತೆ ಪರಿಹಾರದ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ೩೦ ಜೂನ್‌ಗೆ ಕೆಲಸವನ್ನು ನಿಲ್ಲಿಸಿ ಎಂಬ ಆದೇಶ ನಮ್ಮ ಅಧಿಕಾರಿಗಳಿಂದ ಹೋಗಿದೆ. ಏಕೆಂದರೆ, ಕೇಂದ್ರದ ಸಹಾಯದಿಂದ ಈ ಕೆಲಸ ಮಾಡುತ್ತಾ ಇರತಕ್ಕಂಥಾದ್ದು. ಕೇಂದ್ರದ ನಿಯಮಗಳ ಪ್ರಕಾರ ೩೦ ಜೂನ್ ಬಂದ ತಕ್ಷಣ ಕಾರ್ಯಕ್ರಮ ಸ್ಥಗಿತವಾಗುತ್ತದೆ. ಆದರೆ ಮಂತ್ರಿಮಂಡಲದ ಉಪಸಮಿತಿ ಸಭೆ ಸೇರಿ ಎಲ್ಲೆಲ್ಲಿ ಅಗತ್ಯವಿದೆ, ಎಲ್ಲೆಲ್ಲಿ ಮಳೆಯ ಅಭಾವವಿದೆ, ಎಲ್ಲೆಲ್ಲಿ ಜನಕ್ಕೆ ತೊಂದರೆಯಿದೆ, ಎಲ್ಲೆಲ್ಲಿ ಜನ ಕೆಲಸಕ್ಕೆ ಅಪೇಕ್ಷೆಪಟ್ಟು ಬರುತ್ತಾರೆ ಅಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಬೇಕು, ಜಿಲ್ಲಾಧಿಕಾರಿಗಳು ಪ್ರವೇಶ ಮಾಡಬೇಕು, ಆ ಜಾಗಗಳನ್ನು ಗುರುತಿಸಬೇಕು ಎನ್ನುವ ಆದೇಶವನ್ನು ಕೊಟ್ಟಿದ್ದೇವೆ.

ಇನ್ನು ನೀರಿನ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ, ಏನಪ್ಪ ಮೂರನೇ ಹಂತದ ಯೋಜನೆ ಆಯಿತು. ನಾಲ್ಕನೇ ಹಂತದ ಯೋಜನೆಯನ್ನು ಮಾಡುತ್ತಾರೋ ಇಲ್ಲವೋ ಎಂದು ಕೇಳಿದ್ದಾರೆ. ನಾಲ್ಕನೇ ಹಂತದ ಯೋಜನೆಏನಿದೆ ಅದನ್ನು, ಎಲ್ಲೆಲ್ಲಿ ನೀರಿನ ಅಗತ್ಯವಿದೆಯೋ ಅಲ್ಲಿ ಮಾಡಲೇ ಬೇಕು, ಮುಂಜಾಗ್ರತೆ ಕ್ರಮವಾಗಿ ಸದಾ ನೀರಿನ ಅಭಾವಕ್ಕೆ ತುತ್ತಾಗತಕ್ಕ ಪ್ರದೇಶಗಳನ್ನು ಗುರುತಿಸಿ ಅಲ್ಲೂ ಕೂಡ ಈ ಕಾರ್ಯಕ್ರಮವನ್ನು ಜಾರಿ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇನೆ.

ಇನ್ನು ಮಲೆನಾಡಿನ ವಿಷಯದ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಇದು ಬಹಳ ಸುಲಭದ ದೃಷ್ಟಿಯಿಂದ ಸರಿಯಾಗಿದೆ ಜರಿ ನೀರನ್ನು ಉಪಯೋಗಿಸಿ ನೀರನ್ನು ಒದಗಿಸತಕ್ಕಂಥದ್ದು ಬಹಳ ಉತ್ತಮವಾದ ಸಲಹೆ. ಈಗಾಗಲೇ ಪ್ರಾಯೋಗಿಕವಾಗಿ ಬಹುಶಃ ಬೆಳಗಾಂ ಜಿಲ್ಲೆಯಲ್ಲಿ ಹಾಗೂ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಕ್ಷೇತ್ರವನ್ನು ತೆಗೆದುಕೊಂಡು ಪ್ರಾಯೋಗಿಕವಾಗಿ ಈ ಯೋಜನೆ ಮಾಡೋಣವೆಂದು ಹೇಳಿ ಇದರ ಬಗ್ಗೆ ತಾಂತ್ರಿಕ ರಿಪೋರ್ಟನ್ನು ತಯಾರುಮಾಡುತ್ತಿದ್ದೇವೆ ಆದುದರಿಂದ ಇದು ಬಹಳ ಉತ್ತಮವಾದ ಸಲಹೆಯಾಗಿದೆ ಅದನ್ನು ಮಾಡೋಣ. ಇನ್ನು ಎರಡನೆಯದಾಗಿ, ಕೆಲವು ಕಡೆಗಳಲ್ಲಿ ಕೊಳವೆ ಬಾವಿಗಳು ಬೇಕಾಗಿಲ್ಲವೆಂದು ಹಿಂದೆ ಆದೇಶ ಕೊಟ್ಟಿದ್ದಾರೆ, ಇದನ್ನು ಬಹಳ ಮನ ನೊಂದು ಹೇಳಬೇಕಾಗುತ್ತದೆ. ತೋಡು ಬಾವಿಗಳಿಗೆ ಕೊಟ್ಟ ೩೫ ಲಕ್ಷ ರೂಪಾಯಿಗಳ ಹಣವನ್ನು ವೆಚ್ಚಮಾಡಿಲ್ಲ. ಅದಕ್ಕೆ ನಾವು ಒಂದು ಸೂತ್ರವನ್ನು ಹಾಕಿಕೊಂಡಿದ್ದೇವೆ. ಎಲ್ಲೆಲ್ಲಿ ಜಲ ಸಂಪತ್ತು ಇದೆ ಅಂಥಾ ಕಡೆಗಳಲ್ಲಿ ತೋಡು ಬಾವಿಗಳನ್ನು ತೆಗೆಯಬೇಕೆಂದು ನಿರ್ಧಾರ ಮಾಡಿದ್ದೇವೆ. ಇದು ಎಲ್ಲೆಲ್ಲಿ ಕಾರ್ಯಗತವಾಗಬೇಕಿತ್ತೋ ಅದು ಆಗಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ, ಅದಕ್ಕಾಗಿ ನಾವು ಒಂದು ವಿಶೇಷವಾದ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದಕ್ಕೆ ಕೇಂದ್ರ ಸರ್ಕಾರದವರೂ ಸಹ ಒಪ್ಪಿಗೆ ಕೊಟ್ಟಿದ್ದಾರೆ. ಅದಕ್ಕೆ ನಿಮ್ಮೆಲ್ಲರ ಸಹಕಾರದಿಂದ ಒಂದೊಂದು ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರತಕ್ಕ ರೈತನಿಗೆ ಅನುಕೂಲವಾಗಲಿ ಎನ್ನತಕ್ಕ ದೃಷ್ಟಿಯಿಂದ ಸುಮಾರು ೫ ಬಾವಿಗಳನ್ನು ಮಾಡಿಸಬೇಕು ಎನ್ನತಕ್ಕ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಮುಖ್ಯ ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿ ಹಿರಿಯರಾದ ಶ್ರೀ ಜೆ. ಎಚ್. ಪಟೇಲರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮಾಡಬೇಕೆಂದು ಮುಖ್ಯ ಮಂತ್ರಿಗಳವರು ತೀರ್ಮಾನ ಕೈಗೊಂಡಿದ್ದಾರೆ. ಇನ್ನು ನಮ್ಮ ರಾಜ್ಯದ ಕೆಲಸಗಳು ಸುಲಭವಾಗಿ ಆದಷ್ಟುಬೇಗ ಆಗಬೇಕು ಎನ್ನುವ ದೃಷ್ಟಿಯಿಂದ ನಮ್ಮ ಭೂ ಸೇನೆ ನಿಗಮವನ್ನು ಬಳಸಿಕೊಳ್ಳಬೇಕು ಎನ್ನತಕ್ಕ ಮಹದಾಸೆಯನ್ನು ಇಟ್ಟುಕೊಂಡಿದ್ದೇವೆ. ಸುಮಾರು ೪–೫ ಸಾವಿರ ಜನರಿಗೆ ಕೆಲಸ ಕೊಡತಕ್ಕ ಕಾರ್ಯಕ್ರಮವಿದೆ. ಅದನ್ನು ಇನ್ನು ೮–೧೦ ಸಾವಿರ ಜನರಿಗೆ ಕೆಲಸವನ್ನು ಈ ನಿಗಮದಿಂದ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇನ್ನು ಎಲ್ಲೆಲ್ಲಿ ಕುಡಿಯುವ ನೀರು ಟ್ಯಾಂಕ್‌ಗಳನ್ನು ಕಟ್ಟಬೇಕಾಗಿದೆಯೋ ಅಂಥಾ ಕಡೆಗಳಲ್ಲಿ ಕೆಲವು ಕಡೆ ಅರ್ಧ ಕಟ್ಟಿದ್ದಾರೆ ಇನ್ನು ಕೆಲವು ಕಡೆಗಳಲ್ಲಿ ಕಂಟ್ರಾಕ್ಟರ್‌ಗಳೇ ಸಿಕ್ಕಿಲ್ಲ. ಅದಕ್ಕೆ ನಾವು ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಕಟ್ಟುವುದಕ್ಕೆ ಈ ಭೂ ಸೇನೆಯವರ ಸಹಾಯವನ್ನು ಪಡೆಯಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದೆಲ್ಲಾ ಯಶಸ್ವಿಯಾಗಬೇಕಾಗಿದ್ದರೆ ಅದಕ್ಕೆ ನಿಮ್ಮೆಲ್ಲರ ಸಹಕಾರ ಮತ್ತು ಫಲಾನುಭವಿಗಳ ಸಹಕಾರ ಬೇಕೆಂದು ಹೇಳಿ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಂದ ಒಂದೆರಡು ಕ್ಲಾರಿಫಿಕೇಷನ್ ಕೇಳಲು ಬಯಸುತ್ತೇನೆ, ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಆಗತಕ್ಕ ಕೆಲಸ ಕಾರ್ಯಗಳ ಬಗ್ಗೆ ಕೆಲವು ಆಪಾದನೆಗಳು ಬಂದಿವೆ, ಹಾಗೂ ಇಲ್ಲಿಯೂ ಸಹ ಕೆಲವು ಸದಸ್ಯರೂ ಕೂಡ ಆಪಾದನೆ ಮಾಡಿದ್ದಾರೆ. ಇದರ ಬಗ್ಗೆ ತಾವು ಕೂಡ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶ ಕೊಟ್ಟಿದ್ದೇವೆಂದು ಹೇಳಿದಿರಿ. ಇದರಲ್ಲಿ ಏನಾಗಿದೆ ಎಂದರೆ ಬಡವರಿಗೆ ಕಲ್ಯಾಣ ಕಾರ್ಯಗಳಾಗತಕ್ಕ ಕಾರ್ಯಕ್ರಮಗಳ ಬಗ್ಗೆ ಆಪಾದನೆಗಳು ಯಾವಾಗಲೂ ಜಾಸ್ತಿಯಾಗಿ ಬರುತ್ತವೆ. ಇದರಿಂದ ಬಡವರಿಗೆ ಅಗತ್ಯ ಅನುಕೂಲಗಳು ನಿಂತು ಹೋಗಲಿ ಎನ್ನತಕ್ಕ ಒಂದು ವ್ಯವಹಾರ ನಡೆಯುತ್ತಿದೆ. ಇದು ಎಲ್ಲಾ ಹಂತದಲ್ಲೂ ಕೂಡ ನಡೆಯುತ್ತಿದೆ. ಐ.ಆರ್.ಡಿ.ಪಿ. ಯೋಜನೆಯ ಬಗ್ಗೆ ಬಂದಿರತಕ್ಕ ಆಪಾದನೆಗಳನ್ನು ಸರಿಪಡಿಸಿ ಅದು ಯಶಸ್ವಿಯಾಗಿ ಆಗುವುದಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ? ಅದಕ್ಕೆ ಅಪ್ರೈಸಲ್ ಟೀಮನ್ನು ಏನಾದರೂ ಜಿಲ್ಲಾ ಮಟ್ಟದಲ್ಲಿ ಮಾಡುತ್ತೀರಾ ? ಎಲ್ಲಾ ಜಿಲ್ಲಾಧಿಕಾರಿಗಳಿಗೇ

ಆದೇಶ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅದರ ಬದಲು ಈ ಅಪ್ರೈಜಲ್‌ಟೀಮನ್ನು ಏನಾದರೂ ಮಾಡುತ್ತೀರಾ ಎನ್ನುವ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು ಇನ್ನು ಐ.ಆರ್.ಡಿ.ಪಿ. ಯೋಜನೆ ಪ್ರಕಾರ ಒಬ್ಬ ಬಡತನ ರೇಖೆಗಿಂತ ಕೆಳಗಿರತಕ್ಕವನಿಗೆ ಒಂದು ಸಾರಿ ಒಂದು ದನವನ್ನು ಕೊಟ್ಟರೆ, ಅನಂತರ ಅವನಿಗೆ ಇನ್ನೊಂದು ದನವನ್ನು ಕೊಡುವುದು ಹೀಗೆ ಕೊಟ್ಟು ಅವನನ್ನು ಆರ್ಥಿಕವಾಗಿ ಮುಂದುವರಿಯುವ ಹಾಗೆ ನೋಡಿಕೊಳ್ಳುವುದಕ್ಕೆ ಫಾಲೋ ಅಪ್ ಆ್ಯಕ್ಷನ್ ತೆಗೆದುಕೊಳ್ಳುತ್ತಿದ್ದೀರಾ ? ಇದರ ಬಗ್ಗೆ ತಮ್ಮ ಆಲೋಚನೆ ಏನಿದೆ ? ಇನ್ನು ಡಿ.ಪಿ.ಎ.ಪಿ. ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಕಳೆದ ವರ್ಷ ೧೯ ಜಿಲ್ಲೆಗಳ ಪೈಕಿ ೧೬ ಜಿಲ್ಲೆಗಳಲ್ಲಿ ಬರಗಾಲ ಬಂದಿದೆ. ಈ ಒಂದು ಹೊಸ ಅನುಭವವನ್ನು ಜ್ಞಾಪಕದ ಲ್ಲಿಟ್ಟುಕೊಂಡು ಎಲ್ಲೆಲ್ಲಿ ಕಡುಕ್ಷಾಮ ಬಂದಿದೆ ಅಲ್ಲಿಗೆಲ್ಲಾ ಈ ಯೋಜನೆಯನ್ನು ಪುನ: ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಕೇಂದ್ರದ ಆದೇಶದಂತೆ ಜೂನ್‌ನಲ್ಲಿ ಎಲ್ಲಾ ಕೆಲಸಗಳನ್ನೂ ಅಂದರೆ ಕ್ಷಾಮದ ಕೆಲಸಗಳನ್ನೂ, ಪರಿಹಾರಗಳನ್ನೂ ನಿಲ್ಲಿಸಬೇಕೆಂದು ತಾವು ಆದೇಶವಿತ್ತಿರುವುದಾಗಿ ಹೇಳಿದಿರಿ.

ಶ್ರೀ ಅಬ್ದುಲ್ ನಜೀರ್ ಸಾಬ್ .— ಕೇಂದ್ರದ ಸ್ಟಡಿಟೀಂ ಇಲ್ಲಿಗೆ ಬಂದು ಹೋಗಿರುವುದು ತಮಗೆಲ್ಲಾ ಗೊತ್ತಿದೆ. ಯಾವಾಗ ಮಳೆ ಜೂನ್ ೩೦ ಕ್ಕೆ ಪ್ರಾರಂಭವಾಯಿತೋ ಆಗನಿಂದ ನಿಲ್ಲಿಸ ಬೇಕೆಂದು ಕೇಂದ್ರ ಸರ್ಕಾರ ಆದೇಶವಿದೆ, ಅದು ನಡೆದುಕೊಂಡು ಬಂದಿರತಕ್ಕ ಪ್ರಾಕ್ಟೀಸ್ ಕೂಡ ಆಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ .— ಮಾನ್ಯ ಅಧ್ಯಕ್ಷರೇ, ಕೇಂದ್ರದ ಸ್ಟಡಿಟೀಂನವರು ಬಂದು ಇಂತಿಷ್ಟು ಹಣವನ್ನು ಖರ್ಚು ಮಾಡಬಹುದೆಂದು ಹೇಳಿ ಹೋಗಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಖರ್ಚು ಮಾಡುವುದು ಬಿಡುವುದು ನಿಮ್ಮ ಕೈಯಲ್ಲಿದೆ ಆದುದರಿಂದ ಅದನ್ನು ಮುಂದುವರಿಸದೇ ಇರುವ ಬಗ್ಗೆ ತಾವು ಆದೇಶ ಕೊಟ್ಟಿದ್ದೀರಿ. ಇದರಿಂದಾಗಿ ಕಾರ್ಯಕ್ರಮಗಳು ನಿಂತು ಹೋಗಿವೆ ಇದರಲ್ಲಿ ಕೇಂದ್ರದ ಪ್ರಶ್ನೆ ಇಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್ .— ತಪ್ಪು ಕಲ್ಪನೆಗೆ ತಾವು ಬರಬಾರದು. ನಾನು ಹೇಳಿದ ಉದ್ದೇಶವನ್ನು ತಾವು ಅರ್ಥ ಮಾಡಿಕೊಳ್ಳಲಿ. ತಾವು ಅರ್ಥ ಮಂತ್ರಿಗಳಾಗಿದ್ದವರು, ತಮಗೂ ಎಲ್ಲಾ ಗೊತ್ತಿದೆ. ಯಾವುದೇ ರಿಲೀಫ್ ವರ್ಕ್ ಜೂನ್ ೩೦ ಕ್ಕೆ ನಿಲ್ಲಿಸಬೇಕು ಎನ್ನತಕ್ಕ ನಿಯಮವಿದೆ. ಮಳೆ ಆದ ತಕ್ಷಣ ನಿಲ್ಲಿಸಬೇಕು ಎನ್ನತಕ್ಕ ನಿಯಮವಿದೆ ೩೦-೪೦ ಇಂಚು ಮಳೆಯಾಯಿತೆಂದು ಮಿತಿಯುಲಾಜಿಕಲ್ ಡಿಪಾರ್ಟ್‌ಮೆಂಟಿನವರು ರಿಪೋರ್ಟನ್ನು ಕೇಂದ್ರಕ್ಕೆ ಕಳುಹಿಸಿ ಕೊಡುತ್ತಾರೆ. ನಿಮ್ಮ ಊರಿನಲ್ಲಿ ಮಳೆ ಆಯಿತೋ, ಇಲ್ಲ ನಮ್ಮ ಊರಿನಲ್ಲಿ ಮಳೆ ಆಯಿತೋ ಎಂಬುದೂ ಗೊತ್ತಿರುವುದಿಲ್ಲ ಆದರೆ ನಿಯಮದ ಪ್ರಕಾರ ಮಳೆಯಾಯಿತು ಎಂದರೆ ನಿಲ್ಲಿಸಬೇಕಾಗುತ್ತದೆ. ಆದರೆ ನಾವು ಕೆಲಸವನ್ನು ನಿಲ್ಲಿಸಿಲ್ಲ. ೧೯ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕೆಲಸ ಮಾಡಿಸಿದ್ದೇವೆ. ಇದರ ಬಗ್ಗೆ ಕೇಂದ್ರದವ ರೊಡನೆಯೂ ಮಾತನಾಡಿದ್ದೇವೆ. ನಮಗೆ ಅವರು ಹೆಚ್ಚಿನ ಸಹಾಯ ಕೂಡ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ .—ಅದರ ವಿವರ ಕೇಳುತ್ತಿಲ್ಲ. ಕೆಲಸವನ್ನು ತಾವು ನಿಲ್ಲಿಸಿ ಬಿಟ್ಟಿದ್ದೀರಿ ಅದಕ್ಕೆ ನಾನು ಹೇಳುತ್ತಿರುವುದು. ಇನ್ನು ಎನ್.ಆರ್. ಇ.ಪಿ.ಯ ಕೆಲಸದಲ್ಲಿ ಎಲ್ಲಾ ಕಡೆಯೂ ಕೆಲಸ ಸ್ಟ್ಯಾಗ್ನೇಷನ್ ಆಗಿ ನಿಂತು ಬಿಟ್ಟಿದೆ. ಇದು ಏತಕ್ಕೆಂದರೆ ಪ್ರತಿಯೊಂದು ಅಕೌಂಟ್ಸ್ ಕೂಡ ಕ್ಲರ್ಕ್‌ನಿಂದ ಹಿಡಿದು ಡೆಪ್ಯುಟಿ ಕಮಿಷನರ್‌ರವರೆಗೆ ಹೋಗಿ ಕೌಂಟರ್ ಸಿಗ್ನೇಚರ್ ಆದಮೇಲೆ ಚೆಕ್ ಇಶ್ಯು ಆಗ ಬೇಕಾಗಿದೆ. ಇದರಿಂದಾಗಿ ಕೆಲಸ ಕಾರ್ಯಗಳು ತಡವಾಗುತ್ತಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಇದನ್ನೇನಾದರೂ ಸಡಿಲಗೊಳಿಸಿ ಕೆಲಸ ಚುರುಕುಗೊಳಿಸುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತೀರಾ ? Kindly furnish the average hours of work turned out ie. optimum use. And also furnish the hours of work i.e., average turned out by the Govt. rigs and also private rigs. ಇನ್ನು ೨೦ ಅಂಶದ ಕಾರ್ಯ ಕ್ರಮದ ಬಗ್ಗೆ ಸಮಿತಿಯನ್ನು ಯಾವಮಟ್ಟದಲ್ಲೂ ರಚನೆ ಮಾಡಿಲ್ಲ. ಅದು ರಾಜ್ಯ ಮಟ ದಲ್ಲಿಯಾಗಲೀ, ಸಮಿತಿಗಳನ್ನು ನಾನಾ ಹಂತಗಳಲ್ಲಿ ಪುನರ್ ರಚನೆ ಮಾಡುತೀರಾ ? ಅಥವಾ ಇಲ್ಲವೇ ಎಂಬುದನ್ನು ಜಿಲ್ಲಾ ಮಟ್ಟದಲ್ಲಿಯಾಗಲೀ ಇಲ್ಲವೇ ತಾಲ್ಲೂಕ್ ಮಟ್ಟದಲ್ಲಿಯಾಗಲೀ ಪುನರ್ ಸಂಘಟನೆಯಾಗಿಲ್ಲ. ಅಧಿಕಾರೇತರರನ್ನು ಸೇರಿಸಿಲ್ಲ. ನಿಮಗೆ ೨೦ ಅಂಶದ ಕಾರ್ಯಕ್ರಮದಲ್ಲಿ ನಂಬಿಕೆ ಇದೆಯೇ ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಯಡಿಯೂರಪ್ಪ.—ಫೆಯಿಲ್ಡ್ ಬೋರ್‌ವೆಲ್ ಪೈಪುಗಳನ್ನು ತೆಗೆಯುವ ಸಂದರ್ಭದಲ್ಲಿ ಮೆಲ್ಟ್ ಆಗುತ್ತವೆಂದರು. ವೈಜ್ಞಾನಿಕವಾಗಿ ಮುಂದುವರಿದಿರುವ ದೇಶಕ್ಕೆ ಖಂಡಿತ ಪೈಪನ್ನು ಹಾಳಾಗದಂತೆ ತೆಗೆಯುವುದಕ್ಕೆ ಸಾಧ್ಯತೆ ಇದೆ. ಸಿರಾಳಕೊಪ್ಪದ ಹತ್ತಿರ ನಾವು ಪೈಪನ್ನು ತೆಗೆದು ಉಪಯೋಗಿಸಿದ್ದೇವೆ. ಆದ್ದರಿಂದ, ನನ್ನ ಸಲಹೆ ಏನೆಂದರೆ, ಈ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದರೆ ಯಾರಾದರೂ ಒಬ್ಬ ಏಜೆನ್ಸಿ ಆ ಕೆಲಸವನ್ನು ವಹಿಸಿಕೊಂಡು ಫೆಯಿಲ್ಡ್ ಬೋರ್‌ವೆಲ್ ಪೈಪುಗಳನ್ನು ಉಪಯೋಗಕ್ಕೆ ಬರುವ ಹಾಗೆ ತೆಗೆಯುತ್ತಾನೆ. ದಯಮಾಡಿ ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ವಿರೋಧ ಪಕ್ಷದ ನಾಯಕರು ಉದ್ದವಾದ ವಿವರಣೆ ಕೇಳಿರುವುದರಿಂದ ಅದಕ್ಕೆ ಮೊದಲು ಹೇಳಿಬಿಡುತ್ತೇನೆ. ಜಿಲ್ಲಾ ಮಟ್ಟದಲ್ಲಿ ಬಡತನ ರೇಖೆಯ ಕೆಳಗಿರುವವರ ಸಮೀಕ್ಷೆಯನ್ನು ನಡೆಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರೆಂದು ಕೇಳಿದ್ದಾರೆ. ಸಮೀಕ್ಷೆಯನ್ನು ನಡೆಸಬೇಕಾಗಿದೆ. ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ಎಲ್ಲೆಲ್ಲಿ ದುರುಪಯೋಗ ನಡೆದಿದೆ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಸಮೀಕ್ಷೆ ನಡೆಸತಕ್ಕದ್ದು ಅಧಿಕಾರಿಗಳಿಗಾಗಲೀ. ಸಾರ್ವಜನಿಕರಿಗಾಗಲೀ ಕೊಡಲಿಕ್ಕೆ ಅಲ್ಲ. ಸಾಧಾರಣ ವಾಗಿ ಇಂಥ ಸಮೀಕ್ಷೆಯಿಂದ ಬಡತನದ ರೇಖೆಯ ಕೆಳಗೆ ಹೋಗುವ ವಿಚಾರವನ್ನು ನಿಷ್ಪಕ್ಷಪಾತವಾಗಿ ವಿಚಾರಿಸಿಕೊಳ್ಳಲು ಪರಿಣಿತರಿಗೆ ಏತಕ್ಕೆ ವಹಿಸಬಾರದು ಎಂದು ಇದೆ. ಅದನ್ನು ವಿಚಾರ ಮಾಡುತ್ತಿದ್ದೇವೆ. ಎನ್.ಆರ್.ಇ.ಪಿ. ಯಲ್ಲಿ ಕುಡಿಯುವ ನೀರಿನ ಬಗ್ಗೆ ಸರ್ಕಾರೀ ರಿಗ್‌ಗಳು ಎಷ್ಟು ಕೆಲಸ ಮಾಡಿವೆ ಮತ್ತು ಖಾಸಗೀ ರಿಗ್‌ಗಳು ಎಷ್ಟು ಕೆಲಸ ಮಾಡಿವೆ ಎಂಬ ವಿವರವನ್ನು ತರಿಸಿಕೊಡುತ್ತೇನೆ. ಎನ್.ಆರ್.ಇ.ಪಿ. ಕೆಲಸ ನಡೆಯುತ್ತಿಲ್ಲವೆಂದು ಹೇಳಿದ್ದೀರಿ. ನಾನು ಎಲ್ಲ ಕಡೆ ಹೋಗಿ ನೋಡಿದ್ದೇನೆ. ಈ ಕೆಲಸಕ್ಕೆ ಸಂಬಂಧಪಟ್ಟ ಹಣ ನಮ್ಮ ಹತ್ತಿರ ಇರುವುದಿಲ್ಲ. ೭ ಕೋಟಿ ರೂಪಾಯಿ ಹಣ ಎಲ್ಲ ಜಿಲ್ಲೆಗಳಲ್ಲಿ ಇದೆ ಡಿ.ಆರ್.ಡಿ.ಎಸ್. ನಲ್ಲಿ ಹಣ ಇದೆ. ಅದನ್ನು ವೆಚ್ಚ ಮಾಡುವುದಕ್ಕೆ ನಿಯಮಗಳನ್ನು ಮಾಡಬೇಕಾಗಿದೆ. ನಾವೆಲ್ಲ ಕೇಂದ್ರದ ಗೈಡ್‌ಲೈನ್ಸ್ ಅನ್ನು ಫಾಲೋ ಮಾಡಬೇಕಾಗುತ್ತದೆ. ಈಗ ಅವರು ಹಾಕಿರುವ ನಿಯಮಗಳನ್ನು ಪಾಲನೆ ಮಾಡುತ್ತಿದ್ದೇವೆ. ಅದನ್ನು ಮರು ಪರಿಶೀಲನೆ ಮಾಡುತ್ತೇವೆ. ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಇವರಿಗೆ ಎಷ್ಟು ನಂಬಿಕೆ ಇದೆಯೋ ಅಷ್ಟೇ ನಂಬಿಕೆ ನಮಗೆ ಇದೆ. ಅವರಿಗೆ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಪೂರ್ಣ ವಿಶ್ವಾಸ ಇದೆ. ಮತ್ತು ಇದನ್ನು ವಿಶ್ವಾಸದಿಂದ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—೭ ತಿಂಗಳಾದರೂ ಸಂಪೂರ್ಣ ಪಾಲನೆ ಮಾಡಲಿಲ್ಲವಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನೀವು ೧೯೮೦ಕ್ಕೆ ಅಧಿಕಾರಕ್ಕೆ ಬಂದಿರಿ, ೧೯೮೨ರ ಕೊನೆಯಲ್ಲಿ ಸಮಿತಿಗಳನ್ನು ಮಾಡಿದಿರಿ. ಆ ಸಮಿತಿಗಳು ೨೦ ಅಂಶಗಳ ಕಾರ್ಯಕ್ರಮವನ್ನು ಮಾಡುವುದಕ್ಕೆ ಅಡ್ಡಿ ಮಾಡಿಲ್ಲ. ಯಾರು ಬೇಕಾದರೂ ಕಾರ್ಯಕ್ರಮ ಮಾಡಬಹುದು. ಅಲ್ಲಿರುವ ಶಾಸಕರು ಮೀಟಿಂಗ್ ಕರೆಯದಿದ್ದರೆ ಅದು ನನ್ನ ತಪ್ಪಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ನಜೀರ್‌ಸಾಬ್‌ರವರು ಬಹಳ ಜಾಣ್ಮೆಯಿಂದ ಉತ್ತರಿಸಿದ್ದಾರೆ. ಸಕಲೇಶಪುರದಲ್ಲಿ ಮಳೆ ಜಾಸ್ತಿ ಆಗುವುದರಿಂದ ಅಲ್ಲಿ ಬೋರ್‌ವೆಲ್‌ಗಳ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ನಮ್ಮಲ್ಲಿ ೨೦೦ ಇಂಚು ಮಳೆಯಾದರೂ ಬೇಸಿಗೆಯಲ್ಲಿ ನೀರಿನ ಅಭಾವ ತೀವ್ರವಾಗಿ ಇರುತ್ತದೆ. ಅಲ್ಲಿ ೬ ತಿಂಗಳು ಮಳೆ ೬ ತಿಂಗಳು ಬಿಸಿಲಿರುವುದರಿಂದ ಬೇಸಿಗೆಯಲ್ಲಿ ಬೋರ್‌ವೆಲ್‌ಗಳ ಅವಶ್ಯಕತೆ ಬಹಳ ಇರುತ್ತದೆ. ಈಗ ಪಾಸ್ಟ್ ರಿಗ್‌ಗಳಲ್ಲಿ ತೆಗೆಸಿರತಕ್ಕ ಬೋರ್‌ವೆಲ್‌ಗಳು ಜಯಪ್ರದವಾಗಿವೆ. ಅದನ್ನು ಇನ್ನೂ ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಗತ್ಯ ಇದ್ದರೆ ಮಾಡಿಸೋಣ.

ಶ್ರೀ ಜೆ. ಡಿ. ಸೋಮಪ್ಪ.—ಎನ್.ಆರ್.ಇ.ಪಿ. ಕೆಲಸವನ್ನು ಚುನಾವಣೆಯ ಕಾಲದಲ್ಲಿ ಪ್ರಾರಂಭ ಮಾಡಿದ್ದು ಎಂದರು. ಅದನ್ನು ಚುನಾವಣೆಯ ದೃಷ್ಟಿಯಿಂದ ಮಾಡಲಾಗಿದೆಯೇ ಹೊರತು ಜನರ ಹಿತದೃಷ್ಟಿಯಿಂದ ಮಾಡಿಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಮುಂದುವರಿಸಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಬೋರ್‌ವೆಲ್‌ಗಳ ರಿಪೇರಿ ಬಗ್ಗೆ ಏನೂ ಹೇಳಲಿಲ್ಲ. ಈಗ ತಾಲ್ಲೂಕಿಗೆ ಒಬ್ಬ ಮೆಕ್ಯಾನಿಕ್ ಅನ್ನು ಇಟ್ಟಿದ್ದೀರಿ. ಅದು ಏನೇನು ಸಾಲದು. ಏಕೆಂದರೆ ಒಂದೊಂದು ತಾಲ್ಲೂಕಿ

ನಲ್ಲಿ ೨೦೦ ರಿಂದ ೪೦೦ರವರೆಗೆ ಬಾವಿಗಳು ಕೆಟ್ಟಿವೆ. ಆದ್ದರಿಂದ, ಅದಕ್ಕೆ ತಕ್ಕ ವ್ಯವಸ್ಥೆ ಮಾಡ ಬೇಕು. ಕೊಳವೆ ಬಾವಿಗಳನ್ನು ತೆಗೆಯುವುದರಲ್ಲಿ ಅವರು ನಿಪುಣರು. ಕಾಂಗ್ರೆಸ್ಸಿಗೆ ತೂತು ಕೊರೆದರು, ಕ್ರಾಂತಿರಂಗಕ್ಕೆ ಕೊರೆದರು ಮತ್ತೆ ಜನತಾ ಪಕ್ಷಕ್ಕೆ ಯಾವಾಗ ಕೊರೆಯುತ್ತಾರೋ ಗೊತ್ತಿಲ್ಲ.

ಛೇರ್ಮನ್.—ನಿಮಗೆ ಬೇಕಾದಂತಹ ವಿವರಣೆ, ಅಷ್ಟನ್ನು ಮಾತ್ರ ಕೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ಊರುಗಳಲ್ಲಿ ಕೊಳವೆ ಬಾವಿಗಳು ರಿಪೇರಿ ಆಗದೆ ಹಾಗೇ ನಿಂತಿವೆ. ಅವು ಮೊದಲು ರಿಪೇರಿ ಆಗಬೇಕು. ಅವುಗಳು ಆ ಊರಿನ ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಏರ್ಪಾಡುಮಾಡುವ ಅವಶ್ಯಕತೆ ಬಹಳವಾಗಿದೆ. ಈ ಬಗ್ಗೆ ಮಂತ್ರಿ ಗಳು ಕ್ರಮ ತೆಗೆದುಕೊಳ್ಳುತ್ತಾರೆಯೋ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಂತ್ಯೋದಯ ಯೋಜನೆಯನ್ನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ನನ್ನ ಒಂದು ಸಲಹೆ ಏನೆಂದರೆ ಐ.ಆರ್.ಡಿ.ಪಿ. ಯೋಜನೆಯನ್ನು ಸಂಪೂರ್ಣವಾಗಿ ಹಳ್ಳಿ ಗಳಿಗೆ ಮೀಸಲಾಗಿಟ್ಟಿದ್ದೀರಿ, ಆದರೆ ಈ ಯೋಜನೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿರತಕ್ಕ ಅರ್ಹವಾದ ಐದು ಕುಟುಂಬಗಳಿಗೆ ಅವಕಾಶ ಕೊಟ್ಟರೆ ಒಳ್ಳೆಯದು. ಈಗ ಅರ್ಹವಲ್ಲದೆ ಇರತಕ್ಕ ಎಲ್ಲ ಹಳ್ಳಿಗಳ ೫ ಕುಟುಂಬ ಗಳಿಗೆ ಪರಿಹಾರ ಕೊಡುತ್ತಿದ್ದೀರಿ. ಇದರಿಂದ ಏನಾಗುತ್ತದೆಂದರೆ ಪ್ರತಿಯೊಂದು ಹಳ್ಳಿಯಲ್ಲಿ ೫ ಜನ ಮಾತ್ರ ಬಡವರು ಇರುವುದಿಲ್ಲ, ಸುಮಾರು ೨೨-೩೦ ಜನ ಬಡವರಿರುತ್ತಾರೆ. ಹೀಗಾಗಿ ಸಹಾಯ ಮಾಡತಕ್ಕ ಸಂದರ್ಭದಲ್ಲಿ ಡಿಸ್ಕ್ರಿಮಿನೇಷನ್ ಮಾಡುತ್ತಾನೆ ಅನ್ನುವುದಕ್ಕೆ ಆಸ್ಪದವಾಗುತ್ತದೆ. ಆದ್ದ ರಿಂದ ನನ್ನ ಸಲಹೆ ಏನೆಂದರೆ, ನೀವು ಎಷ್ಟೇ ಜನರಿಗೆ ಕೊಡಿ, ೧೦-೨೦ ಹಳ್ಳಿಗಳನ್ನು ತೆಗೆದುಕೊಂಡು ಅದರಲ್ಲಿ ಒಂದನ್ನು ಸೆಲೆಕ್ಟೆಡ್ ವಿಲೇಜ್ ಎಂದು ಮಾಡಿ ಪೂರ್ತಿ ಸಹಾಯ ಕೊಟ್ಟರೆ ಅದರಿಂದ ಹೆಚ್ಚು ಸಹಾಯ ಸಿಗುತ್ತದೆಂದು ನನ್ನ ಭಾವನೆ. ಇದನ್ನು ತಾವು ಪರಿಶೀಲಿಸಬೇಕು. ಎರಡನೆಯ ದಾಗಿ, ನಜೀರ್ ಸಾಹೇಬರು ಮೊದಲು ಮಂತ್ರಿಗಳಾಗುವುದಕ್ಕೆ ಮುಂಚೆ ಇದು ಪ್ರತ್ಯೇಕ ಇಲಾಖೆ ಆಗಬೇಕೆಂದು ನನ್ನ ಮುಂದೆ ಪ್ರಸ್ತಾಪಿಸಿದ್ದರು. ಪಿ.ಹೆಚ್.ಇ. ಇಲಾಖೆ ತಮ್ಮ ಕಂಟ್ರೋಲ್‌ನಲ್ಲಿ ಬರುವುದಿಲ್ಲ, ಆದ್ದರಿಂದ, ಇದನ್ನು ಪ್ರತ್ಯೇಕ ಇಲಾಖೆಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಒಬ್ಬ ಮಾನ್ಯ ಸದಸ್ಯರು.—ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ತೆಗೆದುಕೊಂಡಿರತಕ್ಕ ಹಳ್ಳಿ ಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕುತ್ತಿಲ್ಲ. ಯಾವಾಗ ಅದನ್ನು ಕಾರ್ಯಗತ ಮಾಡಿ ಅವರ ನೀರಿನ ಬವಣೆಯನ್ನು ಹರಿಸುತ್ತೀರಿ ?

ಶ್ರೀ ಬಿ. ಭೈರಪ್ಪಾಜಿ.—ನಾನು ಮಾತನಾಡತಕ್ಕ ಸಂದರ್ಭದಲ್ಲಿ, ತಾಲ್ಲೂಕು ಬೋರ್ಡ್ ಮೂಲಕ ಎನ್.ಆರ್.ಇ.ಪಿ. ಮತ್ತು ಇತರ ಅನೇಕ ಯೋಜನೆಗಳು ಕಾರ್ಯರೂಪಕ್ಕೆ ಬರತಕ್ಕದ್ದು ಎಂದು ಪ್ರಸ್ತಾಪ ಮಾಡಿದ್ದೆ. ಇದಕ್ಕೆ ಸುಮಾರು ೫೦-೬೦ ಲಕ್ಷ ರೂಪಾಯಿ ಹಣ ಖರ್ಚಾಗುತ್ತದೆ. ಅಲ್ಲಿರತಕ್ಕ ಜೂನಿಯರ್ ಇಂಜಿನಿಯರೇ ಟೇಪ್ ಇಂಜಿನಿಯರ್ ಆಗಿರುತ್ತಾನೆ. ಅಲ್ಲಿ ಟೆಕ್ನಿಕಲ್ ನಾಲೆಡ್ಜ್ ಇಲ್ಲದೆ ಇರುವವರು ಇರುತ್ತಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಕೆಳಗೆ ಜೂನಿಯರ್ ಇಂಜಿನೀಯರ್ ಗಳು ಇದ್ದು ಕೆಲಸ ಮಾಡಿಸಿದರೆ ಹಣ ಪೋಲಾಗುವುದಿಲ್ಲ ಆ ದಿಸೆಯಲ್ಲಿ ತಾವು ಇಂಜಿನಿಯ ರಿಂಗ್ ವಿಂಗನ್ನು ತಾಲ್ಲೂಕು ಬೋರ್ಡ್ ಆಶ್ರಯದಲ್ಲಿ ಏರ್ಪಾಡು ಮಾಡುವುದಕ್ಕೆ ವ್ಯವಸ್ಥೆ ಮಾಡು ತ್ತೀರಾ ? ಮಲ್ಲಪ್ಪನವರು ಮಾತನಾಡುತ್ತಾ, ಮನೆ ಕಟ್ಟತಕ್ಕ ಸಂದರ್ಭದಲ್ಲಿ ಕಳ್ಳ ಮರ ಹಾಕಿ ದ್ದಾರೆಂದು ಹೇಳಿದರು. ಯಾವು ಯಾವುದು ಸಿಗುತ್ತದೆ. ಅದನ್ನೆಲ್ಲ ಹಾಕಿದ್ದಾರೆ. ಕಾರಣವೇನೆಂದರೆ, ನೀವು ಜಂಗಲ್ ವುಡ್ ಎಂದು ಕ್ಲಾಸಿಫಿಕೇಷನ್ ಮಾಡಿದ್ದೀರಿ. ಆದ್ದರಿಂದ ಯಾವುದೇ ಮರ ಹಾಕಿದರೂ ಜಂಗಲ್ ವುಡ್ ಎಂದು ಬರೆಯುತ್ತಾರೆ. ಕ್ಲಾಸಿಫಿಕೇಷನ್‌ನಲ್ಲಿ ಬೇವು, ಆಲ, ಮತ್ತಿ ಎಂದು ಸ್ಪೆಸಿಫಿಕ್ ಆಗಿ ಸೂಚಿಸಬೇಕು. ಈ ರೀತಿ ಸೂಚಿಸದೆ ಇರುವುದರಿಂದ ಇದರ ದುರುಪಯೋಗ ವನ್ನು ಅಧಿಕಾರಿಗಳು ಮತ್ತು ಕಂಟ್ರಾಕ್ಟರು ಮಾಡಿಕೊಂಡು ಕೋಟ್ಯಾಂತರ ರೂಪಾಯಿ ಹಣ ಸಂಪಾ ದನೆ ಮಾಡಿದ್ದಾರೆ. ಇದರ ಬಗ್ಗೆ ನಾನು ಫೋಟೋ ಕಾಪಿ ಕಳುಹಿಸಿದ್ದೇನೆ ಮತ್ತು ಮನವಿ ಕೂಡ ಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಕ್ರಿಯಾಲೋಪ ಎತ್ತುತ್ತೇನೆ.

ಛೇರ್ಮನ್.—ವಿವರಣೆ ಮೇಲೆ ಕ್ರಿಯಾಲೋಪವಿಲ್ಲ, ಕುಳಿತುಕೊಳ್ಳಿ.

೫-೩೦ ಪಿ.ಎಂ.

ಶ್ರೀ ಬಿ. ಬೈರಪ್ಪಾಜಿ.—ನಾನು ಒಂದು ಫೋಟೋ ಕಾಪಿ ಸಹಿತ ವಿಷಯವನ್ನು ಕಳುಹಿಸಿದ್ದೆ. ತಿರುವೇಕೆರೆ ತಾಲ್ಲೂಕ್ ಬೋರ್ಡಿನಲ್ಲಿ ಆಗಿರತಕ್ಕ ದುರ್ವಿನಿಯೋಗದ ಬಗ್ಗೆ ಮಾಹಿತಿ ಕಳುಹಿಸಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ವಿವರಣೆ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ. ನಾನೊಂದು ಸಲಹೆ ಕೊಡುತ್ತೇನೆ. ಎನ್ ಆರ್. ಇ.ಪಿ. ಮತ್ತು ಐ.ಆರ್.ಡಿ.ಪಿ. ಯೋಜನೆ ನಗರಸಭೆ ವ್ಯಾಪ್ತಿಗೆ ಬರುತ್ತಿಲ್ಲ. ೧೦-೧೫ ಸಾವಿರ ಜನ ಸಂಖ್ಯೆ ಇರತಕ್ಕ ನಗರಸಭೆ ಇರುವ ಕಡೆ ಕೃಷಿ ಕಾರ್ಮಿಕರು ಮತ್ತು ಬಡವರಿಗೆ ಉದ್ಯೋಗ ಇರುವುದಿಲ್ಲ. ಆದ್ದರಿಂದ ಕನಿಷ್ಟ ೨೦ ಸಾವಿರದ ಒಳಗಡೆ ಜನಸಂಖ್ಯೆ ಇರುವಂಥ ನಗರಸಭೆ ವ್ಯಾಪ್ತಿಯಲ್ಲೂ ಎನ್.ಆರ್. ಇ.ಪಿ. ಮತ್ತು ಐ.ಆರ್.ಇ.ಪಿ. ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪರಿಶೀಲನೆ ಮಾಡ ಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—ಹರಿಜನ ಗಿರಿಜನ ಕಲ್ಯಾಣದ ಬಗ್ಗೆ ನಮ್ಮ ಸಚಿವರು ಪ್ರಸ್ತಾಪ ಮಾಡಲಿಲ್ಲ. ೧೯೮೭-೮೮ನೇ ಸಾಲಿಗೆ ೩೪೩.೬೦ ಲಕ್ಷ ರೂಪಾಯಿ ಇದಕ್ಕಾಗಿ ಮೀಸಲಾಗಿಟ್ಟಿದ್ದು ೧೯೮೮ನೇ ಮಾರ್ಚ್ ಕೊನೇ ವೇಳೆಗೆ ೧೭೭೮ ೫ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದರು. ಬಾಕಿ ಹಣ ಏತಕ್ಕೆ ಉಳಿಯಿತು? ಇದೇರೀತಿ ಆದರೆ ಬಡವರ ಕಲ್ಯಾಣ ಆಗುವುದಕ್ಕೆ ಸಾಧ್ಯವೆ? ಸರ್ಕಾರಕ್ಕೆ ಈ ವಿಷಯದಲ್ಲಿ ನಿರ್ಲಕ್ಷ್ಯ ಭಾವನೆ ಏತಕ್ಕಿದೆ? ಅಥವಾ ಅಧಿಕಾರಿಗಳು ಈ ಬಗ್ಗೆ ಲಕ್ಷ್ಯ ಕೊಡಲಿಲ್ಲವೆ ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಡಿ ಪಿ.ಎ.ಪಿ. ಕಾರ್ಯಕ್ರಮದಲ್ಲಿ ಅನೇಕ ಸಣ್ಣ ನೀರಾವರಿ ಕೆಲಸ ಗಳನ್ನು ಮುಂಚಿನಿಂದ ತೆಗೆದುಕೊಳ್ಳುತ್ತಿದ್ದರು. ನಾವು ಈ ಸಲವೂ ಅನೇಕ ಸಣ್ಣ ನೀರಾವರಿ ಕೆಲಸ ಗಳನ್ನು ಸಲಹೆ ಮಾಡಿ ಕಳುಹಿಸಿದ್ದರೂ ಒಂದೂ ಅಪ್ರೂವ್ ಆಗಿ ಕೆಲಸ ಪ್ರಾರಂಭವಾಗಿಲ್ಲ, ಗುಲ್ಬರ್ಗ ಜಿಲ್ಲೆ ಬಗ್ಗೆ ನಾನು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ. ಬೀದರ್, ಗುಲ್ಬರ್ಗದಲ್ಲಿ ಹೆಚ್ಚಿನ ಬೋರ್‌ವೆಲ್ ಗಳನ್ನು ಮಾಡುವುದಕ್ಕಾಗಲಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಬೇರೆ ಸಮಸ್ಯೆ ಇತ್ತೆಂದೂ ಹೇಳಿದ್ದಾರೆ. ನರಗುಂದ ಮತ್ತು ನವಿಲಗುಂದ ಭಾಗದಲ್ಲಿ ವಿಶೇಷ ಕಾರ್ಯಕ್ರಮ ಹಾಕಿ ಕ್ರಮ ತೆಗೆದುಕೊಳ್ಳುತ್ತೇವೆಂದು ಏನು ಹೇಳಿದ್ದಾರೋ ಅದೇರೀತಿ ಇದಕ್ಕೂ ವಿಶೇಷ ಕಾರ್ಯಕ್ರಮ ಹಾಕಿ ಬೀದರ್ ಗುಲ್ಬರ್ಗ ಕಡೆ ಬೋರ್‌ವೆಲ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ಕೆಲವು ಕೆಲಸ ವಹಿಸುವ ಬಗ್ಗೆ ಹೇಳಿದ್ದಾರೆ. ನನಗನ್ನಿಸಿದ ಮಟ್ಟಿಗೆ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಅರ್ಥ ಮಂತ್ರಿಗಳಾಗಿದ್ದಾಗ ಈ ಲ್ಯಾಂಡ್ ಆರ್ಮಿ ಕಾರ್ಪೊರೇಷನನ್ನು ಪ್ರಾರಂಭ ಮಾಡಿದರು ಎಂದು ಕಾಣುತ್ತದೆ. ಅವರ ಕೆಲಸ ಅಷ್ಟು ಸಮರ್ಪಕವಾಗಿಲ್ಲ. ಒಂದು ಸಾರಿ ಅವರು ಎಗ್ಸಿಕ್ಯೂಟ್ ಮಾಡಿದ ಮೇಲೆ ಮೈಂಟೇನ್ ಯಾರು ಮಾಡಬೇಕು ಎಂಬ ಪ್ರಶ್ನೆ ಇದೆ. ಅನೇಕ ಕಡೆ ಕೆಲಸ ಅರ್ಧ ಅರ್ಧ ಮಾಡಿ ದ್ದಾರೆ. ಆದ್ದರಿಂದ ದಯಮಾಡಿ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ಕೆಲಸಗಳನ್ನು ಒಪ್ಪಿಸಬೇಡಿ ಎಂದು ಹೇಳುತ್ತೇನೆ. ಲೋಕೋಪಯೋಗಿ ಇಲಾಖೆ ಅಥವಾ ತಾಲ್ಲೂಕು ಬೋರ್ಡ್ ಮುಖಾಂತರ ಕೆಲಸ ಮಾಡಿಸಿದರೆ ಹಳ್ಳಿ ಜನರಿಗೆ ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ಕೆಲಸ ಒಪ್ಪಿಸಿ ಜನರಿಗೆ ತೊಂದರೆ ಮಾಡಬೇಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಕೆ. ಹುಚ್ಚಪ್ಪ.—ಡಿ.ಪಿ.ಎ.ಪಿ. ಕಾರ್ಯಕ್ರಮದಲ್ಲಿ ಅನೇಕ ರಸ್ತೆ ಕೆಲಸ ಕಾರ್ಯಗಳು ನಡೆದಿವೆ. ಅನೇಕ ರಸ್ತೆಗಳನ್ನು ತಾಲ್ಲೂಕು ಬೋರ್ಡಿನವರೂ ಮೈಂಟೇನ್ ಮಾಡುತ್ತಿಲ್ಲ ಮತ್ತು ಪಂಚಾಯಿತಿಯವರು ಮೈಂಟೇನ್ ಮಾಡುತ್ತಿಲ್ಲ. ಲೋಕೋಪಯೋಗಿ ಇಲಾಖೆಯವರೂ ಮಾಡು ತ್ತಿಲ್ಲ. ಅಂಥ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮಾಡಿರುವ ರಸ್ತೆಗಳನ್ನು ಯಾರು ದುರಸ್ತಿ ಮಾಡಬೇಕು ಯಾರು ಮೈಂಟೇನ್ ಮಾಡಬೇಕು ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಆದೇಶ ಕೊಡಬೇಕು. ಕಡೂರು ತಾಲ್ಲೂಕಿನಲ್ಲಿ ಸೆಂಟ್ರಲ್ ಸ್ಕೀಮಿನಲ್ಲಿದ್ದ ಡಿ.ಪಿ.ಎ.ಪಿ. ಕೆಲಸವನು ಕಳೆದ ಸಾಲಿನಲ್ಲಿ ತೆಗೆದು ಹಾಕಿದರು. ಆಗಿನ ಶಾಸಕರು ಇದೇ ಅಸೆಂಬ್ಲಿಯಲ್ಲಿ ಕೇಳಿದಾಗ ಸ್ಟೇಟ್ ಸ್ಕೀಂನಲ್ಲಿ ಅದನ್ನು ಸೇರಿಸಿ

ಕೊಳ್ಳುತ್ತೇವೆಂಬ ಉತ್ತರ ಬಂತು. ಅದನ್ನು ಪತ್ರಿಕೆಯಲ್ಲಿ ಕೂಡ ಓದಿದ್ದೆ. ಆದರೆ ಇದುವರೆಗೂ ಅದನ್ನು ಮಾಡದಿರುವುದರಿಂದ ಆ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಬರಗಾಲದ ಬಗ್ಗೆ ಹಿಂದೆ ಮಾತನಾಡುವಾಗ ಕಡೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬವಣೆ ಯಾವಾಗಲೂ ಇರುತ್ತದೆ ಎಂದು ಹೇಳಿದ್ದೆ. ಪಿ ಎಚ್. ಇ. ಸಬ್ ಡಿವಿಷನನ್ನು ಅಲ್ಲಿ ತೆರೆಯಬೇಕೆಂದೂ ಹೇಳಿದ್ದೆ. ಅದನ್ನು ಕಾರ್ಯ ರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅಂತ್ಯೋದಯ ಕಾರ್ಯಕ್ರಮದಲ್ಲಿ ಗ್ರಾಮಗಳಲ್ಲಿರುವ ಬಡವರಲ್ಲಿ ಅತೀ ಬಡವರನ್ನು ಆರಿಸುತ್ತೇವೆಂದು ಹೇಳಿದ್ದೀರಿ. ಆದರೆ ಸಹಾಯಧನ ಕೊಡುವ ಮಾಹಿತಿ ಪ್ರಕಾರ ನೋಡಿದರೆ ಪ್ರತಿಯೊಬ್ಬರಿಗೆ ಶೇಕಡ ೨೫ ಅಥವಾ ಶೇಕಡ ೩೩ ಪ್ರಮಾಣದಲ್ಲಿ ಸಹಾಯಧನ ಕೊಡುವ ಯೋಜನೆ ಇದೆಯೆಂಬುದು ಗೊತ್ತಾಗುತ್ತದೆ. ಈಗಾಗಲೇ ಐ ಆರ್. ಡಿ. ಪಿ. ಸ್ಕೀಮಿನಲ್ಲಿ ಸಹ ಶೇಕಡ ೨೫ ಮತ್ತು ಶೇಕಡ ೩೩ ಕ್ರಮದಲ್ಲಿ ಸಹಾಯಧನ ಕೊಡಲಾಗುತ್ತಿದೆ. ಆದರೆ ಇದು ಕಡುಬಡವರಿಗೆ ಸಹಾಯ ಮಾಡುವ ಯೋಜನೆಯಾಗಿರುವುದರಿಂದ ಸಹಾಯಧನದ ಪ್ರಮಾಣವನ್ನು ೫೦ ಪರ್ಸೆಂಟಿಗೆ ಏತಕ್ಕೆ ಹೆಚ್ಚು ಮಾಡಬಾರದು? ಉತ್ತರ ಕನ್ನಡ ಜಿಲ್ಲೆಯಲ್ಲಿ ಬೋರ್‌ವೆಲ್‌ಗಳು ಸಮರ್ಪಕವಾಗಿ ಕೆಲಸ ಮಾಡುವುದಿಲ್ಲ ಎಂದು ತಜ್ಞರ ವರದಿಯಿಂದ ಗೊತ್ತಾಗುತ್ತದೆ. ಎರಡು ವರ್ಷಗಳ ಹಿಂದೆ ಎರಡು ಸಾವಿರ ಲೀಟರ್ ನೀರು ಕೊಡುತ್ತಿದ್ದ ಬಾವಿಗಳು ಈಗ ಅತೀ ಕಡಿಮೆ ನೀರು ಕೊಡುತ್ತಿವೆ. ಏಕೆಂದರೆ ಅಲ್ಲಿ ಅದೆಲ್ಲಾ ಸಿಲ್ಟ್ ಅಪ್ ಆಗುತ್ತವೆ. ಆದ್ದರಿಂದ ಅಂಥ ಸ್ಥಳಗಳಲ್ಲಿ ಓಪನ್ ವೆಲ್ ಮಾಡಬೇಕೆಂದು ಹೇಳುತ್ತಿದ್ದೇನೆ. ಎಷ್ಟೋ ಓಪನ್ ವೆಲ್‌ಗಳನ್ನು ಮಾಡುವ ಕೆಲಸ ಅರ್ಧಕ್ಕೆ ನಿಂತಿದ್ದು ಅವುಗಳಿಗೆ ಹೆಚ್ಚಿನ ಹಣ ಪೂರೈಸಲು ಕಾರ್ಯಕ್ರಮ ಹಾಕಿಕೊಳ್ಳಬೇಕು. ಲ್ಯಾಂಡ್ ಆರ್ಮಿ ಬಗ್ಗೆ ಹೇಳಬೇಕಾದರೆ ಈ ಕಾರ್ಯಕ್ರಮಗಳನ್ನು ಅವರಿಗೆ ವಹಿಸಿಕೊಡುವುದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ನಮ್ಮ ಜಿಲ್ಲೆಯಲ್ಲಿ ಡೆನಿಡಾ ಸ್ಕೀಂನಿಂದ ಲ್ಯಾಂಡ್ ಆರ್ಮಿಗೆ ವಹಿಸಿದ್ದ ಅನೇಕ ಕಾರ್ಯ ಕ್ರಮಗಳು ಅರ್ಧಕ್ಕೆ ನಿಂತುಹೋಗಿವೆ. ಡೆನ್ಮಾರ್ಕ್‌ನಿಂದ ವಿಶೇಷ ತಜ್ಞರು ಬಂದು ಪರೀಕ್ಷೆ ಮಾಡಿ ನಿರ್ದಿಷ್ಟ ಪ್ಲಾನ್ ಮತ್ತು ಎಸ್ಟಿಮೇಟ್ ಇಲ್ಲದೆ ಕಾರ್ಯಕ್ರಮ ಹಾಕಿರುವುದರಿಂದ ಅದನ್ನು ಮುಂದು ವರೆಸಬೇಡಿ ಎಂದು ಹೇಳಿದ್ದಾರೆ. ಅಂಥ ಅಸಮರ್ಪಕವಾಗಿ ಮಾಡುವ ಲ್ಯಾಂಡ್ ಆರ್ಮಿಗೆ ದಯವಿಟ್ಟು ಕೆಲಸವನ್ನು ವಹಿಸಬೇಡಿ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಬೋರ್‌ವೆಲ್ ಹಾಕಬೇಕಾದರೆ ಊರಿನ ಪ್ರಮುಖರ ಎದುರಿಗಡೆ ಅವರನ್ನು ಕರೆದುಕೊಂಡುಹೋಗಿ ಹಾಕಬೇಕೆಂದು ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಅದನ್ನು ಬಾಯಿ ಮಾತಿನಲ್ಲಿ ಹೇಳಿದ್ದಾರೋ ಅಥವಾ ಲಿಖಿತ ಮೂಲಕ ಅಧಿಕಾರಿಗಳಿಗೆ ತಿಳಿಸಿದ್ದಾರೋ ಎಂಬುದನ್ನು ತಿಳಿಸಬೇಕು. ಒಂದು ವೇಳೆ ಲಿಖಿತ ಮೂಲಕ ತಿಳಿಸದಿದ್ದರೆ ಆದಷ್ಟು ತೀವ್ರವಾಗಿ ಅವರಿಗೆ ತಿಳಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಲಿಖಿತ ಮೂಲಕ ಆಜ್ಞೆ ಕೊಟ್ಟಿದ್ದೇವೆ.

ಸದಸ್ಯರು.—ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇರೆಯವರು ಆ ವಿಚಾರವನ್ನು ಹೇಳಿದ್ದಾರೆ. ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಪ್ರತಿಯೊಬ್ಬರೂ ಅದನ್ನೇ ಹೇಳುವುದು ಬೇಡ.

ಒಬ್ಬ ಮಾನ್ಯ ಸದಸ್ಯರು.—ಚಾಮರಾಜನಗರ ಪಿ. ಎಚ್. ಇ. ಸಬ್ ಡಿವಿಷನ್ನಿಗೆ ಮೂರು ತಾಲ್ಲೂಕುಗಳು ಸೇರಿವೆ. ನಂಜನಗೂಡು, ಗುಂಡ್ಲುಪೇಟೆ ಮತ್ತು ಚಾಮರಾಜನಗರ ಈ ಮೂರೂ ತಾಲ್ಲೂಕುಗಳು ಅದರಲ್ಲಿ ಬರುತ್ತವೆ, ಅಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ. ಆದರೆ ಆ ಮೂರೂ ತಾಲ್ಲೂಕುಗಳಲ್ಲಿ ಹೆಚ್ಚು ಕಡಿಮೆ ೧೩೦ ಬಾವಿಗಳಿಗೆ ಹ್ಯಾಂಡ್ ಪಂಪ್‌ಗಳನ್ನು ಅಳವಡಿಸಿಲ್ಲ. ಆ ಸಬ್ ಡಿವಿಷನ್‌ನಲ್ಲಿ ೧೦೦ ಪಂಪುಗಳು ಸ್ಟಾಕ್ ಇದ್ದರೂ ಹಳೇ ಪಂಪುಗಳನ್ನು ರೀಪ್ಲೇಸ್ ಮಾಡುವುದಕ್ಕೆ ಅದನ್ನು ಕಳುಹಿಸಿದ್ದಾರೆ, ಹೊಸ ಬಾವಿಗಳಿಗೆ ಅದನ್ನು ಹಾಕುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ಆದೇಶ ಕೊಟ್ಟು ಮೂರು ತಾಲ್ಲೂಕುಗಳಲ್ಲಿ ಬರಗಾಲ ಮುಂದುವರೆಯುತ್ತಿರುವುದರಿಂದ ಸ್ಟಾಕ್ ಇರುವ ಪಂಪ್‌ಗಳನ್ನು ಹೊಸ ಬಾವಿಗಳಿಗೆ ಜೋಡಿಸಬೇಕೆಂದು ಹೇಳುತ್ತೇನೆ. ಶಾಲಾ ಅಂಗಳದಲ್ಲಿ ಮುಂತಾದ ಕಡೆ ಸೋಷಿಯಲ್ ಫಾರೆಸ್ಟ್ರಿ ಪ್ರಕಾರ ಗಿಡಗಳನ್ನು ಹಾಕುತ್ತಿದ್ದಾರೆ. ಆದರೆ ಅಲ್ಲೆಲ್ಲಾ ನೀಲಗಿರಿ ಮರಗಳನ್ನು ಹಾಕುವುದನ್ನು

ಬಿಟ್ಟು ಬೇರೆ ಮರಗಳನ್ನು ಹಾಕುವುದಕ್ಕೆ ಆದೇಶ ಕೊಡಬೇಕು. ನೀಲಗಿರಿ ಗಿಡಗಳನ್ನು ಹಾಕುವುದರಿಂದ ಜನರ ಆರೋಗ್ಯವೂ ಕೆಡುವುದಲ್ಲದೆ ಆ ಭಾಗದ ಭೂಮಿಯಲ್ಲಿ ನೀರು ಇಲ್ಲದಹಾಗೆ ಆಗುತ್ತದೆಂದು ಹೇಳುತ್ತಾರೆ. ಆದ್ದರಿಂದ ಅದು ಆಗದ ಹಾಗೆ ಮಾಡಬೇಕು.

ಶ್ರೀ ಎಂ. ಎಸ್. ಪಾಟೀಲ್.— ಅಧ್ಯಕ್ಷರೇ, ವಿಂಡ್ ಪ್ಲ್ಯಾನ್ ಪಂಪ್‌ಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಹಾಗೂ ಪ್ರತಿಯೊಂದು ಜಿಲ್ಲೆಗೆ ರೂರಲ್ ವಾಟರ್ ಸಪ್ಲೈ ಸೊಸೈಟಿ ಎಂದು ಮಾಡಿ ಅದರ ಮೂಲಕ ಪೂರ್ತಿ ತಾಲ್ಲೂಕಿನ ಒಂದು ಆಡಳಿತವನ್ನು ಆ ಸೊಸೈಟಿ ಮುಖಾಂತರ ನಡೆಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವರದೇಗೌಡ.—ಬೋರ್‌ವೆಲ್‌ಗಳ ಮೇಲೆ ಅದು ಎಷ್ಟು ಆಳ ಹೋಗಿದೆ, ಎಷ್ಟು ನಾಟಂ ಒಳಗೆ ಹೋಗಿದೆ ಎಂಬ ವಿಷಯವನ್ನು ಬರೆಯತಕ್ಕ ವ್ಯವಸ್ಥೆ ಆಗಬೇಕು. ಹಾಗೂ ಆ ಬಾವಿಯಿಂದ ಎಷ್ಟು ಗ್ಯಾಲನ್ ನೀರು ಬರುತ್ತಿದೆ ಎಂಬುದನ್ನೂ ಅದರಲ್ಲಿ ಸೂಚಿಸಬೇಕು. ಏಕೆಂದರೆ ಮುಂಬರುವ ವರ್ಷಗಳಲ್ಲಿ ಮಳೆ ಕಡಿಮೆಯಾಗಿ ಆ ಬಾವಿಗಳಲ್ಲಿ ಬರುವ ನೀರಿನ ಪ್ರಮಾಣವೂ ಕಡಿಮೆಯಾಗುತ್ತದೆ. ಹಾಗೂ ಬಾವಿಯ ವಿವರಗಳನ್ನು ಅದರ ಮೇಲೆ ನಮೂದಿಸುವುದರಿಂದ ಕಳ್ಳತನ ಕೂಡಾ ತಪ್ಪುತ್ತದೆಂದ ನನ್ನ ಸಲಹೆ.

ಶ್ರೀ ಎಂ. ಎಸ್. ಪಾಟೀಲ್.— ಗ್ರಾಮೀಣ ಜನರಿಗೆ ಹೆಚ್ಚು ಯೋಜನೆಗಳಲ್ಲಿ ದೊರಕುವ ಸಲುವಾಗಿ ಹಿಂದಿನ ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಬ್ಯಾಂಕ್‌ಗಳನ್ನು ತೆರೆಯುವ ಕಾರ್ಯಕ್ರಮ ಹಾಕಿಕೊಂಡಿತ್ತು. ಆ ಬ್ಯಾಂಕ್‌ಗಳು ರಾಷ್ಟ್ರೀಕರಣ ಆಗಿದ್ದರೂ ಕೂಡಾ ಅವುಗಳ ಸಮಾಜೀಕರಣವಾಗಿರಲಿಲ್ಲ. ಜನತಾ ಸರ್ಕಾರ ಬಂದ ಮೇಲೆ ಅದು ಆಗಿದೆ. ಆದರೂ ಈ ಬ್ಯಾಂಕುಗಳ ಸೌಕರ್ಯ ಎಷ್ಟೋ ಹಳ್ಳಿಗಳಿಗೆ ನಿಲುಕವೇ ಸರ್ಕಾರದ ಕೆಲವು ಕಾರ್ಯಕ್ರಮಗಳು ಅವರಿಗೆ ದೊರಕುತ್ತಿಲ್ಲವಾದ ಕಾರಣ ರಿಸರ್ವ್ ಬ್ಯಾಂಕ್‌ನಿಂದ ಲೈಸೆನ್ಸ್ ಪಡೆದ ಹೆಚ್ಚು ಹೆಚ್ಚು ಬ್ಯಾಂಕುಗಳು ಹಳ್ಳಿಗಾಡಿನ ಕಡೆ ನಿರ್ಮಾಣವಾಗುವ ಬಗ್ಗೆ ಸರ್ಕಾರ ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತು ಭೂಮಿಯಲ್ಲಿ ಪ್ರತಿದಿನವೂ ನೀರಿನಮಟ್ಟ ಇಳಿಯುತ್ತಿದ್ದು ಇವುಗಳನ್ನು ಏರಿಸುವ ಸಲುವಾಗಿ ಪರ್ಕೊಲೇಷನ್ ಟ್ಯಾಂಕ್‌ಗಳನ್ನು ಕಟ್ಟಿಸಬೇಕೆಂದು ಇಲ್ಲದಿದ್ದ ಪಕ್ಷದಲ್ಲಿ ತಾವು ತೋಡುವ ಕೊಳವೆ ಬಾವಿಗಳಲ್ಲೂ ನೀರು ಸಿಗದೆ ಅವು ನಿಷ್ಪ್ರಯೋಜಕವಾಗಬಹುದೆಂದು ನನ್ನ ಸಲಹೆ. ಹಾಗೂ ಹಿಂದಿನ ಸರ್ಕಾರ ಕೆಲವು ಜನರಿಗೆ ನಿವೇಶನಗಳನ್ನು ಹಂಚಿದ್ದೇವೆಂದು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದು ಅವುಗಳಲ್ಲಿ ಸರ್ವೇ ನಂಬರ್ ಇಲ್ಲ. ಪ್ಲಾಟ್ ನಂಬರ್ ಇಲ್ಲ. ಸುಮ್ಮನೇ ಇವೆಲ್ಲಾ ಪುಸ್ತಕದಲ್ಲಿ ಇವೆಯೋ ಹೊರತು ಅವರಿಗೆ ನಿವೇಶನಗಳು ಹಂಚಿಕೆಯಾಗಿಲ್ಲವಾದ ಕಾರಣ ಇವರಿಗೆ ಪರಿಹಾರವನ್ನು ಒದಗಿಸಬೇಕಾದುದು ನಮ್ಮ ಸರ್ಕಾರದವರ ಕರ್ತವ್ಯವಾಗಿದೆ. ಆದ್ದರಿಂದ ಇವರಿಗೆ ನಿವೇಶನಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಒಬ್ಬ ಮಾನ್ಯ ಸದಸ್ಯರು.— ಈಗ ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗೆ ಆರ್ಟ್ಸ್ ಪದವೀಧರರನ್ನು ತೆಗೆದುಕೊಳ್ಳುತ್ತಿದ್ದು ಆ ಸ್ಥಾನಗಳಿಗೆ ಬಿ.ಎಸ್ಸಿ. (ಅಗ್ರಿಕಲ್ಚರ್) ಪದವೀಧರರನ್ನು ನೇಮಕ ಮಾಡಿದರೆ ಒಳ್ಳೆಯ ಅಭಿವೃದ್ಧಿ ಕೆಲಸಗಳಾಗುತ್ತವೆಂದು ನಾನು ಹೇಳುತ್ತೇನೆ. ಇನ್ನು ಸಮಾಜ ಶಿಕ್ಷಣ ಅಧಿಕಾರಿಗಳಾಗಿ ಯಾರು ಇದ್ದಾರೆ ಅವರು ಕಳೆದ ೨೦ ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರಿಗೆ ಪ್ರಮೋಷನ್ನೇ ಇಲ್ಲ. ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ೨೫–೧–೭೨ರಲ್ಲಿ ಮುಖ್ಯ ಕಾರ್ಯದರ್ಶಿಯವರ ಶಿಫಾರಸ್ಸಿನ ಮೇಲೆ ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಈ ಹುದ್ದೆಗಳನ್ನು ಅಪಾಯಿಂಟ್‌ಮೆಂಟ್ ಮಾಡಬೇಕೆಂದು ಇತ್ತು. ಇಂತಹ ಸಲಹೆ ಇದ್ದರೆ ವ್ಯವಸ್ಥೆ ಮಾಡುವುದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ಅಧ್ಯಕ್ಷರೇ, ಒಬ್ಬ ಮಾನ್ಯ ಸದಸ್ಯರು ಇಂಡಿಯಾ ಮಾರ್ಕ್ ಲೀಪಸ್ ಪ್ರಾಜೆಕ್ಟ್ ಬಗ್ಗೆ ಹೇಳಿದ್ದಾರೆ. ಈ ಪ್ರಕಾರ ಸುಮಾರು ೧,೪೦೦ ಚಿಲ್ಲರೆ ಬೋರ್‌ವೆಲ್‌ಗಳು ಇವೆ. ಅವರು ಏನು ಮಾಡಿದ್ದಾರೆಂದರೆ, ಈ ಪ್ರಾಜೆಕ್ಟ್ ಕ್ಲೋಸ್ ಆದ ಮೇಲೆ ಅವುಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಪಿ.ಡಬ್ಲ್ಯೂ.ಡಿ.ಗೆ ಹ್ಯಾಂಡ್ ಓವರ್ ಮಾಡಿದ್ದಾರೆ. ಈ ವಿಷಯದ ಬಗ್ಗೆಯೇ ನಾನು ಎರಡು ಸಭೆಗಳನ್ನು ಮಾಡಿದ್ದೇನೆ. ಈ ಪ್ರೋಗ್ರಾಂ ಕೆಳಗೆ ಏನು ಕೆಲವು ಆಸ್ಪತ್ರೆ ಕಾಂಪೌಂಡ್ ಒಳಗಡೆ ಇದ್ದವು ಅವುಗಳಿಂದ ಹಳ್ಳಿಗಳ ಸಾರ್ವಜನಿಕರೂ ನೀರು ತೆಗೆದುಕೊಳ್ಳಲು ಅನುಕೂಲವನ್ನು

ಒದಗಿಸುವುದಾದರೆ, ಇವುಗಳಿಗೆ ಸಂಬಂಧಪಟ್ಟ ಇಲಾಖೆಯಿಂದ ವೆಚ್ಚ ಮಾಡತಕ್ಕ ರಿಪೇರಿ ಹಣವನ್ನು ಕೊಟ್ಟು ಈ ಎಲ್ಲಾ ಪಂಪ್‌ಗಳನ್ನು ನಮ್ಮ ಪಿ.ಎಚ್.ಇ. ಸ್ವಾಧೀನಕ್ಕೆ ಕೊಡುವುದಾದರೆ ಆ ಬಗ್ಗೆ ಗಮನ ಹರಿಸಬೇಕೆಂದು ಹೇಳಿದ್ದೇವೆ. ಈ ಬಗ್ಗೆ ಮತ್ತೊಂದು ಮೀಟಿಂಗ್ ಕರೆಯುವವರಿದ್ದೇವೆ.

ಶ್ರೀ ಹುಚ್ಚಮಾಸ್ತಿಗೌಡ.— ತಾವೇ ಈ ಬಗ್ಗೆ ತೀರ್ಮಾನ ಮಾಡಬೇಕು. ರಿಪೇರಿ ಹಣ ಕೊಡಬೇಕೆಂದು ಹೇಳಿದರೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಅವರು ಹಣವನ್ನು ಕೊಡಬೇಕಾಗುತ್ತದೆ. ನಾವೂ ಕೂಡ ಕೆಲವು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಇಂಡಿಯಾ ಪಾಪ್ಯುಲೇಷನ್ ಪ್ರಾಜೆಕ್ಟ್‌ನ ಹಣವನ್ನು ಆರೋಗ್ಯ ಇಲಾಖೆಯವರು ಪಿ.ಡಬ್ಲ್ಯು.ಡಿ. ಗೆ ಕೊಟ್ಟಿರುತ್ತಾರೆ. ಅದಕ್ಕೆ ಬದಲಾಗಿ ನಮಗೆ ಕೊಟ್ಟರೆ. ನಮ್ಮ ಇಲಾಖೆಯ ಸ್ವಾಧೀನಕ್ಕೆ ಕೊಟ್ಟರೆ ಆಗ ನಾವು ನೋಡುತ್ತೇವೆ. ಸಾರ್ವಜನಿಕರ ಆರೋಗ್ಯಕ್ಕೆ ಎಂದು ಏನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಇನ್ನು ರಿಪೇರಿ ಬಗ್ಗೆ ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ. ಹಿಂದೆ ಹಾಕಿಸಿದ್ದ ಪಟೇಲ್ ಚ್ವಾಲಾ ಪೈಪ್‌ಗಳು ಏನಿವೆ ಅವುಗಳ ರಿಪೇರಿಯನ್ನು ಬೆಳಿಗ್ಗೆ ಮಾಡಿ ಬಂದರೆ ಮತ್ತೆ ಸಾಯಂಕಾಲ ಕೆಟ್ಟಿರುವಂತಹ ನಿದರ್ಶನಗಳು ಇವೆ. ಆದ್ದರಿಂದ ಈ ವರ್ಷ ಯುನಿಸೆಫ್ ಹಾಗೂ ಡ್ಯಾನಿಷ್‌ರವರ ಸಹಾಯದಿಂದ ೭ ಜಿಲ್ಲೆಗಳಲ್ಲಿ ಇಂತಹ ಹಳೆಯ ಪೈಪ್‌ಗಳು ಏನು ಇವೆ ಇವೆಲ್ಲವನ್ನೂ ಬದಲಾಯಿಸಿ ಹೊಸದನ್ನು ಹಾಕುವ ಯೋಜನೆಯನ್ನು ಹಾಕಿಕೊಂಡಿದ್ದೇವೆ, ಇನ್ನು ಎರಡು ವರ್ಷಗಳಲ್ಲಿ ಉಳಿದ ೧೧ ತಾಲ್ಲೂಕುಗಳಲ್ಲಿ ಪಟೇಲ್ ಚ್ವಾಲಾ ಪೈಪ್‌ಗಳನ್ನು ತೆಗೆದು ಹೊಸ ಪೈಪ್‌ಗಳನ್ನು ಹಾಕಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಇನ್ನು ಮುಖ್ಯವಾಗಿ ಗ್ರಾಮ ಮಟ್ಟದಲ್ಲಿ ತ್ರೀ ಟೈರ್ ಸಿಸ್ಟಮ್ ಮಾಡಬೇಕೆಂದು ಶಾಸಕರ ಸಮಿತಿ ಸಲಹೆ ಮಾಡಿದೆ. ಅದರ ಪ್ರಕಾರ ಗ್ರಾಮ ಮಟ್ಟದಲ್ಲಿ ಇಬ್ಬರು ಸ್ವಯಂ ಸೇವಕರನ್ನು ತರಬೇತಿ ಮಾಡಿ ಗ್ರಾಮ ಅಧ್ಯಕ್ಷರ ಮುಖಾಂತರ ಸಣ್ಣ ಪುಟ್ಟ ರಿಪೇರಿ ಕೆಲಸವನ್ನು ಮಾಡಿಸಲು ಅವರಿಗೆ ಕಾರ್ಡ್‌ನ್ನು ಕೊಡುವುದು. ಆ ಪಂಪಿನ ಸಾಮಾನುಗಳ ವಿವರವನ್ನು ಆ ಕಾರ್ಡ್‌ನಲ್ಲಿ ನಮೂದು ಮಾಡಲಾಗಿದ್ದು, ಆ ಪಂಪ್‌ನ ಸಣ್ಣ ಪುಟ್ಟ ರಿಪೇರಿಗಳನ್ನು ಅವರು ಮಾಡಿ ಕಾರ್ಡ್‌ನಲ್ಲಿ ನಮೂದಿಸತಕ್ಕದ್ದು. ಯಾವುದೇ ದೊಡ್ಡ ರಿಪೇರಿ ಆಗಬೇಕಾದ ಪಕ್ಷದಲ್ಲಿ ಆ ಬಗ್ಗೆ ಕಾರ್ಡ್‌ನಲ್ಲಿ ಟಿಕ್ ಮಾಡಿ ಅದನ್ನು ತಾಲ್ಲೂಕು ಮಟ್ಟಕ್ಕೆ ಕಳುಹಿಸುವುದು. ಈ ರಿಪೇರಿ ಕೆಲಸ ಮಾಡಲು ತಾಲ್ಲೂಕು ಮಟ್ಟದಲ್ಲಿ ಒಂದು ಮೊಬೈಲ್ ಯುನಿಟ್ ಇರಬೇಕೆಂದು ಹೀಗೆ ೩ ಹಂತದ ಯೋಜನೆ ಮಾಡಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಅದನ್ನು ಕೂಡ ಪರಿಶೀಲನೆ ಮಾಡಲಾಗುತ್ತಿದೆ. ಆದರೆ ರಾಜ್ಯದಲ್ಲಿ ಇದನ್ನು ಪೂರ್ಣ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ ಎಲ್ಲಿ ಹಳೇ ಪೈಪ್‌ಗಳು ಇವೆ ಆ ಜಿಲ್ಲೆಗಳನ್ನು ತೆಗೆದುಕೊಂಡು ಅಲ್ಲಿ ಇದನ್ನು ಪ್ರಾಯೋಗಿಕವಾಗಿ ಮಾಡಬೇಕೆಂದು ಯೋಜನೆ ಮಾಡುತ್ತಿದ್ದೇವೆ. ಇನ್ನು ಅಂತ್ಯೋದಯ ಯೋಜನೆಯ ಅಡಿಯಲ್ಲಿ ಹೆಚ್ಚು ಜನರನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಂತ್ಯೋದಯ ಗ್ರಾಮದಲ್ಲಿ ೨೦ ಜನ ಅಥವಾ ೩೦ ಜನ ಬಡವರು ಇರಬಹುದು. ಅವರಲ್ಲಿ ಲಾಟರಿ ಹಾಕಿ ಯಾರು ೫ ಜನ ಕಡು ಬಡವರು ಇದ್ದಾರೆ ಅವರಿಗೆ ಇದನ್ನು ಕೊಡಬೇಕೇ ಹೊರತು, ಇದರಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲವೆಂದು ಹೇಳುತ್ತೇನೆ. ಇದನ್ನು ಪ್ರಾಯೋಗಿಕವಾಗಿ ಕೆಲವು ತಾಲ್ಲೂಕುಗಳಲ್ಲಿ ತರಬೇಕಾಗುತ್ತದೆ. ಹಾಗೂ ಇದಕ್ಕಾಗಿಯೇ ಪ್ರತ್ಯೇಕ ಇಲಾಖೆ ಬೇಕೆಂದು ಹೇಳುತ್ತಿದ್ದಾರೆ. ನಮ್ಮ ಅಭಿವೃದ್ಧಿ ಇಲಾಖೆಯಲ್ಲಿ ನಮ್ಮ ಸಿಬ್ಬಂದಿಯೇ ಇಲ್ಲ. ಎಲ್ಲಿಲ್ಲಿಯ ಸಿಬ್ಬಂದಿಗಳೆಲ್ಲ ಅಭಿವೃದ್ಧಿ ಇಲಾಖೆಗೆ ಬಂದಿರುತ್ತಾರೆ, ಇದಕ್ಕಾಗಿಯೇ ಹಾಕು ವಿಚಾರ ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.— ೧೦ ವರ್ಷಗಳಾದರೂ ಪ್ರಮೋಷನ್ ಬರುವುದಿಲ್ಲ. ಯಾರು ಬಿ.ಡಿ.ಒ. ಆಗಿ ಬರುತ್ತಾರೆ ಅವರು ಬಿ.ಡಿ.ಒ. ಆಗಿಯೇ ಸಾಯಬೇಕು. ಆದ್ದರಿಂದ ಇಲ್ಲಿಗೆ ಯಾರು ತಾನೇ ಬರುತ್ತಾರೆ ? ಅವರು ಒಂದು ಕೆಲಸದಲ್ಲಿ ಎಷ್ಟು ದಿವಸ ಇರಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ೧೯೭೭ನೇ ಇಸವಿಯಿಂದ ಬಿ.ಡಿ.ಒ ಕೆಲಸಕ್ಕೆ ನೇಮಕಾತಿ ಮಾಡುವುದನ್ನು ನಿಲ್ಲಿಸಿದ್ದೇವೆ. ಈಗ ಸುಮಾರು ೧೬ ಅಥವಾ ೩೨ ಜನ ಬಿ.ಡಿ.ಒ.ಗಳು ನಮ್ಮ ಇಲಾಖೆಗೆ ಸೇರಿದವರು ಇರಬಹುದು.

ಶ್ರೀ ಕೆ. ಎಚ್. ರಂಗನಾಥ್.— ಕೆಲವರು ೮-೧೦ ವರ್ಷಗಳಿಂದ ಡೆವಲಪ್‌ಮೆಂಟ್ ಅಸಿಸ್ಟೆಂಟ್ಸ್ ಆಗುವುದಕ್ಕೆ ಕಾಯುತ್ತ ಕುಳಿತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಈ ಇಲಾಖೆಯಲ್ಲಿ ಸಮುದಾಯ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ವಿಸ್ತರಣಾಧಿಕಾರಿಗಳು ಇಲ್ಲ ಎಂದು ನಾನು ಹೇಳುತ್ತೇನೆ. ತಾವು ಪ್ರಮೋಷನ್ ಬಗ್ಗೆ ಹೇಳುತ್ತಿದ್ದೀರಿ. ನಾನು ಹೇಳುತ್ತಿರುವುದು ಇಲಾಖೆಯಲ್ಲಿ ಬಿ.ಡಿ.ಒ.ಗಳನ್ನು ತೆಗೆದುಕೊಂಡಿಲ್ಲ ಎಂದು ೧೯೭೭ ರಿಂದ ನಾವು ಬಿ.ಡಿ.ಒ.ಗಳನ್ನು ನೇಮಕ ಮಾಡಿಲ್ಲ. ಇನ್ನು ರೂರಲ್ ಎಂಜಿನಿಯರಿಂಗ್ ಸರ್ವೀಸನ್ನು ಹೇಗೆ ಮಾಡುತ್ತೀರೆಂದು ಕೇಳಿದ್ದಾರೆ. ಅದೂ ಕೂಡಾ ಪರಿಶೀಲನೆಯಲ್ಲಿ ಇದೆ. ಈ ಬಗ್ಗೆ ಶಾಸಕ ಮಿತ್ರರೂ ಕೂಡಾ ಹೇಳಿದ್ದಾರೆ. ಈ ಬಗ್ಗೆ ಪೂರ್ಣ ವರದಿ ಬಂದ ಮೇಲೆ ಎಲ್ಲ ವಿಚಾರ ಮಾಡೋಣವೆಂದು ನಾನು ಹೇಳುತ್ತೇನೆ,

ಮತ್ತೆ ಗ್ರಾಮೀಣ ನೀರು ಸರಬರಾಜು ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಕಡೆ ಕೆಲಸ ಆಗಿಲ್ಲ ಎನ್ನತಕ್ಕದ್ದನ್ನು ಹೇಳಿದ್ದಾರೆ, ಅದನ್ನು ಒಪ್ಪುತ್ತೇನೆ. ಆದರೆ ಅಗಾಧವಾದ ಕೆಲಸ ಗಳನ್ನು ಮಂಜೂರು ಮಾಡಿದಾಗ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಲ್ಲ. ಆ ದೃಷ್ಟಿಯಿಂದ ನಿರ್ಧಾರ ಮಾಡಿ ೪೬೦ ಕೆಲಸಗಳನ್ನು ಮಾಡಿ ಪೂರ್ಣಗೊಳಿಸಬೇಕೆಂದು ನಿರ್ಧಾರ ಮಾಡಿದೆ. ಎಲ್ಲಾ ಕೆಲಸಗಳನ್ನೂ ಆದ್ಯತೆಯ ಮೇಲೆ ತೆಗೆದುಕೊಂಡಿದ್ದೇವೆ, ಅದನ್ನು ಪೂರ್ಣಗೊಳಿಸುತ್ತೇವೆ ಎನ್ನತಕ್ಕ ಭರವಸೆ ಕೊಡುತ್ತೇನೆ. ಇನ್ನು ೧೮ ಪರ್ಸೆಂಟ್ ರಿಜರ್ವೇಷನ್ ಹಣವೇನಿದೆ ಆದನ್ನು ಖರ್ಚು ಮಾಡಿದ್ದೇವೆ, ಖರ್ಚು ಮಾಡಿಲ್ಲವೆಂದು ಅಲ್ಲ. ಕೆಲವು ಕಡೆ ಸಭಾಧ್ಯಕ್ಷರೇ, ಅದು ಏನಾಗಿದೆ ಎಂದರೆ ತಾಲ್ಲೂಕ್ ಬೋರ್ಡ್‌ಗಳ ಆಫೀಸ್‌ಗಳಲ್ಲಿ ೧೮ ಪರ್ಸೆಂಟ್ ಹಣವನ್ನು ಕೊಟ್ಟಿಲ್ಲ ಇದು ಕೂಡ ನನ್ನ ಗಮನಕ್ಕೆ ಬಂದಿದೆ. ಇನ್ನು ಕೆಲವು ಕಡೆ ಸ್ಕೂಲ್‌ಗಳಲ್ಲಿ ಸ್ಲೇಟ್. ಪಠ್ಯಪುಸ್ತಕಗಳನ್ನು ಕೊಟ್ಟಿರುವ ಕಡೆ ಹಣವನ್ನು ವೆಚ್ಚ ಮಾಡಿದ್ದಾರೆ, ಹರಿಜನ ಹಾಸ್ಟಲ್‌ಗಳನ್ನು ಮತ್ತು ಹರಿಜನರಿಗೆ ಹಾಸ್ಟಲ್ ಬಿಲ್ಡಿಂಗ್‌ಗಳನ್ನು ಕಟ್ಟಿಕೊಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಆದರೆ ಇದು ಎಲ್ಲಾ ಪೂರ್ಣವಾಗಿ ಆಗಿಲ್ಲ, ಆ ದೃಷ್ಟಿಯಿಂದ ಹೆಚ್ಚು ಖರ್ಚು ಆಗಿಲ್ಲವೆಂದು ಕಂಡು ಬರುತ್ತದೆ. ಆದುದರಿಂದ ೧೮ ಪರ್ಸೆಂಟ್ ಏನು ವೆಚ್ಚ ಮಾಡುವುದು ಇದೆ. ಅದಕ್ಕೆ ಹಣ ಇಲ್ಲದೇ ಇದ್ದರೆ ಯಾವುದೇ ರೂಪದಲ್ಲಿ ಯಾದರೂ ಗ್ರಾಂಟ್‌ನ್ನು ಪಡೆದುಕೊಂಡು ವೆಚ್ಚ ಮಾಡಬೇಕೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದ್ದೇನೆ.

ಇನ್ನು ಡಿ.ಪಿ.ಎ ಪಿ. ಪ್ರೋಗ್ರಾಂ ಪ್ರಕಾರವಾಗಿ ಸಾಮೂಹಿಕ ಬಾವಿಗಳ ಕಾರ್ಯ ಪ್ರಾರಂಭವಾಗಿಲ್ಲ ವೆಂದು ಹೇಳಿದರು ಆದರೆ ಮೈನರ್ ಇರಿಗೇಷನ್ ವರ್ಕ್ ಏನಿದೆ ಅದು ಜೂನ್ ೬ ರಿಂದ ತೆಗೆದುಕೊಂಡು ಪ್ರಾರಂಭ ಮಾಡಿದ್ದೇವೆ. ನೀವು ಸಚಿವರಾಗಿದ್ದೀರಿ, ನಿಮಗೂ ಗೊತ್ತಿದೆ, ಕೇಂದ್ರದಿಂದ ಬರತಕ್ಕ ಹಣವಿರುವುದರಿಂದ ಕೇಂದ್ರದ ಒಂದು ಮಂಜೂರಾತಿ ಪಡೆಯಬೇಕು. ರಾಜ್ಯಮಟ್ಟದಲ್ಲಿ ಇದಕ್ಕೆ ಮಂಜೂರಾತಿಯನ್ನು ಪಡೆದಿದ್ದೇವೆ. ಕೇಂದ್ರಕ್ಕೆ ನಮ್ಮ ಆ್ಯಕ್ಷನ್ ಪ್ಲಾನನ್ನು ಕಳುಹಿಸಿದ್ದೇವೆ. ಆದರೂ ಕೂಡ ನಮ್ಮ ರಾಜ್ಯ ಮಟ್ಟದಲ್ಲಿ ಇದರ ಬಗ್ಗೆ ಏನೂ ಹೆಚ್ಚಿನ ಬದಲಾವಣೆಯಾಗುವುದಿಲ್ಲ. ಅದಷ್ಟು ಬೇಗ ಇದರ ಬಗ್ಗೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಇನ್ನು ಲ್ಯಾಂಡ್ ಆರ್ಮಿಗೆ ಒಪ್ಪಿಸಬಾರದೆಂದು ಹೇಳಿದರು. ಅವರಿಗೆ ಒಪ್ಪಿಸದಿದ್ದರೆ ಯಾರು ಮೆಯಿಂಟೇನ್ ಮಾಡುತ್ತಾರೆ ? ಇವತ್ತು ಏನಾಗಿದೆ ಎಂದರೆ ಕೆಲವು ಕಡೆಗಳಲ್ಲಿ ವಾಟರ್ ಟ್ಯಾಂಕ್ ಗಳನ್ನು ಕಟ್ಟುವುದಕ್ಕೆ ಕಂಟ್ರ್ಯಾಕ್ಟರ್‌ಗಳೇ ಬರುತ್ತಿಲ್ಲ, ಅಂಥಾ ಕಡೆಗಳಲ್ಲಿ ಈ ಲ್ಯಾಂಡ್ ಆರ್ಮಿಯನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವುದೇ ನನ್ನ ತತ್ವವಾಗಿಟ್ಟುಕೊಂಡು ಇದನ್ನು ಮಾಡುತ್ತಿದ್ದೇವೆ ಎನ್ನತಕ್ಕ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಇನ್ನು ಜನತಾ ಮನೆಗಳಿಗೆ ಕಳ್ಳಿಮರವನ್ನು ಹಾಕಿದ್ದಾರೆಂದು ಹೇಳಿದ್ದಾರೆ. ಅದು ನನಗೆ ಸಂಬಂಧಪಟ್ಟದ್ದು ಅಲ್ಲ. ಆದರೂ ಕೂಡ ಇದರ ಬಗ್ಗೆ ನಾವು ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಹಿಂದೆ ಏನಾಗಿತ್ತು ಎಂದರೆ ಅದು ಜಂಗ್ಲಿ ಮರ ಎಂದು ಹೇಳಿದರೆ ಅದು ಯಾವ ಮರ ಎನ್ನುವ ಬಗ್ಗೆ ಡಿ.ಎಫ್ ಒ. ರವರಿಗೆ ಆಜ್ಞೆ ಮಾಡಿದ್ದೇವೆ. ಅವರು ಸರ್ಟಿಫೈ ಮಾಡಿದ್ದನ್ನು ಬಿಟ್ಟು ಬೇರೆ ಮರವನ್ನು ಉಪಯೋಗಿಸಕೂಡದೆಂದು ಆಜ್ಞೆ ಮಾಡಿದ್ದೇವೆ. ಇನ್ನು ಕಡೂರು ತಾಲ್ಲೂಕ್ ರಾಜ್ಯ ವಲಯದಿಂದ ಕೇಂದ್ರ ವಲಯಕ್ಕೆ ಸೇರಿಸಿಕೊಂಡಿದ್ದಾರೆಂದು ಹೇಳಿದ್ದಾರೆ, ಅದರ ಬಗ್ಗೆ ನಾವು ಏನೂ ಮಾಡು ವುದಕ್ಕಾಗುವುದಿಲ್ಲ. ಇನ್ನು ಸಹಾಯ ಧನದ ಪ್ರಮಾಣವನ್ನು ಹೆಚ್ಚಿಸಬೇಕೆಂದು ಹೇಳಿದರು. ಐ.ಆರ್.ಡಿ.ಪಿ. ಪ್ರೋಗ್ರಾಂನಲ್ಲಿ ಎಸ್.ಟಿ.ಯವರಿಗೆ ೧೦೦ಕ್ಕೆ ೫೦ ಸಹಾಯಧನವಿದ್ದರೆ ಶೆಡ್ಯೂಲ್

ಕ್ಯಾಸ್ಟ್‌ನವರಿಗೆ ೨೫ ಪರ್ಸೆಂಟ್ ಇದೆ. ಶೆಡ್ಯೂಲ್ ಕ್ಯಾಸ್ಟ್‌ನವರು ಸಹ ಅದೇ ವರ್ಗದ ಹಂತದಲ್ಲಿರತಕ್ಕವರಾಗಿದ್ದರೂ ಸಹ ಸಹಾಯ ಧನ ಕೊಡುವಾಗ ವ್ಯತ್ಯಾಸವಿದೆ. ಇದನ್ನು ಹೆಚ್ಚಿಸಬೇಕೆನ್ನುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಸಲಹೆ ಕಳುಹಿಸಿದ್ದೆವು. ಆದರೆ ದುರಾದೃಷ್ಟವಶಾತ್ ಕೇಂದ್ರ ಸರ್ಕಾರದವರು ನಮ್ಮ ಸಲಹೆಯನ್ನು ಒಪ್ಪುತ್ತಿಲ್ಲ. ಮತ್ತೆ ಬೇಕಾದರೆ ನಾವು ಎಲ್ಲಾ ಸೇರಿ ಪ್ರಯತ್ನ ಮಾಡೋಣ.

ಶ್ರೀ ಪಿ. ಎಸ್. ರಾಣೆ.—ನಾನು ಕೇಳಿದ್ದು ಅಂತ್ಯೋದಯದ ಕಾರ್ಯಕ್ರಮದಲ್ಲಿ ೫೦ ಪರ್ಸೆಂಟ್ ಮಾಡುತ್ತೀರಾ ಎಂದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲ. ಐ.ಆರ್.ಡಿ.ಪಿ. ಪ್ರೋಗ್ರಾಂ ಬಗ್ಗೆ ಎಸ್.ಸಿ. ಯವರಿಗೂ ೫೦ ಪರ್ಸೆಂಟ್ ಮಾಡುವ ಬಗ್ಗೆ ಕೇಳಿದ್ದೆವು. ಆದರೆ ಕೇಂದ್ರ ಸರ್ಕಾರದವರು ಒಪ್ಪಿಲ್ಲ.

ಇನ್ನು ಬಾವಿಗಳ ಆಳ ಎಷ್ಟಿದೆ ಮತ್ತು ಎಷ್ಟು ನೀರು ಬರುತ್ತದೆ ಎನ್ನತಕ್ಕದರ ಬಗ್ಗೆ ಹ್ಯಾಂಡ್ ಪಂಪ್‌ಗಳ ಮೇಲೆ ಬರೆಯಬೇಕೆಂದು ಹೇಳಿದರು. ಆದರೆ ನಾವು ಒಂದು ಹೊಸ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಮಾಡಿದ್ದೇವೆ. ಅದು ಏನೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಬಾವಿಗಳು ಇವೆ? ಅದರ ಆಳ ಎಷ್ಟಿದೆ? ಎಷ್ಟು ನೀರು ಬರುತ್ತದೆ ಎನ್ನುವುದರ ಬಗ್ಗೆ ಹ್ಯಾಂಡ್ ಪಂಪ್‌ಗಳ ಮೇಲೆ ಬರೆಯುವುದಕ್ಕಿಂತ, ಪ್ರತಿಯೊಂದು ಊರಿನಲ್ಲಿಯೂ. ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ಒಂದು ಲಾಗ್ ಬುಕ್‌ನಲ್ಲಿ ಬರೆದಿಟ್ಟಿದ್ದರೆ ಯಾರಿಗಾದರೂ ಸಾರ್ವಜನಿಕರಿಗೆ ಬೇಕಾಗಿದ್ದರೆ ಅವರು ನೋಡಿಕೊಳ್ಳಲು ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಹಾಕಿಕೊಂಡಿರುತ್ತೇವೆ. ಆದುದರಿಂದ, ಹ್ಯಾಂಡ್ ಪಂಪ್‌ಗಳ ಮೇಲೆ ಬರೆಸುವುದಕ್ಕೆ ಪ್ರಯತ್ನ ಮಾಡುವ ಯೋಜನೆಯನ್ನು ಬಿಟ್ಟು ಬಿಟ್ಟಿದ್ದೇವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಈಗ ನಮ್ಮ ತಾಲ್ಲೂಕಿನಲ್ಲಿ ಎರಡು ರಿಗ್‌ಗಳು ಕೆಲಸ ಮಾಡುತ್ತಿವೆ. ಫ್ಯಾನಿಶನ್ ರಿಗ್‌ಗಳು ಜನತಾ ಕಾಲೋನಿಯಲ್ಲಿ ಕೆಲಸ ಮಾಡುತ್ತಿವೆ. ಅಲ್ಲಿ ಕೆಲಸ ಪೂರೈಸಿದ ಮೇಲೆ ಆ ರಿಗ್‌ಗಳನ್ನು ಇತರ ಪಕ್ಕದ ವಿಲೇಜ್‌ಗಳಿಗೂ ಉಪಯೋಗಿಸುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಒಪ್ಪಂದದ ಪ್ರಕಾರವಾಗಿ ಅವರು ಕೆಲಸ ಮಾಡಬೇಕಾಗಿರುತ್ತದೆ. ಜನತಾ ಕಾಲೋನಿಗಳಲ್ಲಿ ಅವರು ರಿಗ್‌ಗಳನ್ನು ಹಾಕಿದ ಮೇಲೆ ಬೇರೆ ಕಡೆಗೆ ಕೊಡುವುದಕ್ಕೆ ಬರುವುದಿಲ್ಲ.

ಚೇರ್ಮನ್.—ಈಗ ಬೇಡಿಕೆಗಳನ್ನು ಮಂಜೂರು ಮಾಡಲು ಸಭೆಯ ಅನುಮತಿಗಾಗಿ ಕೋರುತ್ತೇನೆ. ಪ್ರಸ್ತಾವವೇನೆಂದರೆ, "ಮೂವತ್ತೊಂದನೇ ಮಾರ್ಚ್ ೧೯೮೪ರ ಅಂತ್ಯದೊಳಗೆ ದೊರಕಲಿರುವ ೫೬, ೫೭, ೫೮ ಮತ್ತು ೫೯ ನೇ ಸಂಖ್ಯೆಯ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವು ಅಂಗಿಕರಿಸಲ್ಪಟ್ಟಿತು.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರು ಮಾಡಿದ ಬೇಡಿಕೆಗಳನ್ನು ಈ ಕೆಳಗೆ ನಮೂದು ಮಾಡಲಾಗಿದೆ.)

"ಅಭಿಯಾಚನೆ ಕ್ರಮಾಂಕ ೫೬–ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫.೦೪,೫೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೭–ಸಾಮುದಾಯಿಕ ಅಭಿವೃದ್ಧಿ

೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೦೦,೦೫.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿ ಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೮–ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೧೧೯೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿ ಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೯–ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ.

೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦,೪೯,೧೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.''

ಚೇರ್ಮನ್..—ಈಗ ಸಭೆಯು ಮೇಲೆದ್ದು ಪುನಃ ನಾಳೆ ಬೆಳಿಗೆ ೧೧ ಗಂಟೆಗೆ ಸೇರುವುದು.

ಸದನವು ಸಂಜೆ ಐದು ಗಂಟೆ ಐವತ್ತೊಂದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಶುಕ್ರವಾರ, ದಿನಾಂಕ ೧೯ನೇ ಆಗಸ್ಟ್ ೧೯೮೩ ರಂದು ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಿತು